
# ಶ್ರೀನಿವಾಸ ಜಿ. ಕಪ್ಪಣ್ಣ

ಶಶಿಧರ ಭಾರೀಘಾಟ್



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಶ್ರೀನಿವಾಸ ಜಿ. ಕಪ್ಪಣ್ಣ

ಶಶಿಧರ ಭಾರಿಘಾಟ್

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Srinivasa G. Kappanna :**
A Monograph in Kannada by **Shashidhara Bharighat**
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : ೭೨
ಬೆಲೆ : ರೂ. ೬೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ರೀಗಲ್ ಪ್ರಿಂಟ್ ಸರ್ವೀಸ್**
ಬೆಂಗಳೂರು – ೫೬೦ ೦೨೬
ಮೊ. : ೯೯೬೪೩೫೧೬೫೫

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ

ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ದೈತ್ಯ ಸಂಘಟಕ ಶ್ರೀನಿವಾಸ ಜಿ.ಕಪ್ಪಣ್ಣ**

ನಿರ್ದೇಶನ, ಬೆಳಕಿನ ವಿನ್ಯಾಸದಲ್ಲಿ ಅಪಾರ ಪ್ರತಿಭೆ ಇದ್ದರೂ, ರಂಗ ಪರಿವಾರವನ್ನು ಕಟ್ಟಲು ಹೆಚ್ಚು ಶ್ರಮಿಸಿದವರು ಶ್ರೀನಿವಾಸ ಜಿ.ಕಪ್ಪಣ್ಣ. ದೇಶ ವಿದೇಶಗಳ ಸಂಘ ಸಂಸ್ಥೆ ಹಾಗೂ ಸರ್ಕಾರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆಂದು ಮೀಸಲಾಗಿ ನೆನೆಗುದಿಗೆ ಬಿದ್ದಿರುವ ಅಪಾರ ಸಂಪತ್ತನ್ನು ಹೊರಗೆಳೆದು ರಂಗಭೂಮಿ ಚಟುವಟಿಕೆಗೆ ಹಂಚಿದ ದೈತ್ಯ ರಂಗಕರ್ಮಿ ಅವರು.

ಕಪ್ಪಣ್ಣನವರ ರಂಗ ಒಡನಾಡಿ ಶಶಿಧರ ಭಾರಿಘಾಟ್ ಅವರು ಕಪ್ಪಣ್ಣನವರ ಕ್ರಿಯಾಶೀಲತೆಯನ್ನು ಸಂಕ್ಷಿಪ್ತವಾಗಿ ಸರಳವಾಗಿ ಇಲ್ಲಿ ಪರಿಚಯಿಸಿದ್ದಾರೆ. ಕೆಲಸ ಮಾಡುವವರಿಗೆ ಇದು ಪ್ರೇರಣೆಯಂತಿದೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

**ಎಲ್.ಬಿ.ಶೇಖ (ಮಾಸ್ತರ)**
ಅಧ್ಯಕ್ಷರು

**ಸದಸ್ಯರು**

| | |
|---|---|
| ರಾಜಪ್ಪ ಕಿರಗಸೂರು | ಉಮೇಶ ಸಾಲಿಯಾನ್ |
| ಕಲ್ಪನಾ ನಾಗನಾಥ್ | ವಿ.ಎನ್.ಅಕ್ಕಿ |
| ಪಿ.ತಿಪ್ಪೇಸ್ವಾಮಿ | ಬಿ.ಎಂ.ರಾಮಚಂದ್ರ |
| ಎಂ.ಎಸ್.ಗುಣಶೀಲನ್ | ಎನ್.ಕೆ.ರಾಮಕೃಷ್ಣ |
| ಮುದ್ದಣ್ಣ ರಟ್ಟೆಹಳ್ಳಿ | ಎ.ವರಲಕ್ಷ್ಮಿ |
| ಅನ್ನಪೂರ್ಣ ಸಾಗರ | ಎಸ್.ಕೆ.ಕೊನೆಸಾಗರ |
| ಗುಡಿಹಳ್ಳಿ ನಾಗರಾಜ | ಹಾಲ್ಕುರಿಕೆ ಶಿವಶಂಕರ್ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಲ್.ಎಚ್.ರಂಗನಾಥಪ್ಪ |
| ಶ್ರೀಪಾದ ಭಟ್ | ಕೆ.ಜಗುಚಂದ್ರ |

ರಿಜಿಸ್ಟ್ರಾರ್:
**ಸಿದ್ದರಾಜು**

ಯೋಜನಾ ಸಹಾಯಕರು:
**ಕೆ.ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ**

# ಲೇಖಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಒಂದು ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದೆ. ಅದು 'ರಂಗಸಂಪನ್ನರು ಮಾಲಿಕೆ'ಯ ಮುಂದುವರಿಕೆ. ಕನ್ನಡ ರಂಗ ಭೂಮಿಯ ಅಭಿವೃದ್ಧಿಗೆ ಶ್ರಮಿಸಿದ ಕಲಾವಿದರು, ತಂತ್ರಜ್ಞರು, ನಾಟಕಕಾರರು, ಕಂಪನಿ ಮಾಲೀಕರು, ಸಂಘಟಕರು ಮುಂತಾದವರ ಪರಿಚಯ ಪುಸ್ತಕ ಮಾಲಿಕೆ. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು ತಮ್ಮ ಅವಧಿಯಲ್ಲಿ ಈ ರೀತಿಯ ಹತ್ತಾರು ಪುಸ್ತಕಗಳನ್ನು ತರುವುದು ಒಂದು ವಾಡಿಕೆಯಾಗಿದೆ. ಇದು ನಿರ್ದಿಷ್ಟ ವ್ಯಕ್ತಿಯ ಬಗ್ಗೆ ಸ್ಥೂಲ ಪರಿಚಯವನ್ನು ನೀಡುತ್ತಲೇ, ಜೊತೆಗೆ ಆ ವ್ಯಕ್ತಿ ತಾನು ತೊಡಗಿಕೊಂಡಿದ್ದ ಕಾಲಘಟ್ಟದ ರಂಗಭೂಮಿಯ ಯಾವತ್ತು ಪರಿಚಯವನ್ನು ಮಾಡಿಕೊಡುತ್ತದೆ. ಇದರ ಮೂಲಕ ಒಂದು ರಂಗ ಇತಿಹಾಸ ದಾಖಲಾಗುತ್ತದೆ.

ಎಲ್.ಬಿ. ಶೇಖಮಾಸ್ತರ್ ಅವರ ನೇತೃತ್ವದ ಅಕಾಡೆಮಿಯ ನನಗೆ ಖ್ಯಾತ ರಂಗಸಂಘಟಕ, ಬೆಳಕು ವಿನ್ಯಾಸಕಾರ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರ ವ್ಯಕ್ತಿ ಚಿತ್ರವನ್ನು ಬರೆದುಕೊಡುವ ಜವಾಬ್ದಾರಿಯನ್ನು ನೀಡಿತು. ಅದಕ್ಕಾಗಿ ಅಧ್ಯಕ್ಷರಿಗೆ ಹಾಗೂ ಪ್ರಕಟಣಾ ಸಮಿತಿಗೆ ನಾನು ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ನಮ್ಮ ಪೀಳಿಗೆಯವರು ರಂಗಭೂಮಿ ಪ್ರವೇಶ ಪಡೆಯುವ ಮುನ್ನವೇ ಶ್ರೀನಿವಾಸ ಕಪ್ಪಣ್ಣ ಅಂತವರು ಅದಾಗಲೆ ಕನ್ನಡ ರಂಗಭೂಮಿಯ ಅವಿಭಾಜ್ಯ ಅಂಗವಾಗಿದ್ದರು. ಅವರ ರಂಗ ಸಾಹಸಗಳಿಂದಾಗಿ ರಂಗವಲಯದಲ್ಲಿ ಜನಜನಿತರಾಗಿದ್ದರು. ಆಗಷ್ಟೇ ರಂಗಭೂಮಿ ಪ್ರವೇಶ ಪಡೆದುಕೊಂಡ ನನ್ನಂತಹವರಲ್ಲಿ ವಿಸ್ಮಯ ಮೂಡಿಸಿದ್ದರು.

ಇಂತಹ ವಿಸ್ಮಯದಿಂದಲೇ ಕಪ್ಪಣ್ಣ ಅವರನ್ನು ನಾನು ನೇರವಾಗಿ ನೋಡಿದ್ದು, ಅವರ ಮಾತುಗಳನ್ನು ಕೇಳಿದ್ದು ಶ್ರೀ. ಬಿ.ವಿ ಕಾರಂತರು ಮೈಸೂರಿನಲ್ಲಿ 1987ರಲ್ಲಿ ನಡೆಸಿದ ರಾಜ್ಯಮಟ್ಟದ ಕಾಲೇಜು ಅಧ್ಯಾಪಕರ ರಂಗ ತರಬೇತಿ ಶಿಬಿರದಲ್ಲಿ, ಸಂಘಟನೆಯ ಬಗ್ಗೆ ಮಾತನಾಡಲು, ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಬಂದಿದ್ದರು.

1988ರಲ್ಲಿ ನಾನು ಬೆಂಗಳೂರಿಗೆ ನನ್ನ ವೃತ್ತಿ ಸಂಬಂಧವಾಗಿ ಮೈಸೂರಿನಿಂದ ಸ್ಥಳಾಂತರಗೊಂಡಾಗ, ಮತ್ತೆ ನನಗೆ ಕಪ್ಪಣ್ಣನವರ ಸಂಪರ್ಕ ದೊರೆತಿದ್ದು, ಅವರು ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆಗಿದ್ದಾಗ. ಅಂದಿನ ದಿನಗಳಲ್ಲಿ ನಾಟಕ ಅಕಾಡೆಮಿಗಾಗಿ ಪ್ರಶಸ್ತಿ ಪುರಸ್ಕೃತರ ಬಗ್ಗೆ ಪರಿಚಯ ಪುಸ್ತಕವನ್ನು ಸಂಪಾದಿಸುವ ಹೊಣೆಯನ್ನು ನನಗೆ ನೀಡಿ ಕರ್ನಾಟಕದ ರಂಗಭೂಮಿಯ ಪರಿಚಯಕ್ಕೆ ಕಾರಣರಾದರು. ಅದರೊಟ್ಟಿಗೆ ಕಾಲಕಾಲಕ್ಕೆ ಕನ್ನಡ ರಂಗಭೂಮಿಯ ಆಗುಹೋಗುಗಳ ಬಗ್ಗೆ, ಚಟುವಟಿಕೆಗಳನ್ನು ಅರಿಯುವ ಒಂದು ಮನಸ್ಥಿತಿಯನ್ನು ನನ್ನಲ್ಲಿ ಮೂಡಿಸಿದರು.

ಅಂದಿನಿಂದ ಈವರೆಗೆ ಸುಮಾರು ಹತ್ತಿರ ಹತ್ತಿರ ಮೂರು ದಶಕಗಳಿಂದ ಕಪ್ಪಣ್ಣನವರು ತೊಡಗಿಸಿಕೊಂಡ ಹೆಚ್ಚು ಕಡಿಮೆ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಾನು ಭಾಗಿಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಒಬ್ಬ ಸಾಂಸ್ಕೃತಿಕ ಸಂಘಟಿಸನಿರಬೇಕಾದ ಬದ್ಧತೆ, ಸಿದ್ಧತೆ, ಸೃಜನಶೀಲತೆಗಳನ್ನು, ಇದೆಲ್ಲಾ ಕಪ್ಪಣ್ಣ ಅವರಲ್ಲಿ ಮೇಳೈಸಿರುವುದನ್ನು ಕಾಣುತ್ತಾ ಬೆಳೆದೆ.

ಕಣ್ಣಿಗೆ ಕಂಡಷ್ಟು, ಅವರೊಂದಿಗೆ ಮಾತನಾಡಿದಷ್ಟು, ಅವರ ಬಗ್ಗೆ ಅವರ ಗೆಳೆಯರು, ಅಭಿಮಾನಿಗಳು ಹಂಚಿಕೊಂಡದರಲ್ಲಿ ಕೆಲವಷ್ಟು ಅಂಶಗಳನ್ನು ಸೇರಿಸಿ ಅವರ ವ್ಯಕ್ತಿ ಚಿತ್ರ ರಚಿಸಲು ಪ್ರಯತ್ನಿಸಿದ್ದೇನೆ.

ಇದು ಅವರ ಪೂರ್ಣ ಜೀವನ ಚರಿತ್ರೆಯಲ್ಲ, ಅವರ ಸಾಂಸ್ಕೃತಿಕ ಬದುಕಿನ ಒಂದು ಇಣುಕು ನೋಟ.

ಈ ಕಿರು ಹೊತ್ತಿಗೆಯನ್ನು ಬರೆಯಲು ಅವಕಾಶ ನೀಡಿದ ಕರ್ನಾಟಕ ನಾಟಕ ಅಕಾಡೆಮಿಗೆ, ಬರೆಯಲು ಅನುಮತಿ ನೀಡಿದ ಕಪ್ಪಣ್ಣ ಅವರಿಗೆ, ಅಗತ್ಯ ಛಾಯಾಚಿತ್ರಗಳು, ಮಾಹಿತಿ ಒದಗಿಸಿದ ಲಲಿತಾ ಕಪ್ಪಣ್ಣ ಮೇಡಂ ಹಾಗೂ ಸ್ನೇಹಾ ಕಪ್ಪಣ್ಣ ಅವರಿಗೆ, ಕಪ್ಪಣ್ಣ 60 ಸಂದರ್ಭದಲ್ಲಿ ಸುಂದರ ಪ್ರಕಾಶನದವರು ಪ್ರಕಟಿಸಿದ 'ಕಪ್ಪಣ್ಣ ರಂಗಾವತರಣ' ಪುಸ್ತಕದಲ್ಲಿನ ಕಪ್ಪಣ್ಣ ಸಂಗಾತಿಗಳಿಗೆ ನಾನು ಅಭಾರಿಯಾಗಿದ್ದೇನೆ.

ಅಂದವಾಗಿ ಮುದ್ರಿಸಿದ ರೀಗಲ್ ಪ್ರಿಂಟ್ಸ್‌ನ ವೆಂಕಟೇಶ್ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಿದ ಅಕಾಡೆಮಿ ಸದಸ್ಯ ಗುಡಿಹಳ್ಳಿ ನಾಗರಾಜ ಅವರಿಗೆ ಧನ್ಯವಾದಗಳು.

**– ಶಶಿಧರ್ ಭಾರಿಘಾಟ್**

# ಶ್ರೀನಿವಾಸ ಜಿ ಕಪ್ಪಣ್ಣ

**ಬ**ದುಕಿನಲ್ಲಿ ಬೆಳಕನ್ನರಿಸಿ, ಕಣ್ತುಂಬ ಕನಸು ಹೊತ್ತ, ನಿರಂತರ ಪರಿಶ್ರಮ, ಛಲದಿಂದ ಕಲಾ ಸಂಸ್ಕೃತಿಗೆ ಬೆಳಕ ಬೀರುವ ಕಾಯಕ ಹಿಡಿದು ಯಶಸ್ವಿಯಾದ ಬಾಲಕನೊಬ್ಬನ ಹೆಜ್ಜೆ ಗುರುತುಗಳು ಈ ಲೇಖನ.

ಹೆಜ್ಜೆ ಗುರುತುಗಳಲ್ಲಿ ಬಾಲಕನ ಪೂರ್ವಾಪರಗಳನ್ನು ಹುಡುಕುತ್ತಾ ಹೊರಟರೆ ನಾವು ಮೊದಲು ಹೋಗಿ ತಲುಪುವುದು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡೆಯೂರು ಬಳಿಯ ಜಲಧಿಗೆರೆ ಎಂದು ಒಂದು ಸಣ್ಣ ಗ್ರಾಮಕ್ಕೆ.

ಜಲಧಿಗೆರೆಯಿಂದ ಬೆಂಗಳೂರಿಗೆ ಬಂದಿದ್ದ ಒಂದು ಬಡ ಕುಟುಂಬದ ಬಾಲಕ ಇಂದು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬಹಳ ವಿಶಿಷ್ಟ ಹೆಸರು ಮಾಡಿರುವ ಬೆಳಕು ಸಂಯೋಜಕ, ಸಂಘಟಕ, ವಿನ್ಯಾಸಕಾರ ಇತ್ಯಾದಿ...

ಖ್ಯಾತ ಸಾಹಿತಿಯೊಬ್ಬರು ಒಂದು ಸಂದರ್ಭದಲ್ಲಿ ಉದ್ಧರಿಸಿದ್ದರು "ಇವರು ಬೆಂಗಳೂರಿಗೆ (ಆಕಾಶಕ್ಕೆ) ಚಪ್ಪರ ಹಾಕಿಸಬಿಡೆಂದರೆ, ಅಂತಹ ಚಪ್ಪರ ಹಾಕಿಸಬಲ್ಲ ಅಪಾರ ಶಕ್ತಿಯುಳ್ಳ ಕ್ರಿಯಾಶೀಲ" ಎಂದು. ಬೆಂಗಳೂರಿಗೆ ಚಪ್ಪರ ಹಾಕಿಸುತ್ತಾರೋ ಇಲ್ಲವೋ, ಕಳೆದ 6 ದಶಕಗಳ ನೂರಾರು ಕಾರ್ಯಕ್ರಮಗಳಿಗೆ ತಮ್ಮ ಸಂಘಟನಾ ಚಾತುರ್ಯದಿಂದ ಆಸರೆ ಯಾದವರು, ಯಶಸ್ಸಿನ ರುವಾರಿಯಾದವರು, ಬುನಾದಿಯಾದವರು ಇವರೇ. ಆ ವ್ಯಕ್ತಿ ಯಾರೆಂದು ಈಗಾಗಲೇ ನಿಮಗೆ ತಿಳಿದು ಹೋಗಿದೆ ಅಲ್ಲವೇ? ಸಾಂಸ್ಕೃತಿಕ ರಂಗದ ಕಿಂಚಿತ್ತು ಒಲವಿದ್ದವರಿಗೆ, ಒಂದಲ್ಲ ಒಂದು ಬಾರಿ ಅವರೊಂದಿಗೆ ಒಡನಾಡುವ – ನಾಡು, ನುಡಿ, ಸಂಸ್ಕೃತಿಯ ಕಟ್ಟುವಿಕೆಯ ಪ್ರಕ್ರಿಯೆಯಲ್ಲಿ ಕೈ ಜೋಡಿಸಿದ ಅನುಭವ ಆಗೇ ಆಗಿರುತ್ತದೆ.

ಅವರೇ ಖ್ಯಾತ ರಂಗಸಂಘಟಕ, ಬೆಳಕು ವಿನ್ಯಾಸಕಾರ, ಅಪಾರ ಜೀವನ ಪ್ರೀತಿ, ಸಾಂಸ್ಕೃತಿಕ ಬದ್ಧತೆ ಹೊಂದಿರುವ ಜನಸ್ನೇಹಿ ಶ್ರೀನಿವಾಸ ಜಿ ಕಪ್ಪಣ್ಣ.

## ಬಡತನದ ಬೇಗೆ

ನಗರದ ಕೃಷ್ಣರಾವ್ ಪಾರ್ಕ್‌ನ ಬಳಿಯ ಅರ್ಮುಗಂ ಸರ್ಕಲ್, ಅಲ್ಲಿದ್ದ ಭಾರತ್ ಡೈರಿ (ಈಗ ಅಲ್ಲೊಂದು ಭವ್ಯವಾದ ಅಪಾರ್ಟ್‌ಮೆಂಟ್ ತಲೆ ಎತ್ತಿದೆ) ಕಾಂಪೌಂಡ್ ಒಳಗೆ ಇವರ ಅಜ್ಜಿ, ತಂದೆ, ತಾಯಿಯ ಜೊತೆಗೆ ಒಂದು ಮನೆ ಮಾಡಿಕೊಂಡು ವಾಸವಾಗಿದ್ದರು. ಅಜ್ಜಿ ಹತ್ತಿರದಲ್ಲೇ ಇದ್ದ ಡಾ. ಶಂಕರಮ್ಮಾಳ್ ಎಂಬುವವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ತಂದೆ ಶ್ರೀ ಗಿರಿಯಪ್ಪ ಇಂದಿನ ವಾರ್ತಾ ಇಲಾಖೆ ಕಚೇರಿ ಇರುವ ಹತ್ತಿರ ಇದ್ದ ಕಾರ್ಮಿಕ ಇಲಾಖೆಯ ಕಚೇರಿಯಲ್ಲಿ ಡಿಗ್ರೂಪ್ ನೌಕರರಾಗಿದ್ದರು. ಹಳ್ಳಿಯಲ್ಲಿದ್ದು ಮಾಡುವುದೇನು..? ಅಲ್ಲೇನು ಆಸ್ತಿ, ಅಂತಸ್ತು ಅಥವಾ ಹತ್ತಾರು ಎಕರೆ ಭೂಮಿಯೇ..? ಬಡತನದ ಕುಟುಂಬ, ಜೀವನ ನಿರ್ವಹಣೆಗಾಗಿ ಪಟ್ಟಣಕ್ಕೆ ಬರುವುದು ಅನಿವಾರ್ಯವಾಗಿತ್ತು. ಎರಡು ಹೊತ್ತು ಊಟಕ್ಕೆ ತೊಂದರೆ ಇಲ್ಲದಿದ್ದರೂ, ಉಡಲು ಬಟ್ಟೆ, ವಾಸಕ್ಕೆ ಮನೆ, ಅದೂ ಬಾಡಿಗೆಗೆ, ಅಂದಿನ ಕೌಟುಂಬಿಕ ಆದಾಯದಲ್ಲಿ ಕಷ್ಟವೇ ಆಗಿತ್ತು. ಹಾಗಾಗಿ ಅಜ್ಜಿಯ ಸಲಹೆಯ ಮೇರೆಗೆ ಶ್ರೀನಿವಾಸನ ತಾಯಿ ಶ್ರೀಮತಿ ಜಯಮ್ಮ ವಾಣಿವಿಲಾಸ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದರು. ಶ್ರೀ ಗಿರಿಯಪ್ಪ ಮತ್ತು ಶ್ರೀಮತಿ ಜಯಮ್ಮ ದಂಪತಿಗಳ ಮೊದಲ ಮಗನಾಗಿ ಶ್ರೀನಿವಾಸ್ ಜಿ. ಕಪ್ಪಣ್ಣ 1948 ಫೆಬ್ರವರಿ 13 ರಂದು ಜನಿಸಿದರು. ಇವರಿಗೆ ಇಬ್ಬರು ಸಹೋದರರು ಮತ್ತು ಒಬ್ಬ ಸೋದರಿ ಇದ್ದಾರೆ.

ಅಂದು ಇವರು ವಾಸಿಸುತ್ತಿದ್ದ ಮನೆಯನ್ನು, ಮನೆಯೆಂದು ಕರೆಯಬೇಕೋ..? ಅದು ಗುಡಿಸಲೇ, ಗ್ಯಾರೇಜ್, ಏನನ್ನೋಬೇಕು ಅಂತಹ ಶಿಥಿಲವಾದ ಸೂರು, ಒಂದು ಕೊಠಡಿಯಲ್ಲಿ ವಾಸ, ಶೌಚಾಲಯ, ವಿದ್ಯುತ್ ಸೌಕರ್ಯವಿಲ್ಲದ ಒಂದು ಕಚ್ಚಾಮನೆ, ಇವರ ಪಾಲಿಗೆ ಅರಮನೆ.

ನಗರದ ಲಕ್ಷಣವೇ ಅಂತಹದ್ದು, ಓದುಕನ್ನರಿಸಿ ಬಂದವರಿಗೆ, ಸವಾಲು ಎಸೆಯುತ್ತದೆ. ಸವಾಲು ಎದುರಿಸುವವರಿಗೆ ಸಾಂತ್ವನ ನೀಡುತ್ತದೆ. ಶ್ರಮಜೀವಿಗಳಿಗೆ, ಕ್ರಿಯಾಶೀಲರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿಯಾಗುತ್ತದೆ. ಬಾಲಕ ಶ್ರೀನಿವಾಸನಿಗೆ ದೊರೆತದ್ದು ಅಂತಹ ಒಂದು ಅವಕಾಶ. ಹತ್ತಿರದಲ್ಲೇ ಕೃಷ್ಣರಾವ್ ಪಾರ್ಕ್‌ನ ಬಳಿ ಇದ್ದ ಯಡೆಯೂರು ಸರ್ಕಾರಿ ಪ್ರಾಥಮಿಕ ಶಾಲೆ 1,2 ಮತ್ತು 3ನೇ ತರಗತಿಯನ್ನು ಇದೇ ಶಾಲೆಯಲ್ಲಿ ಓದಿದರು. ಹರಕು ಬಟ್ಟೆ, ಮೇಲೊಂದು ಅಂಗಿ, ಮುಗ್ಧಬಾಲಕ ಓದಿನಲ್ಲಿ ಚುರುಕು, ಅಪಾರ ಗ್ರಹಣಶಕ್ತಿ.

## ವಿಜಯಶಾಲೆಯ ಅಂಗಳದಲ್ಲಿ

ಅದೇ ಸುಮಾರಿಗೆ ಶ್ರೀ ಚಂದ್ರಶೇಖರಯ್ಯ ವಿಜಯ ಮಾಧ್ಯಮಿಕ ಶಾಲೆಯನ್ನು ತೆರೆದರು. ಚುರುಕು ಬಾಲಕ ವಿಜಯಶಾಲೆ ಸೇರಿದರು. ನಾಲ್ಕನೇ ತರಗತಿಗೆ, ಅಲ್ಲ

ನೇರವಾಗಿ 5ಕ್ಕೆ. ಅಲ್ಲಿಂದ 10ನೇ ತರಗತಿಯವರೆಗೆ ವಿಜಯಾಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಶ್ರೀನಿವಾಸ 10ನೇ ತರಗತಿಯನ್ನು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರು. ಮುಂದೆ ಪದವಿಪೂರ್ವ ತರಗತಿಗೆ ನ್ಯಾಷನಲ್ ಕಾಲೇಜು ಸೇರ್ಪಡೆ, ಇಲ್ಲಿಂದ ಮುಂದೆ ಅವರ ಬದುಕಿಗೆ ಹೊಸ ತಿರುವು ದೊರೆಯಿತು.

ಶ್ರೀನಿವಾಸ ಎಲ್ಲಾ ಬಡತನದ ಕುಟುಂಬದ ಮಕ್ಕಳಂತೆ ಬೀದಿಯಲ್ಲಿ ಬೆಳೆದರು. ಹಾಗೆಯೇ ಬೀದಿಯಲ್ಲಿ ಬೆಳಕಿನಲ್ಲಿ ಓದಿದರು. ಮನೆಯಲ್ಲಿ ವಿದ್ಯುತ್ ದೀಪವಿಲ್ಲ. ಸೀಮೆಎಣ್ಣೆ ಬುಡ್ಡಿ ದೀಪ. ತನ್ನ ಓದಿನ ಹಸಿವು ತೀರಿಸಿಕೊಳ್ಳಲು ಇವರು ಆಶ್ರಯಿಸಿದ್ದು ದಾರಿದೀಪದ ಬೆಳಕನ್ನು, ಓದಿನ ಜೊತೆಗೆ ಯಡೆಯೂರಿನಲ್ಲಿ ಟೆಂಟ್ ಸಿನಿಮಾದ ಆಕರ್ಷಣೆ ಸಿನಿಮಾ ಆಸೆಗಳನ್ನು ಹುಟ್ಟಿಸುತ್ತದೆ.! ಕನಸುಗಳನ್ನು ಬಿತ್ತುತ್ತದೆ.! ಅಂದು ಬರುತ್ತಿದ್ದ ಎಂಜಿಆರ್, ಶಿವಾಜಿಗಣೇಶನ್ ಅವರ ಅಭಿನಯದ ತಮಿಳು ಚಿತ್ರಗಳ ಅಭಿಮಾನಿ ಶ್ರೀನಿವಾಸ. ತನ್ನ ದೊಡ್ಡಪ್ಪನ ಮಗ ಕೃಷ್ಣ ಅವರೊಂದಿಗೆ ಸಿನಿಮಾಗಳನ್ನು ನೋಡುತ್ತಾ ಬೆಳೆದರು.

ಚಿತ್ರಮಾಧ್ಯಮದ ಆಕರ್ಷಣೆಯೇ ಅಂತಹದ್ದು, ನೋಡುನೋಡುತ್ತಲೇ ಕನಸು ಬಿತ್ತುತ್ತದೆ. ಹೀಗೆ ಬಿತ್ತಿದ ಕನಸು ಕೆಲವರ ಮನಸ್ಸಿನಲ್ಲಿ ಮೊಳೆತು, ಬದುಕಿಗೆ ದಾರಿದೀಪವಾಗುತ್ತದೆ. ಹಾಗೆಯೇ ಕೆಲವರಿಗೆ ಅಡ್ಡದಾರಿ ಹಿಡಿಸುತ್ತದೆ. ಬಡತನದ ಕಷ್ಟ ಸುಖವುಂಡ ಬಾಲಕ ಶ್ರೀನಿವಾಸ ಸಿನಿಮಾಗಳ ಮೂಲಕವೂ ಸಕಾರಾತ್ಮಕ ಅಂಶಗಳನ್ನೇ ಕಲಿತ. ಮನದಲ್ಲಿ ಬದುಕಿನ ಬಗ್ಗೆ ಅದಮ್ಯ ಆಸೆ, ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಸಂಕಲ್ಪ. ಈ ಸಂಕಲ್ಪ ಸಾಧಿತವಾಗಬೇಕಾದರೆ ಉತ್ತಮ ಶಿಕ್ಷಣ ಪಡೆಯಬೇಕೆಂಬ ತಿಳುವಳಿಕೆ. ಇಂತಹ ತಿಳುವಳಿಕೆಯ ಬೆಳಕಿನಲ್ಲಿ ಬಾಲಕ ಓದುತ್ತಲೇ ಅಷ್ಟೋ ಇಷ್ಟೋ ಹಣ ಸಂಪಾದನೆಗೂ ಪ್ರಯತ್ನಿಸಿದ. ಅದರ ಪರಿಣಾಮವೇ ಬೆಂಗಳೂರು ರೇಸ್‌ಕೋರ್ಸ್‌ನಲ್ಲಿ ಗೇಟ್‌ಕೀಪರ್ ಕೆಲಸ, 7ರೂ ಸಂಬಳ. ವಿಐಪಿ ಗೇಟ್ ಕಾಯುವುದು ಈ ಬಾಲಕನ ಕೆಲಸ. ಅದೇ ಸಂದರ್ಭದಲ್ಲಿ ಗಾಂಧೀಜಿಯವರ ಬಗ್ಗೆ ತಿಳಿಯಲು ಹೊರಟು ಅವರ ಆತ್ಮಕಥೆ 'ಎಕ್ಸ್‌ಪಿರಿಮೆಂಟ್ ವಿತ್ ಟ್ರೂತ್' 'ಸತ್ಯಾನ್ವೇಷಣೆ'ಯ ಕಥೆಯನ್ನು ಓದಿದ್ದು, ಅವರ ಮೇಲೆ ಅಪಾರ ಪರಿಣಾಮ ಬೀರಿತು. ಬಿಸಿಲಿನಲ್ಲಿ ಗೇಟ್ ಕಾಯುತ್ತ ಅಂದರೆ ರೇಸ್‌ನಿಂದ ಹಣ ಮಾಡಲು ಬರುವ ಬಡವರನ್ನು ಆಟೋ ಡ್ರೈವರ್‌ಗಳನ್ನು ಒಂದೆಡೆ ನೋಡುತ್ತಲೇ, ಮೋಜಿಗಾಗಿ ತಮ್ಮ ಶ್ರೀಮಂತಿಕೆಯ ಪ್ರದರ್ಶನ, ಧನದದರ್ಪ, ಮೋಜಿನಾಟದಲ್ಲಿ ಹಣ ದುಂದು ಮಾಡುವ ಇನ್ನೊಂದು ವರ್ಗವನ್ನು ಕಾಣುತ್ತಾ ಬದುಕಿನ ವಿಪರ್ಯಾಸವನ್ನು ಅರಿಯಲು ಪ್ರಯತ್ನ ಪಟ್ಟ ಶ್ರೀನಿವಾಸ ತನ್ನ ಮನೆಯಿಂದ ರೇಸ್‌ಕೋರ್ಸ್‌ಗೆ ನಡೆದೇ ಹೋಗುತ್ತಿದ್ದ.

ಮನೆಯ ಹಿರಿಯಮಗ, ಮನೆಯಲ್ಲಿ ಹಾಸುಹೊಕ್ಕಾಗಿದ್ದ ಬಡತನದ ಕುಟುಂಬಕ್ಕೆ ತನ್ನಿಂದ ಕಿಂಚಿತ್ತು ಸಹಾಯವಾಗಲಿ, ಎಂಬ ಭಾವನೆ ಶ್ರೀನಿವಾಸನಿಗೆ. ತಾವು ಹಣಕಟ್ಟಿದ ಕುದುರೆಯ ಗೆಲುವನ್ನೇ ಬಯಸುವವರ ಎಲ್ಲಾ ಚಹರೇಗಳು ಬಾಲಕನ ವಯಸ್ಸಿನ ಮೇಲೆ ಏನೇನೋ ಪರಿಣಾಮ ಬೀರುತ್ತಿತ್ತು. ಆದರೆ ತನ್ನ ಹಿನ್ನೆಲೆ, ಮಿತಿ ಅರಿತಿದ್ದ ಶ್ರೀನಿವಾಸ ದೂರದ ಬದುಕಿನತ್ತ ಕಣ್ಣು ನೆಟ್ಟಿದ್ದ. ಹಾಗೆಯೇ ಇವರ ಬದುಕನ್ನರಸಿ ಬಂದ ಅವಕಾಶಗಳು, ಇವರ ಬದುಕಿನಲ್ಲಿ ಬಂದು ಪ್ರಭಾವ ಬೀರಿದ ಅನೇಕ ಮಹನೀಯರು ಒಂದು ಸುಂದರ ಮೂರ್ತಿ ಮೈತಳೆಯಲು ಕಾರಣರಾದರು.

## ರಂಗ ಪ್ರವೇಶದ ಪುಳಕ

ಶಾಲೆಯಲ್ಲಿ ಚಟುವಟಿಕೆಯಿಂದ ಇರುತ್ತಿದ್ದ ಶ್ರೀನಿವಾಸ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ತಪ್ಪಿಸುತ್ತಿರಲಿಲ್ಲ. ಎಲ್ಲದರಲ್ಲೂ ಪಾಲ್ಗೊಳ್ಳಬೇಕೆಂಬ ಹುಮ್ಮಸ್ಸು. ಅಷ್ಟೇ ಅಲ್ಲ, ಎಲ್ಲದರಲ್ಲೂ ಪ್ರಥಮ ಸ್ಥಾನ ಪಡೆಯಬೇಕೆಂಬ ಹಂಬಲ. ಶಾಲೆಯ ವಾರ್ಷಿಕೋತ್ಸವ, ವಾರ್ಷಿಕ ಕ್ರೀಡಾಕೂಟ, ಸಂಗೀತ ಕಾರ್ಯಕ್ರಮ, ಅಂತರ ಶಾಲಾ ಚರ್ಚಾಸ್ಪರ್ಧೆ, ಸ್ಕೌಟ್ಸ್ ಮತ್ತು ರೆಡ್‌ಕ್ರಾಸ್, ಫ್ಯಾನ್ಸಿಡ್ರೆಸ್, ನಾಟಕಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಶ್ರೀನಿವಾಸ ಓದಿನಲ್ಲೂ ಮುಂದಿದ್ದರು. ಯಾವಾಗಲೂ ಪ್ರಥಮ ಇಲ್ಲವೇ ದ್ವಿತೀಯ ರ್‍ಯಾಂಕ್ ಪಡೆಯುತ್ತಿದ್ದ ಶ್ರೀನಿವಾಸ ವಿಜಯಶಾಲೆಯಲ್ಲಿ ಪ್ರಪ್ರಥಮವಾಗಿ ಮಾಡಿದ ನಾಟಕ 'ಧ್ವಜವಂದನೆ'. ನಾಟಕದ ದಿನ ತಲೆ ತುಂಬಾ ಹರಳೆಣ್ಣೆ ಬಳಿದುಕೊಂಡು ಶಾಲೆಗೆ ಬಂದಿದ್ದ ಎಣ್ಣೆ ತಲೆಯಿಂದ ಮುಖದ ಮೇಲೆ ಧಾರಕಾರವಾಗಿ ಸುರಿಯುತ್ತಿತ್ತು. 'ಪ್ರಭಾತ್ ಕಲಾವಿದರು' ಸಂಸ್ಥೆಯ ಹಿರಿಯ ಕಲಾವಿದ, ನಾರಾಯಣರಾವ್ ಮೇಕಪ್ ಮಾಡಲು ಬಂದಿದ್ದರು. ಎಣ್ಣೆ ಬಸಿಯುತ್ತಿದ್ದ ಬಾಲಕ ಶ್ರೀನಿವಾಸನ ಮುಖನೋಡಿ, ಕೋಪದಿಂದ ಒಂದು ಏಟನ್ನು ಕೊಟ್ಟಿದ್ದರೆಂದು ಶ್ರೀನಿವಾಸ್ ಅವರು ಸ್ವಾರಸ್ಯಕರವಾಗಿ ನೆನಪಿಸಿಕೊಳ್ಳುತ್ತಾರೆ.

ಪ್ರೌಢಶಾಲೆಯಲ್ಲಿ ನಡೆಯುತ್ತಿದ್ದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಇವರಲ್ಲಿ ಬಹುಮುಖಿ ಆಸಕ್ತಿಯನ್ನು ಬೆಳೆಸಿದವು. ಅಭಿನಯ, ಸಂಗೀತ, ಚರ್ಚಾಸ್ಪರ್ಧೆ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಾ ತಮ್ಮ ಶಾಲಾದಿನವನ್ನು ಅರ್ಥಪೂರ್ಣವಾಗಿ ಕಳೆದರು. ಇವರ ಎಲ್ಲಾ ಚಟುವಟಿಕೆಗಳಿಗೆ ಒತ್ತಾಸೆಯಾಗಿ ನಿಂತವರು ಕನ್ನಡದ ಮೇಷ್ಟು ಪಿ.ಎಸ್. ಚಿದಂಬರಮೂರ್ತಿ.

ಆಚಾರ್ಯ ಪಾಠಶಾಲೆ ಸಂಘಟಿಸುತ್ತಿದ್ದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಅಂತರಶಾಲಾ ಚರ್ಚಾಸ್ಪರ್ಧೆ, ಫ್ಯಾನ್ಸಿಡ್ರೆಸ್ (ಛದ್ಮವೇಷ)ಸ್ಪರ್ಧೆ, ಸಮೂಹಗಾಯನದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದರು. ಮಡಿಕೆಯನ್ನೇ 'ಘಟಂ' ರೂಪದಲ್ಲಿ ಸಮೂಹಗಾಯನದಲ್ಲಿ

ನುಡಿಸುತ್ತಿದ್ದ ಮುಗ್ಧತೆ ಇವರದಾಗಿತ್ತು. ಶ್ರೀನಿವಾಸ ಅವರ ಶಾಲಾ ಜೀವನದಲ್ಲಿ ಪ್ರಭಾವ ಬೀರಿದವರು, ಚಂದ್ರಶೇಖರಾಧ್ಯ, ನಾರಾಯಣರಾವ್, ಮುಂತಾದವರು. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಇವರು ಅಸಮಾನ್ಯ ಪ್ರತಿಭಾವಂತರು. ಜೀವನ ನಿರ್ವಹಣೆಯು ಕಷ್ಟಕೋಟಲೆಗಳ ನಡುವೆ ಸುಸ್ಥಿರ ಬದುಕಿಗಾಗಿ ಹೋರಾಡುತ್ತಿದ್ದುದು, ಅವರ ಬದುಕನ್ನು ಮತ್ತಷ್ಟು ಹೋರಾಟದೆಡೆಗೆ ಪ್ರೇರೇಪಿಸುತ್ತಿತ್ತು. ಭವಿಷ್ಯವನ್ನು ಮಹತ್ತರವಾಗಿಸಿಕೊಳ್ಳುವ ಒಬ್ಬ ಹದಿ ಹರೆಯದ ಬಾಲಕನ ಕಷ್ಟ ಸಹಿಷ್ಣುತೆಯ ಮನೋಭಾವ. ತಮ್ಮೆಲ್ಲಾ ಕಷ್ಟಕೋಟಲೆ, ಬದುಕಿಗಾಗಿ ಹೋರಾಟದ ನಡುವೆ 2ನೇ ರ್‍ಯಾಂಕ್ ಪಡೆದ ಶ್ರೀನಿವಾಸ ತಮ್ಮ ಅಂಕಗಳ ಬಲದಿಂದ ಪದವಿಪೂರ್ವ ಶಿಕ್ಷಣಕ್ಕೆ ಪ್ರತಿಷ್ಠಿತ ನ್ಯಾಷನಲ್ ಕಾಲೇಜು ಮೆಟ್ಟಿಲು ಹತ್ತಿದರು.

## ನ್ಯಾಷನಲ್ ಕಾಲೇಜು ಎಂಬ ಶಿಕ್ಷಣಕಾಶಿಯಲ್ಲಿ

ನ್ಯಾಷನಲ್ ಕಾಲೇಜಿನಲ್ಲಿ ಅಂದಿನ ಕಾಲದಲ್ಲಿ ಸೀಟು ದೊರಕುವುದೆಂದರೆ ಸಾಮಾನ್ಯದ ಮಾತಲ್ಲ, ಉತ್ತಮ ಅಂಕಗಳನ್ನಷ್ಟೇ ಪಡೆಯಬೇಕು. ಪೈಪೋಟಿಯುಗದ ಪರಿಚಯವಾಗಿದ್ದು ಆವಾಗಲೇ, ಆದರೆ ವಿಜಯಾ ಹೈಸ್ಕೂಲ್‌ನಲ್ಲಿ 2ನೇ ರ್‍ಯಾಂಕ್ ಪಡೆದಿದ್ದ ಇವರಿಗೆ ಸೀಟ್ ಸಿಗುವುದು ಕಷ್ಟವೇನು ಆಗಲಿಲ್ಲ. ನ್ಯಾಷನಲ್ ಕಾಲೇಜು ನಾಟಕದ ಕಾಲೇಜು ಎಂದೇ ಪ್ರಸಿದ್ಧ. ನ್ಯಾಷನಲ್ ಕಾಲೇಜು ಪ್ರಾಂಶುಪಾಲರಾಗಿದ್ದವರು ಖ್ಯಾತ ಗಾಂಧಿವಾದಿ ಡಾ.ಹೆಚ್.ನರಸಿಂಹಯ್ಯ, ಹೆಚ್.ಎನ್. ಎಂದೇ ಪ್ರಸಿದ್ಧರಾದ ನರಸಿಂಹಯ್ಯನವರು ಹೊಸೂರಿನಂತಹ ಕುಗ್ರಾಮದಿಂದ ಬೆಂಗಳೂರಿಗೆ ಬಂದು ನ್ಯಾಷನಲ್ ಹೈಸ್ಕೂಲ್ ಸೇರಿ, ಅಲ್ಲಿಯೇ ಪದವಿ ಮುಗಿಸಿ, ಮುಂದೆ ಎಂ.ಎಸ್.ಸಿ. ಮಾಡಿ, ವಿದೇಶದಲ್ಲಿ ಪಿಹೆಚ್‌ಡಿ ಮಾಡಿ, ನ್ಯಾಷನಲ್ ಕಾಲೇಜುನಲ್ಲೇ ಪ್ರಾಧ್ಯಾಪಕರಾಗಿ, ಮುಂದೆ ಕಾಲೇಜಿನ ಪ್ರಾಂಶುಪಾಲರಾಗಿ ಈ ಶಿಕ್ಷಣ ಸಂಸ್ಥೆಯನ್ನು ಕಟ್ಟಿದವರು. ಬಾಲ್ಯದಲ್ಲೇ ಸ್ವಾತಂತ್ರ್ಯಚಳುವಳಿಯಲ್ಲಿ ಭಾಗವಹಿಸಿ, ಮಹಾತ್ಮಗಾಂಧಿಯವರ, ಪ್ರಭಾವಕ್ಕೆ ಒಳಗಾದವರು. ಗಾಂಧೀಜಿಯವರೊಂದಿಗೆ ಮಾತನಾಡಿದ, ಅವರ ಮಾರ್ಗದರ್ಶನ ಪಡೆದ ಪುಣ್ಯ ಪುರುಷ, ಇಂತಹವರ ಅಂತರಂಗದ ಶಿಷ್ಯನಾಗುವ ಸೌಭಾಗ್ಯ ಶ್ರೀನಿವಾಸ ಅವರದಾಗಿತ್ತು. ಅವರ ಬದುಕಿನ ಸುಕೃತ ಕ್ಷಣಗಳು ನ್ಯಾಷನಲ್ ಕಾಲೇಜಿನಲ್ಲಿ ಶ್ರೀನಿವಾಸರವರಿಗೆ ದಕ್ಕಿದವು. ಅವರ ವ್ಯಕ್ತಿತ್ವಕ್ಕೆ ಒಂದು ಚೌಕಟ್ಟು, ಬದುಕಿಗೊಂದು ಗುರಿ, ಸಾಂಸ್ಕೃತಿಕ ದಾಹಕ್ಕೆ ಪ್ರೋತ್ಸಾಹದ ಒರತೆ ನ್ಯಾಷನಲ್ ಕಾಲೇಜಿನಲ್ಲಿ ದೊರೆತಿತ್ತು.

60ರ ದಶಕದಲ್ಲಿ ನ್ಯಾಷನಲ್ ಕಾಲೇಜಿನಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಕನ್ನಡ ಹವ್ಯಾಸಿ ರಂಗಭೂಮಿಗೆ ಹೊಸ ಶಕ್ತಿ, ಹೊಸರೂಪ, ಹೊಸ ಚಿಂತನೆಗಳನ್ನು, ಕನಸುಗಳನ್ನು ತುಂಬುತ್ತಿದ್ದ ಕಾಲ. ಈ ಕಾಲೇಜಿನಲಿ ಓದುವ ವಿದ್ಯಾರ್ಥಿಗಳಿಗೆ ನಾಟಕ

ಕಲೆಯನ್ನು ಒಂದು ಮುಖ್ಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ತೊಡಗಿಸಿಕೊಳ್ಳಲು ಅವಕಾಶವಿರುತ್ತಿತ್ತು. ಈ ಪರಂಪರೆ ಇಂದಿಗೂ ಮುಂದುವರೆದಿದೆ. ಅಂದು ಡಾ. ಹೆಚ್. ನರಸಿಂಹಯ್ಯ ಹುಟ್ಟು ಹಾಕಿದ ಅಂತರ ತರಗತಿ ನಾಟಕ ಸ್ಪರ್ಧೆಗಳು ಇಂದಿಗೂ ನಡೆಯುತ್ತಿವೆ. ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆ, ನ್ಯಾಷನಲ್ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಮತ್ತು ನ್ಯಾಷನಲ್ ಪದವಿ ಕಾಲೇಜುಗಳಲ್ಲಿ ಇಂದಿಗೂ ನಡೆಯುತ್ತಿರುವ ಅಂತರ ತರಗತಿ ನಾಟಕ ಸ್ಪರ್ಧೆಗಳು ರಂಗಪರಂಪರೆಯನ್ನು ಮುಂದುವರೆಸುತ್ತಿವೆ. ಜೊತೆಗೆ ಅನೇಕ ರಂಗಕಲಾವಿದರನ್ನು ತಂತ್ರಜ್ಞರು, ಸಂಘಟಕರನ್ನು ಕನ್ನಡ ರಂಗಭೂಮಿಗೆ ನೀಡಿದೆ.

## ನಾಣಿಯವರ ಗರಡಿಯಲ್ಲಿ....

ಅಂತರ ತರಗತಿ ನಾಟಕ ಸ್ಪರ್ಧೆಯಲ್ಲಿ 'ಮಹಾರಾತ್ರಿ' ನಾಟಕದಲ್ಲಿ 'ಚನ್ನ' ಪಾತ್ರದಲ್ಲಿ ಅಭಿನಯಿಸಿದ ಶ್ರೀನಿವಾಸ, ನಾಣಿ ಎಂಬ ರಂಗ ಸ್ಪರ್ಶಮಣಿಯ ಸಂಪರ್ಕಕ್ಕೆ ಬಂದರು. ರಂಗಗುರು, ನೇಪಥ್ಯ ತಜ್ಞ, ನಿರ್ದೇಶಕ, ಸಂಘಟಕ ಬಹುಮುಖಿ ಪ್ರತಿಭೆಯ 'ಗ್ರೀನ್ ರೂಂ' ನಾಣಿ ಅವರ ದೃಷ್ಟಿಯ ಪರಿಧಿಗೆ ಬಂದರೆಂದರೆ ಮುಗಿಯಿತು. ಅದು ಒಂದು ರಂಗಭೂಮಿಯ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾದಂತೆ. ಚನ್ನನ ಪಾತ್ರಧಾರಿಯಾಗಿ ಪ್ರಶಸ್ತಿ ಗಿಟ್ಟಿಸಿದ ಶ್ರೀನಿವಾಸ್ ನಾಣಿಯವರ ಪ್ರಭಾವಲಯದ ಸೆಳೆತಕ್ಕೆ ಸಿಲುಕಿದರು. ತಮ್ಮ ರಂಗಗುರುವೆಂದು ಸ್ವೀಕರಿಸಿ, ನಾಟಕ ಪ್ರಕಾರದ ಒಳ ಹೊರಗುಗಳನ್ನು ಅರಿತರು. ನ್ಯಾಷನಲ್ ಕಾಲೇಜಿನ ಪ್ರತಿಷ್ಠಿತ ಹಿಸ್ಟ್ರಿಯಾನಿಕ್ ಕ್ಲಬ್‌ನ ಖಾಯಂ ಸದಸ್ಯರಾದರು.

ನ್ಯಾಷನಲ್ ಕಾಲೇಜು ಶ್ರೀನಿವಾಸರವರ ಬದುಕಿನ ಗುರಿಯನ್ನು ಸರಿಯಾಗಿ ನಿರ್ದೇಶಿಸಿತು. ಜೀವನದ ಗತಿಯನ್ನು ತೋರಿಸಿಕೊಟ್ಟಿತು. ಒಂದೆಡೆ ಡಾ.ಹೆಚ್.ಎನ್. ಮತ್ತೊಂದೆಡೆ 'ಗ್ರೀನ್‌ರೂಂ' ನಾಣಿ, ಈ ಇಬ್ಬರು ಮಹಾಪ್ರತಿಭಾವಂತರ ಪ್ರಭಾವಲಯ ದಲ್ಲಿ ಶ್ರೀನಿವಾಸ 'ಕಪ್ಪಣ್ಣ'ನಾಗಿ, ಶ್ರೀನಿವಾಸ್ ಜಿ. ಕಪ್ಪಣ್ಣನಾಗಿ, ಮುಂದೆ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ 'ಕಪ್ಪಣ್ಣ' ಎಂದೇ ಹೆಸ್ಗುರುತಾದರು. (ಶ್ರೀನಿವಾಸ ಅವರಿಗೆ ಕಪ್ಪಣ್ಣ ಎಂದು ನಾಮಕರಣ ಮಾಡಿದವರು ನಾಣಿ ಅವರೇ) ನ್ಯಾಷನಲ್ ಕಾಲೇಜಿನಲ್ಲಿ ಕೇವಲ ನಾಟಕವಷ್ಟೇ ಶ್ರೀನಿವಾಸ ಅವರ ಚಟುವಟಿಕೆಯಾಗಿರಲಿಲ್ಲ. ನಾಟಕದೊಂದಿಗೆ ಓದಿಗೂ ಸಮಾನವಾದ ಪ್ರಾಮುಖ್ಯತೆಯನ್ನು ಕೊಟ್ಟರು.

## ಬೀದಿದೀಪದ ಬೆಳಕಿನಲ್ಲಿ....

ಈಗ ಶ್ರೀನಿವಾಸ್ ಅವರ ಕುಟುಂಬ ಗವಿಪುರಂ ಗುಟ್ಟಹಳ್ಳಿಗೆ ಸ್ಥಳಾಂತರ ಗೊಂಡಿತ್ತು. ಕೂಡು ಕುಟುಂಬ. ಒಂದು ಹೊತ್ತು ಹೊಟ್ಟೆ ತುಂಬಿದರೆ, ಮತ್ತೊಂದು ಹೊತ್ತು ಬರಿದು. ಕಷ್ಟವನ್ನೇ ಹಾಸು ಹೊದ್ದು ಬದುಕುತ್ತಿದ್ದ ಕುಟುಂಬ. ಗವಿಪುರಂ

ಗುಟ್ಟಹಳ್ಳಿಯಲ್ಲಿ ಚಿಕ್ಕಗೂಡಿನಂತಹ ಮನೆ. ಮನೆಯಲ್ಲಿ ವಿದ್ಯುತ್ ದೀಪವಿಲ್ಲ. ಸೀಮೆಎಣ್ಣೆ ಬುಡ್ಡಿ ಬೆಳಕಿನಲ್ಲಿ ಓದು ಸಾಗ ಬೇಕು. ಆಗ ಅವರು ಬೆಳಕಿಗಾಗಿ ಆರಿಸಿದ್ದು ಮನೆಯ ಮುಂದಿನ ತಿರುವಿನಲ್ಲಿದ್ದ ಬೀದಿದೀಪ. ಅದರ ಕೆಳಗೆ ಕುಳಿತು ಓದುವುದು ಇವರಿಗೆ ಅಭ್ಯಾಸವಾಯಿತು. ಆದರೆ ಬಳಿಯೇ ಇದ್ದ ಸಾರ್ವಜನಿಕ ಕೊಳಾಯಿ ಇವರ ಏಕಾಗ್ರತೆಗೆ ಭಂಗತರುತ್ತಿತ್ತು. ಬೀದಿ ಕೊಳಾಯಿಯಲ್ಲಿ ನೀರು ಹಿಡಿಯಲು ಬರುತ್ತಿದ್ದ ಹೆಂಗಸರ ಜಗಳ, ಗಲಾಟೆ, ಇವರ ಓದಿಗೆ ಅಡ್ಡಗಾಲು ಹಾಕುತ್ತಿದ್ದವು. ಓದಿನ ಹಂಬಲದ ಶ್ರೀನಿವಾಸ ಒಮ್ಮೆ ತರಗತಿಯಲ್ಲಿ ಒಬ್ಬನೇ ಓದುತ್ತಾ ಕುಳಿತಿರುವಾಗ ಸಹಜವಾಗಿ ಹೆಚ್‌ಎನ್. ಅವರ ಕಣ್ಣಿಗೆ ಗೋಚರಿಸಿದರು. ಶ್ರೀನಿವಾಸ ಅವರ ಓದಿನ ಹಸಿವು ಅಂತು ನ್ಯಾಷನಲ್ ಕಾಲೇಜಿನ ಕೊಠಡಿಯೊಂದರಲ್ಲಿ ರಾತ್ರಿ ಹೊತ್ತು ಓದಲು ಅವಕಾಶ ನೀಡಿದರು. ಬಡತನದ ಬೇಗೆಯನ್ನು ಅರಿತಿದ್ದ ಹೆಚ್.ಎನ್.ಅವರ ಈ ಔದಾರ್ಯ ಶ್ರೀನಿವಾಸ್ ಅವರಿಗೆ ನಿರಂತರ ಬೆಳಕು ಸೂಸುವ ಆರದ ಹಣತೆಯಾಯಿತು. ದಿನ ರಾತ್ರಿ ಊಟ ಮಾಡಿ ಬಂದು ಓದುವುದು, ರಾತ್ರಿ ಕಾಲೇಜಿನಲ್ಲಿಯೇ ತಂಗುವುದು ಇದು ಶ್ರೀನಿವಾಸನಿಗೆ ವರದಾನ. ಜೊತೆಗೆ ಪ್ರತಿದಿನ ಹೆಚ್.ಎನ್.ಅವರ ಊಟದ ನಂತರ 30 ನಿಮಿಷಗಳ ಅವರ ನಡಿಗೆಯ ಜೊತೆಗೆ ತಮ್ಮ ಹೆಜ್ಜೆ ಹಾಕುವ ಸುಸಂದರ್ಭ, ಮೂರು ವರ್ಷ ಸತತವಾಗಿ ದಿನಕ್ಕೆ 30 ನಿಮಿಷಗಳ ಹೆಚ್.ಎನ್. ಅವರ ಮಾತು ಕೇಳುತ್ತಾ, ಅವರಿಂದ ದೇಶ, ವಿದೇಶ, ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿವು ಪಡೆಯುತ್ತಾ, ತಮ್ಮ ಬದುಕಿನ ಅತ್ಯಂತ ಪ್ರಮುಖ ಘಟ್ಟವನ್ನು ಅನುಭವಿಸಿದರು. ಹೆಚ್.ಎನ್. ಅವರ ವಿಚಾರಗಳನ್ನು ಅರಿಯುವ ತಮ್ಮಲ್ಲಿನ ಅನೇಕ ಅನುಮಾನಗಳಿಗೆ ಪರಿಹಾರವನ್ನು ಕೇಳಿ ತಿಳಿಯುವ, ಅಗತ್ಯ ಬಿದ್ದಾಗಲೆಲ್ಲ ಸಂವಾದಕ್ಕೆ ಮೊದಲಾಗುವ ಸಂದರ್ಭಗಳು ಶ್ರೀನಿವಾಸ ಅವರ ಬದುಕಿನ ಅಪೂರ್ವ ಕ್ಷಣಗಳು.

ಒಂದೆಡೆ ಡಾ.ಹೆಚ್.ಎನ್.ಅವರಾದರೆ, ಮತ್ತೊಂದೆಡೆ ನಾಣಿ. ಕ್ರಿಯಾಶೀಲ ಬದುಕಿನ ಮತ್ತೊಂದು ಚೈತನ್ಯ ನಾಣಿಯವರ ಸಂಪರ್ಕ ಶ್ರೀನಿವಾಸ್ ಅವರ ಬದುಕಿನ ಮತ್ತೊಂದು ಭವಿತವ್ಯ. ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದ ಮಹತ್ವ, ತನ್ಮೂಲಕ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ರಂಗಭೂಮಿ ನೀಡುವ ತರಬೇತಿ, ಇವೆಲ್ಲಾ ಅರಿವಾಗಿದ್ದು ನಾಣಿಯವರಿಂದ. ಯಾವುದೇ ಕೆಲಸಕ್ಕೂ ಮುಂದೂಡಿ, "ಮಾಡಬಹುದು, ಮಾಡು, ನಿನಗೆ ಆ ಶಕ್ತಿ ಇದೆ" ಎಂದು ಹುರಿದುಂಬಿಸುತ್ತಾ ಎಲ್ಲರನ್ನೂ ಬೆಳೆಸುತ್ತಾ ಇದ್ದ ಪ್ರೇರಕಶಕ್ತಿ, ಕಪ್ಪಣ್ಣ ಅವರನ್ನು ಬೆಳಕಿನ ವರ್ಣಮಯ ಜಗತ್ತಿಗೆ ಆಕರ್ಷಿತವಾಗುವಂತೆ ಮಾಡಿತು.

## ನೇಪಥ್ಯ ಕಾರ್ಯದತ್ತ

ಸಾಮಾನ್ಯವಾಗಿ ರಂಗಭೂಮಿಗೆ ಬರುವವರೆಲ್ಲರೂ ನಟರಾಗಲೆಂದು ಬರುತ್ತಾರೆ. ಹಾಗೆ ಬಂದವರು ಬಹುತೇಕರೂ ನಟನೆಗೆ ಅಂಟಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಮತ್ತೆ ಕೆಲವರು ನೇಪಥ್ಯದತ್ತ ವಾಲುತ್ತಾರೆ. ಆದರೇ ನೇಪಥ್ಯದ ಕೆಲಸದಲ್ಲೇ ತೃಪ್ತಿ ಪಡೆಯುವವರು ಕೆಲವರು ಮಾತ್ರ. ನಾಟಕದಲ್ಲಿ ನೇಪಥ್ಯದಲ್ಲಿ ದುಡಿಯುವವರಿಗೆ ಒಂದು ಕೃತಜ್ಞತೆಯೂ ಅನೇಕ ಸಾರಿ ಸಲ್ಲುವುದಿಲ್ಲ. ನಾಟಕದ ತಾಲೀಮಿನಿಂದ ಆರಂಭಗೊಂಡು, ನಾಟಕದ ತಾಲೀಮು ಸ್ಥಳವನ್ನು ಸ್ವಚ್ಛಗೊಳಿಸುವುದು, ನಟನಟಿಯರಿಗೆ ಕಾಫಿ, ಟೀ, ನೀರು ಸರಬರಾಜು ಮಾಡುವುದು, ನಿರ್ದೇಶಕ ಬಯಸಿದಾಗ ಆತನ ಸಹಾಯಕ್ಕೆ ಒದಗುವುದು, ರಂಗಪರಿಕರ, ರಂಗಸಜ್ಜಿಕೆ, ಉಡುಪು, ವೇಷಭೂಷಣಗಳನ್ನು ಒದಗಿಸುವುದು, ಅಗತ್ಯ ಬಿದ್ದಾಗ, ತಾಲೀಮಿಗೆ ನಟರು ಬರದಿದ್ದಾಗ ಸಹ ನಟರಿಗೆ ಬದಲಿ ನಟರಾಗಿ ತಾತ್ಕಾಲಿಕ ನಟನೆ ಮಾಡುವುದು, ಪ್ರಚಾರ, ಟಿಕೆಟ್ ಮಾರಾಟ, ಕರಪತ್ರಹಂಚಿಕೆ, ಪ್ರದರ್ಶನದ ದಿನ ರಂಗಮಂದಿರಕ್ಕೆ ಪರಿಕರ ಸಾಗಿಸುವುದು. ಲೈಟ್‌ಬಾರ್ ಕಟ್ಟಿ, ಬೆಳಕಿನ ಉಪಕರಣಗಳನ್ನು ಅದಕ್ಕೆ ಕಟ್ಟಿ, ಧ್ವನಿವರ್ಧಕ ಹಾಕಿ,.........ಹಾಗೆಯೇ ಅಗತ್ಯ ವೇಷಭೂಷಣ, ನೀಡಿ ರಂಗಸಜ್ಜಿಕೆ ನಿರ್ಮಿಸಿ, ರಂಗಪರಿಕರವನ್ನು ಕೊಟ್ಟು, ನಟರು ರಂಗದ ಮೇಲೆ ಸುಲಲಿತವಾಗಿ ನಡೆಯುವಂತೆ ಸಂಪೂರ್ಣ ಅರ್ಪಣಾಭಾವದಿಂದ ಕಾರ್ಯ ನಿರ್ವಹಿಸುವ ನೇಪಥ್ಯ ಕರ್ಮಿ ಪ್ರಯೋಗ ಪ್ರಾರಂಭವಾಗಿ ಮುಗಿಯುವುದರೊಳಗೆ ಕಳೆದು ಹೋಗುತ್ತಾನೆ. ಪ್ರೇಕ್ಷಕರ ಚಪ್ಪಾಳೆಯ ಸದ್ದು ಕರಗುವ ಮುನ್ನವೇ ನಟರು ರಂಗಮಂದಿರದಿಂದ ನಿರ್ಗಮಿಸಿದರೆ, ಮತ್ತೆ ನೇಪಥ್ಯ ಕಲಾವಿದ ಹಾಜರಾಗುತ್ತಾನೆ. ಕಟ್ಟಿದ್ದನ್ನು ಬಿಚ್ಚಿ ನಟರು ಬಿಚ್ಚೆಸೆದ ಉಡುಪುಗಳನ್ನು ಮಡಿಸಿ, ಬಳಸಿದ, ಅಲ್ಲಲ್ಲೇ ಎಸೆದು ಹೋದ ಪರಿಕರಗಳನ್ನು ಒಗ್ಗೂಡಿಸಿ, ರಂಗ ಮಂಚವನ್ನು ಚೊಕ್ಕಟ ಮಾಡಿ, ಮಾರನೇ ದಿನದ ನಾಟಕದವರಿಗೆ ಸ್ಥಳ ಬಿಟ್ಟು ಹೊರಡುತ್ತಾನೆ. ಇಂತಹ ನೇಪಥ್ಯದ ಕಾರ್ಯದಲ್ಲಿ ಯಾರಿಗೆ ಆಸಕ್ತಿ ಮೂಡಬೇಕು. ಯಾರು ಆಸಕ್ತಿ ಮೂಡಿಸಬೇಕು ? ಈ ಎರಡೂ ರೀತಿಯ ಕೆಲಸ ಮಾಡುತ್ತಾ ನೇಪಥ್ಯ ಕಾರ್ಯ ಪ್ರೇರೇಪಿಸುತ್ತಾ, ತಾವು ಕಲಿತದ್ದನ್ನು ಶ್ರದ್ಧೆಯಿಂದ ಕಲಿಸುತ್ತಿದ್ದ ನಾಣಿ, ಕಪ್ಪಣ್ಣ ಅವರಂತಹ ಅನೇಕರನ್ನು ಬೆಳೆಸಿದರು.

ಸ್ಟೇಜ್ ಕ್ರಾಫ್ಟ್‌ಗೆ ಒಂದು ನೆಲೆಬೆಲೆ ತಂದುಕೊಟ್ಟ ನಾಣಿಯವರ ಪ್ರಭಾವ ಕಪ್ಪಣ್ಣ ಅವರ ಮೇಲೆ ತುಂಬಾ ಆಯಿತು. ನಟರಾಗುವ ಆಸೆಯನ್ನು ಬಿಟ್ಟುಕೊಟ್ಟು ಸುತ್ತಿಗೆ, ಮೊಳೆ, ಕಟಿಂಗ್ ಪ್ಲೇಯರ್ ಹಿಡಿದು ನಾಣಿ ಪಡೆಯಲ್ಲಿ ಒಬ್ಬರಾದರು.

## ಕಲಾಕ್ಷೇತ್ರದ ಮೆಟ್ಟಿಲಮೇಲೆ

1964–68ರವರೆಗೆ ಅಂತರಕಾಲೇಜು ನಾಟಕ ಸ್ಪರ್ಧೆಗಳ ನೇಪಥ್ಯದಲ್ಲಿ ದುಡಿದು, ಬೆಂಗಳೂರು ಲಿಟಲ್ ಥಿಯೇಟರ್ ನಾಟಕಗಳ ಸಂಪರ್ಕಕ್ಕೆ ಬಂದರು. ತಮ್ಮ ರಂಗ ಗುರು ನಾಣಿಯವರ ಮೂಲಕ ಕಾಲೇಜಿನಾಚೆಯ ರಂಗಭೂಮಿಗೆ ಪರಿಚಿತರಾದರು. ಇದೇ ಸಂದರ್ಭದಲ್ಲಿ ಪ್ರಭಾತ್ ಕಲಾವಿದರ ಸಂಪರ್ಕಕ್ಕೂ ಬಂದರು. ಇವರು 'ಬೆಗ್ ಬಾರೋ ಸ್ಟೀಲ್' 'ಕತ್ತಲೆ ಬೆಳಕು' ನಾಟಕಗಳಿಗೆ ಬೆಳಕು ವಿನ್ಯಾಸಕ್ಕೆ ಬಹುಮಾನಗಳನ್ನು ಪಡೆದಿದ್ದರಾದರೂ ರಂಗಭೂಮಿಯನ್ನು ಹೊಸ ಬಗೆಯಲ್ಲಿ ಅರ್ಥೈಸುವ ಪ್ರಕ್ರಿಯೆಗೆ ತಮ್ಮನ್ನು ಒಳಗು ಮಾಡಿದರು.

ನಾಣಿಯವರ ಗರಡಿಯಲ್ಲಿ ತಾಲೀಮು ನಡೆಸುತ್ತಿದ್ದರೂ, ಅಂದಿನ ಸಾಂಸ್ಕೃತಿಕ ರಂಗವಲಯದಲ್ಲಿ ಪ್ರವೇಶ ಅಷ್ಟು ಸುಗಮವಾಗಿರಲಿಲ್ಲ. ರವೀಂದ್ರಕಲಾಕ್ಷೇತ್ರದಲ್ಲಿ ಯಾವುದೇ ನಾಟಕ ನೋಡಬೇಕೆಂದರೆ ಹಣವಂತೂ ಬೇಕಲ್ಲ. ನಾಟಕ ನೋಡಲು ಜೇಬಲ್ಲಿ ಹಣ ಇರಬೇಕಲ್ಲ. ಯಾವುದೋ ಒಂದು ನಾಟಕ ನೋಡಲು ಹೋದಾಗ ಇವರನ್ನು ನೋಡಿದವರು "ಕಪನಿ ತಮ್ಮ ಇರಬೇಕು ಒಳಗೆ ಬಿಡ್ರೋ" ಎಂದು ಕಲಾಕ್ಷೇತ್ರಕ್ಕೆ ಪ್ರವೇಶಕೊಟ್ಟ ಪ್ರಕರಣವನ್ನು ನೆನಪಿಸಿಕೊಳ್ಳುತ್ತಾರೆ. ಕಪ್ಪಣ್ಣ.

ನ್ಯಾಷನಲ್ ಕಾಲೇಜಿನಲ್ಲಿ ಹಿಸ್ಟ್ರಿಯಾನಿಕ್ ಕ್ಲಬ್ ಸದಸ್ಯರಲ್ಲಿ ಇಬ್ಬರು ಶ್ರೀನಿವಾಸ್ ಹೆಸರಿನವರದ್ದು, ಶ್ರೀನಿವಾಸ ಎಂದು ಯಾರಾದರೂ ಕರೆದರೆ ಇಬ್ಬರೂ ಪ್ರತಿಕ್ರಿಯಿಸುವ ಪ್ರಸಂಗ ಎದುರಾಗಿ, ಕಪ್ಪಗಿದ್ದ ಇವರನ್ನು ನಾಣಿ ಅವರು ಕಪ್ಪಣ್ಣ ಎಂದು ನಾಮಕರಣ ಮಾಡಿದ್ದನ್ನು ತಮಾಷೆಯಾಗಿ ನೆನಪಿಸಿಕೊಳ್ಳುತ್ತಾರೆ. "ಆ ಶ್ರೀನಿವಾಸ್‌ಗಿಂತ ಸ್ವಲ್ಪ ಕಡಿಮೆ ಕಪ್ಪಗಿದ್ದೆ ಎಂದು ತಮ್ಮನ್ನು ತಾವೇ ಗೇಲಿ ಮಾಡಿಕೊಂಡರೂ, ಕಪ್ಪು ಬಣ್ಣವನ್ನು ತಮ್ಮ ಐಡೆಂಟಟಿ ಎಂದು ಆಗಾಗ್ಗೆ ಪ್ರತಿಪಾದಿಸುತ್ತಾರೆ.

ಬಹುಶಃ ತಾನು ಹುಟ್ಟಿದಂದಿನಿಂದ 15–20 ವರ್ಷ ವಿದ್ಯುತ್‌ದೀಪದಿಂದ ವಂಚಿತನಾಗಿದ್ದರಿಂದಲೇ ಏನೋ ತಾನು ರಂಗಭೂಮಿಯಲ್ಲಿ ಬೆಳಕು ವಿನ್ಯಾಸವನ್ನು ಅಂಟಿಸಿಕೊಂಡೆ ಎಂಬ ಹೆಗ್ಗಳಿಕೆ ಇವರದು. ರಂಗದ ಮೇಲೆ ಬೆಳಕು ಹರಿಸಿ, ನಟ ನಟಿಯರ ಭಾವನೆಗಳಿಗೆ ಬಣ್ಣ ತುಂಬುವ ಕಪ್ಪಣ್ಣ ತಮ್ಮ ರಂಗಯಾತ್ರೆಯಲ್ಲಿ ನಟರಾಗಿ, ನಿರ್ದೇಶಕರಾಗಿ, ಸಂಘಟಕರಾಗಿ ಎಷ್ಟೆಲ್ಲಾ ಕೆಲಸ ಮಾಡಿದ್ದರೂ, ಇಂದಿಗೂ ಬೆಳಕಿನ ವಿನ್ಯಾಸ ತಮ್ಮ ಮೊದಲ ಆದ್ಯತೆ, ಮೊದಲ ಪ್ರೀತಿ ಎನ್ನುತ್ತಾರೆ.

## ಡಾ॥ ಹೆಚ್.ಎನ್ ಮಾರ್ಗದರ್ಶನ

ಅತ್ತ ಡಾ. ಹೆಚ್.ಎನ್. ಇತ್ತ ನಾಣಿ, ಒಂದೆಡೆ ಕಾಲೇಜು ವಿದ್ಯಾಭ್ಯಾಸ, ಮತ್ತೆ ನಾಟಕದ ಹುಚ್ಚು, ಇವೆರಡನ್ನೂ ಏಕಕಾಲಕ್ಕೆ ಸಮಾನ ಆಸಕ್ತಿಯಿಂದ ಪೋಷಿಸಿಕೊಂಡ

ಕಪ್ಪಣ್ಣ ಅವರಿಗೆ ಬೆಳಕು ವಿನ್ಯಾಸ ಅವರ ಆಸಕ್ತಿಯ ಕೇಂದ್ರವೆಂದು ಗುರುತಿಸಿಕೊಂಡರಾದರೂ, ಹೆಚ್.ಎನ್. ಅವರಿಂದ ಕಲಿತ ಬದುಕಿನ ಪಾಠ, ಮುಂದಿನ ಅವರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿತು. ಡಾ.ಹೆಚ್.ಎನ್. ಅವರೇ ಹೇಳಿಕೊಂಡಂತೆ ಅವರು ನಾಸ್ತಿಕರಲ್ಲ, ಹಾಗೆಂದು, ದೇವರು, ಪೂಜೆ, ಪುರೋಹಿತಶಾಹಿ ಬಗ್ಗೆ ತಮ್ಮದೇ ಆದ ನಿಲುವು ಹೊಂದಿದ್ದ ವ್ಯಕ್ತಿ. ಸಾಮೂಹಿಕ ಗಣೇಶೋತ್ಸವವನ್ನು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಪ್ರೋತ್ಸಾಹಿಸುವ ಕಾಲಕ್ಕೆ ಮೂಢನಂಬಿಕೆಯನ್ನು ಒಪ್ಪದ, ಪ್ರಶ್ನಿಸುವ ಕಾಯಕಕ್ಕೆ ಮುಂದಾಗುತ್ತಾರೆ. ಪ್ರಶ್ನಿಸದೇ ಯಾವುದನ್ನು ಒಪ್ಪಬಾರದು ಎಂಬುದು ಅವರ ಖಚಿತ ನಿಲುವು. ಡೋಂಗಿ ದೇವ ಮಾನವರ ಪವಾಡಗಳನ್ನು ಅತ್ಯಂತ ಕಟುವಾಗಿ ತಿರಸ್ಕರಿಸುವ ಅವರು ವೈಜ್ಞಾನಿಕ ಮನೋಭಾವ, ವೈಚಾರಿಕ ಚಿಂತನೆ ಬದುಕನ್ನು ಹಸನುಗೊಳಿಸುತ್ತದೆ ಎಂದು ಪ್ರತಿಪಾದಿಸಿದವರು. ಯಾವುದೂ ಶೂನ್ಯದಿಂದ ಸೃಷ್ಟಿಯಾಗಲು ಸಾಧ್ಯವಿಲ್ಲ ಎಂದು ಖಚಿತವಾಗಿ ಹೇಳುತ್ತಾ, ಅನೇಕ ಪಟ್ಟಭದ್ರರನ್ನು ಎದುರುಹಾಕಿಕೊಂಡಿದ್ದರೂ, ಎಂದೂ ತಮ್ಮ ನಿಲುವು ಬದಲಿಸಿದವರಲ್ಲ, ಪ್ರತಿಯೊಂದನ್ನೂ ಹಾಸ್ಯಲೇಪದೊಂದಿಗೆ ವಿವರಿಸುತ್ತಿದ್ದ ಹೆಚ್.ಎನ್, ಕಪ್ಪಣ್ಣ ಅವರ ದಾರಿಯಲ್ಲೂ ದೀಪ ಹಚ್ಚಿದರು. ಕಪ್ಪಣ್ಣ ಅವರು ರೇಸ್‌ಕೋರ್ಸ್‌ಗೆ ಕೆಲಸಕ್ಕೆ ಹೋಗುತ್ತಿದ್ದರು. ದುಡಿಮೆ ಜೊತೆಗೆ ಕಲಿಕೆ, ಅದು ಅವರಿಗೆ ತೀರ ಅನಿವಾರ್ಯವೂ ಆಗಿತ್ತು. ಆದರೆ ಕುದುರೆ ಜೂಜಿನ ಬಗ್ಗೆ ಹೆಚ್‌ಎನ್ ಹೇಳಿದ ಮಾತನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಆಗಿನ ಕಾಲಕ್ಕೆ ಕುದುರೆ ಜೂಜಿನಲ್ಲಿ 15 ಲಕ್ಷ ಗೆದ್ದವರು ಪುಟ್ಟಸ್ವಾಮಿ ಎಂಬುವರು. ಅವರು ಜಾಕ್‌ಪಾಟ್ ಪುಟ್ಟಸ್ವಾಮಿ ಎಂದೇ ಖ್ಯಾತರಾದರು. 30–40 ಲಕ್ಷ ರೂಗಳನ್ನು ಒಬ್ಬ ವ್ಯಕ್ತಿ ಕುದುರೆ ಜೂಜಿನಲ್ಲಿ ಗಳಿಸುತ್ತಾನೆ. ಆದರೆ ಅದೇ ಸಮಯಕ್ಕೆ ಸಾವಿರಾರು ಮಂದಿ ಹಣದ ಆಸೆಯನ್ನು ಹತ್ತಿಕ್ಕಲಾರದೆ, ಕುದುರೆ ಜೂಜಿನಲ್ಲಿ ತೊಡಗಿಸಿ ನಿರ್ಗತಿಕರಾಗುತ್ತಾರೆ. ಅವರನ್ನು ನಂಬಿದ ಸಂಸಾರ ಬೀದಿಪಾಲಾಗುತ್ತದೆ. ಇಂತಹ ಜೂಜಿನ ದಂಧೆಗಳು ಸಾಮಾಜಿಕ ಅಸಮಾನತೆಗೆ ಹೇಗೆ ಕಾರಣವಾಗುತ್ತದೆ ಎಂದು ವಿವರಿಸುತ್ತಿದ್ದುದನ್ನು ಕಪ್ಪಣ್ಣ ನೆನಪಿಸಿಕೊಳ್ಳುತ್ತಾರೆ. ಇಷ್ಟೆಲ್ಲಾ ತಿಳುವಳಿಕೆ ಅವರ 18–20 ವಯೋಮಾನದಲ್ಲಿ ಹೆಚ್.ಎನ್. ಅವರ ಮೂಲಕ ಕಪ್ಪಣ್ಣ ಅವರಿಗೆ ದೊರಕುತ್ತಿತ್ತು. ಇಂಥ ಸಂಗತಿಗಳು ಜನಸಾಮಾನ್ಯರಿಗೆ ಅದರಲ್ಲೂ ಗ್ರಾಮೀಣ ಜನ ಸಮುದಾಯಕ್ಕೆ ದೊರಕಬೇಕೆಂಬ ಆಸೆ ಅವರಾದಾಗಿತ್ತು. ಗ್ರಾಮೀಣ ಪರಿಸರದಲ್ಲಿ ನಾಟಕಗಳ ಮೂಲಕ ಮೂಢನಂಬಿಕೆ, ವೈಚಾರಿಕ ಪ್ರಜ್ಞೆ ಮುಂತಾದವುಗಳ ಬಗ್ಗೆ ರಂಗಭೂಮಿಯ ಮೂಲಕ ತಿಳಿಸಬೇಕೆಂದು ಹೆಚ್.ಎನ್.ಬಯಸುತ್ತಿದ್ದುದು ಸಹಜವೇ ಆಗಿತ್ತು. ಆ ಕಾರಣಕ್ಕೆ ಹೆಚ್.ಎನ್. ಅವರು ಗ್ರಾಮೀಣ ರಂಗೋತ್ಸವದ ಪರಿಕಲ್ಪನೆಯನ್ನು ಕಪ್ಪಣ್ಣ

ಅವರೊಂದಿಗೆ ಹಂಚಿಕೊಂಡಿದ್ದರು. ಹೆಚ್.ಎನ್, ನಾಣಿ ಇವರಿಬ್ಬರ ಒಡನಾಟ, ಮಾರ್ಗದರ್ಶನ ಶ್ರೀನಿವಾಸ ಜಿ. ಕಪ್ಪಣ್ಣ ಅವರ ಬದುಕಿನಲ್ಲಿ ಬಹು ಮುಖ್ಯ ಪಾತ್ರ ವಹಿಸಿದವು.

**ಬೆಳಕು ವಿನ್ಯಾಸದತ್ತ....**

ಮೂರನೇ ವರ್ಷದ ಬಿಎಸ್‌ಸಿ ಓದುವವರೆಗೆ ನಾಣಿಯವರ ಪ್ರೇರಣೆಯಿಂದಾಗಿ, ಪೂರ್ಣವಾಗಿ ಬೆಳಕು ವಿನ್ಯಾಸಕ್ಕೆ ಕಪ್ಪಣ್ಣ ತೊಡಗಿಸಿಕೊಂಡರು. 'ಪ್ರಥಮ ಚುಂಬನ ದಂತಭಗ್ನ' ಎಂಬ ಮಾತಿಗೆ ತಕ್ಕ ಹಾಗೆ ಅವರು ವಾದಿರಾಜ್ ಅವರ ತಮಿಳು ನಾಟಕ 'ಚದುರಂಗ'ಕ್ಕೆ ಬೆಳಕು ಮಾಡಲು ರವೀಂದ್ರ ಕಲಾಕ್ಷೇತ್ರಕ್ಕೆ ಹೋಗುತ್ತಾರೆ. ನಾಟಕಕ್ಕಿಂತ ಮುಂಚಿತವಾಗಿ ಎಲ್ಲ ರೀತಿಯ ಪೂರ್ವ ತಯಾರಿ ನಡೆದು ಇನ್ನೇನು ನಾಟಕ ಪ್ರಾರಂಭವಾಗಬೇಕು. ಬೆಳಕು ಸಂಪೂರ್ಣ ಕೈಕೊಡುತ್ತದೆ. ತಾಂತ್ರಿಕ ದೋಷದಿಂದ ಅಸಹಾಯಕ ಪರಿಸ್ಥಿತಿ, ಏನೂ ಮಾಡಲು ತೋಚದ ಸ್ಥಿತಿ. ಹತಾಶೆಯ ಭಾವ. ಈ ನಾಟಕದ ಸೋಲು, ಮತ್ತೊಂದು ಸವಾಲಾಗಿ ಪರಿಣಮಿಸುತ್ತದೆ. ವಿದ್ಯುತ್ ಉಪಕರಣಗಳ ಪ್ರಾಥಮಿಕ ತಿಳುವಳಿಕೆ ಕೇಬಲ್, ವೈರ್, ಡಿಮ್ಮರ್‌ಗಳ ಬಳಕೆ ಅಭ್ಯಾಸ – ಲೈಟಿಂಗ್ ಮಾಡುವುದೇ ಮುಖ್ಯ ಉದ್ದೇಶವಾಗಿ ತೊಡಗಿ ಕೊಳ್ಳುತ್ತಾರೆ. ನಟನೆಯನ್ನು ಕೈಬಿಟ್ಟು ಬೆಳಕು ವಿನ್ಯಾಸವನ್ನು ಸವಾಲಾಗಿ ಸ್ವೀಕರಿಸಿದ ಕಪ್ಪಣ್ಣ ಮುಂದೆ ರಂಗಯ್ಯ, ಕಪನೀಪತಿ, ಮಂಜು ಅವರೊಡಗೂಡಿ ಬೆಳಕು ವಿನ್ಯಾಸಕ್ಕೆ ತೊಡಗಿಕೊಳ್ಳುತ್ತಾರೆ. ಎಂದಿನಂತೇ ನಾಣಿಯಿಂದ ಪ್ರೋತ್ಸಾಹದ ಮಾತು ಇವರ ಬೆನ್ನಿಗೆ ಇದ್ದೇ ಇರುತ್ತದೆ.

60ನೇ ದಶಕದ ಕೊನೆಯ ಕಾಲಘಟ್ಟ, ಹವ್ಯಾಸಿ ರಂಗಭೂಮಿ ಗರಿಬಿಚ್ಚಿ ಸ್ವಚ್ಛಂದವಾಗಿ ಪ್ರವರ್ಧಮಾನಕ್ಕೆ ಬಂದ ಕಾಲ. 1968ರಲ್ಲಿ ಕನ್ನಡದ ಮಹತ್ವದ ನಾಟಕ 'ತುಘಲಕ್' ಪ್ರೊ.ಬಿ.ಚಂದ್ರಶೇಖರ್ ಅವರ ನಿರ್ದೇಶನದಲ್ಲಿ ಪ್ರಯೋಗಕ್ಕೆ ಸಿದ್ಧಗೊಂಡಿತು. ಈ ನಾಟಕಕ್ಕೆ ಬೆಳಕು ವಿನ್ಯಾಸಕ್ಕೆ ಹೊಣೆ ಹೊತ್ತವರು ಶ್ರೀನಿವಾಸ ಜಿ. ಕಪ್ಪಣ್ಣ. ಇದು ಕಪ್ಪಣ್ಣ ಅವರ ರಂಗಬದುಕಿನಲ್ಲಿ ಹೊಸ ಪರ್ವ ಸೃಷ್ಟಿಸಿದ ಸಮಯ. ಖ್ಯಾತ ಬೆಳಕು ತಜ್ಞ ಪರೇಶ್ ಅವರೊಂದಿಗೆ ಸೇರಿ 1968ರಿಂದ 72ರವರೆಗೆ ಲೈಟಿಂಗ್ ಮಾಡಿದರು. ಪರೇಶ್ ಅವರ ಕ್ರಿಯಾಶೀಲತೆಯನ್ನು ಮುಕ್ತಕಂಠದಿಂದ ಹೊಗಳುವ ಕಪ್ಪಣ್ಣ, ರವೀಂದ್ರ ಕಲಾಕ್ಷೇತ್ರದಲ್ಲಿ ಸಮಾನವಯಸ್ಕ, ಮನಸ್ಕ ಗೆಳೆಯರ ಜೊತೆಗೆ ಆಗಾಗ ಉಂಟಾಗುತ್ತಿತ್ತ ಜಟಾಪಟಿಯನ್ನು, ಅಂದಿನ ಗೆಳೆಯರ ನಡುವೆ ರಂಗಭೂಮಿಯಲ್ಲಿ ನಡೆಯುತ್ತಿದ್ದ ಪೈಪೋಟಿಯನ್ನು ಹಾಸ್ಯ ಪ್ರಸಂಗಗಳ ಮೂಲಕ ನೆನಪಿಸಿಕೊಳ್ಳುತ್ತಾರೆ.

ಆಗಿನ್ನು ರವೀಂದ್ರಕಲಾಕ್ಷೇತ್ರದ ನಿರ್ಮಾಣ ಮುಗಿದಿತ್ತು. ಬೆಳಕು ಧ್ವನಿ ಮುಂತಾದ ತಾಂತ್ರಿಕ ಸೌಲಭ್ಯವನ್ನು ಇನ್ನೂ ಮಾಡಿರಲಿಲ್ಲ. ಹಾಗಾಗಿ ಪ್ರಭಾತ್ ಕಲಾವಿದರು ಸಂಸ್ಥೆಯಿಂದ ಲೈಟ್‌ಗಳನ್ನು ಬಾಡಿಗೆಗೆ ತಂದು ರಂಗಮಂದಿರದ ಒಳಗೆ ವೇದಿಕೆ ಎದುರಿನಲ್ಲಿ ಒಂದು ಉದ್ದನೆಯ ಕಬ್ಬಿಣದ ಬಾರ್ ಅನ್ನು ತಾತ್ಕಾಲಿಕವಾಗಿ ಕಟ್ಟಿ ಅದಕ್ಕೆ ಲೈಟ್‌ಗಳನ್ನು ಕಟ್ಟಬೇಕಿತ್ತು. ಒಂದು ನಾಟಕದ ಸಂದರ್ಭದಲ್ಲಿ ಲೈಟ್‌ಬಾರ್‌ನ್ನು ಮುಚ್ಚಿಟ್ಟು, ಮತ್ತೊಬ್ಬ ಸಂಘಟಕ, ನೇಪಥ್ಯ ತಜ್ಞ ಎಲ್ ಕೃಷ್ಣಪ್ಪನವರೊಂದಿಗೆ ನಡೆದ ಜಗಳವನ್ನು, ನೆನಪಿಸಿಕೊಳ್ಳುವ ಕಪ್ಪಣ್ಣ ರಂಗ ತಂಡಗಳ ಜೊತೆ ಇದ್ದ ಆರೋಗ್ಯಕರ ಪೈಪೋಟಿಯನ್ನು ಸ್ವಾರಸ್ಯಕರವಾಗಿ ವಿವರಿಸುತ್ತಾರೆ.

ರಾಷ್ಟ್ರೀಯ ನಾಟಕ ಶಾಲೆಯಿಂದ ಬಂದ ಬಿ.ವಿ. ಕಾರಂತರು, ಶ್ರೀರಂಗರ 'ಸ್ವರ್ಗಕ್ಕೆ ಮೂರೇ ಬಾಗಿಲು' ನಾಟಕವನ್ನು ಬೆಂಗಳೂರಿನಲ್ಲಿ ನಿರ್ದೇಶಿಸಿದಾಗ, ಅದಕ್ಕೆ ಕಪ್ಪಣ್ಣ ಅವರು ಮಾಡಿದ ಬೆಳಕಿನ ವಿನ್ಯಾಸ ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಯಿತು. ರವೀಂದ್ರಕಲಾಕ್ಷೇತ್ರದ ರಂಗಮಂಚದ ಪೂರ್ಣ ಡೆಪ್ತ್ ಅನ್ನು ಬಳಸಿ ನೆಳಲು ಬೆಳಕು ಮೂಲಕ ಅವರು ಸೃಷ್ಟಿಸಿದ ಚಮತ್ಕಾರ, ಕಪ್ಪಣ್ಣ ಅವರಿಗೆ ಶಾಶ್ವತ ಬೆಳಕಿನ ವಿನ್ಯಾಸಕಾರನ ಪಟ್ಟವನ್ನು ದೊರಕಿಸಿ ಕೊಟ್ಟಿತು.

ಬಿ.ಎಲ್.ಟಿ ತಂಡಕ್ಕೆ ಸಿ.ಆರ್.ಸಿಂಹ ಅವರು ನಿರ್ದೇಶಿಸಿದ ನಾಟಕ ಕಲ್ಕತ್ತಾದಲ್ಲಿ ಪ್ರದರ್ಶಿತವಾದಾಗ, ಮೊದಲ ಬಾರಿ ವಿಮಾನವನ್ನು ಹತ್ತುವ ಅವಕಾಶ ಇವರದಾಯಿತು. 'ಕುರುಡು ಕಾಂಚಾಣ' ನಾಟಕಕ್ಕೆ ಇವರು ಮಾಡಿದ ಬೆಳಕಿನ ವಿನ್ಯಾಸಕ್ಕೆ ನಾಟ್ಯಸಂಘ ಥಿಯೇಟರ್ ಸೆಂಟರ್‌ನ ಉಲ್ಲಾಳ್ ಶೀಲ್ಡ್ ನಾಟಕೋತ್ಸವ (ಅಂತರಕಾಲೇಜು)ದಲ್ಲಿ ಉತ್ತಮ ವಿನ್ಯಾಸಕ ಪ್ರಶಸ್ತಿಯೂ ಇವರದಾಯಿತು.

## ವಾರ್ತಾ ಇಲಾಖೆಯಲ್ಲಿ....

ಕನ್ನಡ ರಂಗಭೂಮಿಯಲ್ಲಿ ಹೊಸ ಪ್ರತಿಭೆಗಳು, ಅರಳುತ್ತಿದ್ದ ಕಾಲ, ಹೊಸ ಹೊಸ ಆವಿಷ್ಕಾರಗಳು, ಶ್ರೀರಂಗರ ಆಗಮನದಿಂದ ಕನ್ನಡ ರಂಗಭೂಮಿಗೆ ದಕ್ಕಿದ ಆಯಾಮ, ಬಿ.ವಿ.ಕಾರಂತರ ಪ್ರವೇಶದಿಂದ ಮತ್ತೊಂದು ಮಜಲಿಗೆ ಹೊರಳಿದ ರಂಗಭೂಮಿ, 70ರ ದಶಕದ ಆರಂಭದಲ್ಲಿ ಹೊಸ ಸಂಚಲನ ಉಂಟು ಮಾಡಿತ್ತು. ಯುವಕರು, ಕಾಲೇಜು ಅಧ್ಯಾಪಕರು, ಬ್ಯಾಂಕ್ ನೌಕರರು ರಂಗಭೂಮಿಯ ಮೆಟ್ಟಿಲು ಹತ್ತಲಾರಂಭಿಸಿದರು. 1969ರಲ್ಲಿ ಕಲಾವಿದರ ಕೆಲಸಕ್ಕೆ ವಾರ್ತಾಇಲಾಖೆ ಅರ್ಜಿ ಕರೆದಾಗ ಶ್ರೀನಿವಾಸ ಜಿ. ಕಪ್ಪಣ್ಣ ಅವರ ಜೊತೆಗೆ ಜಿ.ವಿ.ಶಿವಾನಂದ, ಸಿ.ಆರ್. ಸಿಂಹ ಲೋಕೇಶ್ ಕಲಾವಿದರಾಗಿ ವಾರ್ತಾ ಇಲಾಖೆಯ ನಾಟಕ ಮತ್ತು ಸಂಗೀತ ವಿಭಾಗಕ್ಕೆ ಸೇರ್ಪಡೆಯಾದರು. ಇವರಿಗೆಲ್ಲಾ ಮುಖ್ಯಸ್ಥರಾಗಿ ಆರ್.ನಾಗೇಶ್ ಇದ್ದರು.

ಆರ್.ನಾಗೇಶ್ ಕನ್ನಡ ಹೋರಾಟ, ರಂಗಭೂಮಿ ಮುಂತಾಗಿ ತೊಡಗಿ ಆಗಲೇ ಹೆಸರು ಮಾಡಿದ್ದರು.

ವಾರ್ತಾ ಇಲಾಖೆಯಲ್ಲಿ ಈ ಕಲಾವಿದರು ಮಾಡಿದ ಪ್ರತಿಯೊಂದು ಪ್ರಯೋಗವು ವಿಶಿಷ್ಟವಾಗಿತ್ತು. ಮನರಂಜನೆಯ ಜೊತೆಗೆ ಜನಜಾಗೃತಿಗಾಗಿ ಸಾಮಾಜಿಕ ಅರಿವಿಗಾಗಿ ಪ್ರಚಾರ ನಾಟಕಗಳನ್ನು ಮಾಡುವುದರ ಜೊತೆಗೆ ಹೊಸ ರೀತಿಯ ಪ್ರಯೋಗಗಳನ್ನು ಈ ತಂಡ ಮಾಡತೊಡಗಿತು. ರಾಜ್ಯದ ಹಳ್ಳಿ ಹಳ್ಳಿಗಳಲ್ಲಿ ಇವರು ನಾಟಕ ಮಾಡುತ್ತಿದ್ದರು. ಸರ್ಕಾರದ ಪರವಾಗಿ ಪ್ರಚಾರದ ನಾಟಕಗಳನ್ನು ಮಾಡುತ್ತಿದ್ದರಾದರೂ, ಗ್ರಾಮೀಣ ಕರ್ನಾಟಕದ ನಾಡಿ ಮಿಡಿತವನ್ನು ಹತ್ತಿರದಿಂದ ಅನುಭವಿಸಿದರು. ಇದು ಕಪ್ಪಣ್ಣ ಅವರಲ್ಲಿ ಜಾನಪದ ಪ್ರಜ್ಞೆಯನ್ನು ಜಾಗೃತ ಗೊಳಿಸಿತು. ಜಾನಪದ ಕಲಾ ಪ್ರಕಾರಗಳನ್ನು ಅರಿಯುವುದರ ಜೊತೆಗೆ ಜಾನಪದ ಕಲಾವಿದರ ನಿಕಟ ಪರಿಚಯ, ಅವರ ಪ್ರತಿಷ್ಠೆಯನ್ನು ರಾಷ್ಟ್ರಮಟ್ಟದಲ್ಲಿ ಪ್ರಚುರ ಪಡಿಸುವ ಯಾವ ಅವಕಾಶವನ್ನು ಇವರು ಬಿಡಲಿಲ್ಲ. ಪ್ರತಿಷ್ಠಿತ, ರಾಷ್ಟ್ರೀಯ ಅಂತರಾಷ್ಟ್ರೀಯ ಉತ್ಸವಗಳಲ್ಲಿ, ಗಣರಾಜ್ಯೋತ್ಸವ ಪೆರೇಡ್‌ನ ಸ್ತಬ್ಧ ಚಿತ್ರಗಳಲ್ಲಿ ಜಾನಪದ ಕಲಾ ಪ್ರಕಾರಗಳನ್ನು ಅದ್ಭುತವಾಗಿ ಸಂಯೋಜಿಸಿದ ಕಪ್ಪಣ್ಣ ರಾಜ್ಯದ ಮೂಲೆ ಮೂಲೆಯಲ್ಲಿದ್ದ ಜನಪದ ಕಲಾ ತಂಡಗಳಿಗೆ ರಾಷ್ಟ್ರವ್ಯಾಪಿ ಪ್ರಚಾರ ದೊರಕಲು ಕಾರಣರಾದರು. ಜಾನಪದ ವಿದ್ವಾಂಸರು, ಜಾನಪದ ಕಲೆಯ ಸಂಶೋಧನೆ, ಕಲೆಯ ಉಗಮ, ಪರಂಪರೆ, ಸಂಪ್ರದಾಯಗಳ ಬಗ್ಗೆ ವಿದ್ವತ್‌ಪೂರ್ಣ ಪ್ರಬಂಧ ಬರೆಯುತ್ತಿರುವಾಗ ಜಾನಪದ ಕಲಾವಿದರನ್ನು ಮುಖ್ಯವೇದಿಕೆ ತಂದರು. ಅನೇಕ ಜಾನಪದ ಕಲಾಪ್ರಕಾರಗಳನ್ನು ನಶಿಸಿಹೋಗುತ್ತಿದ್ದ ಅಪಾಯದಿಂದ ರಕ್ಷಿಸಿ ಯುವಕರು ಅಂತಹ ಕಲೆಯತ್ತ ಆಕರ್ಷಿತವಾಗುವಂತೆ ಮಾಡಿದರು.

ವಾರ್ತಾ ಇಲಾಖೆಯ ಮೂಲಕ ರಾಜ್ಯದ ಪ್ರತಿ ಜಿಲ್ಲೆ ತಾಲ್ಲೂಕುಗಳಿಗೆ ಸರ್ಕಾರಿ ಯೋಜನೆಗಳ ಮಹತ್ವವನ್ನು ಪ್ರಚಾರ ಮಾಡಲು ರಂಗಮಾಧ್ಯಮ ಬಳಕೆಯಾಗುವುದರ ಜೊತೆಗೆ ಅದರ ವ್ಯಾಪಕತೆಯನ್ನು ಹೆಚ್ಚು ಮಾಡಿದ್ದು ಸಂಗೀತ ನಾಟಕ ಕಲಾವಿದರ ಹೆಗ್ಗಳಿಕೆ, ಅಂತೆಯೇ ಕಪ್ಪಣ್ಣ ಕೂಡ ಈ ಕಲಾವಿದರ ಕೂಟದಲ್ಲಿ ಒಬ್ಬರಾಗಿದ್ದರು ಎನ್ನುವುದು ಕೂಡ ಇಲ್ಲಿ ಮುಖ್ಯ.

## ನಟರಂಗ ಸ್ಥಾಪನೆ....

ಜೀವನ ನಿರ್ವಹಣೆಗಾಗಿ ವಾರ್ತಾ ಇಲಾಖೆಯ ಕೆಲಸ, ಹವ್ಯಾಸಕ್ಕಾಗಿ ಕಲಾಕ್ಷೇತ್ರದಲ್ಲಿ ನಾಟಕದ ಕಾಯಕ. ವಾರ್ತಾ ಇಲಾಖೆಯ ಕಾರ್ಯಕ್ರಮಗಳಲ್ಲಿ ಸಂಘಟನಾ ಶಕ್ತಿಯನ್ನು ಅಪಾರವಾಗಿ ರೂಪಿಸಿಕೊಂಡ ಕಪ್ಪಣ್ಣ ತಮ್ಮ ರಂಗ

ಚಟುವಟಿಕೆಗೆ 'ನಟರಂಗ; ತಂಡದ ಸ್ಥಾಪನೆಗೆ ತಮ್ಮ ಸಹವರ್ತಿಗಳ ಜೊತೆ ಕೈ ಜೋಡಿಸಿದರು. 'ನಟರಂಗ' ಕನ್ನಡ ಆಧುನಿಕ ರಂಗಭೂಮಿ ತಂಡ ವಿಶಿಷ್ಟರಂಗ ಸಂಘಟನೆ. ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಹೆಗ್ಗಳಿಕೆ, ಖ್ಯಾತ ಕಲಾವಿದರಾದ ಸಿ.ಆರ್.ಸಿಂಹ, ಲೋಕೇಶ್, ಅವರೊಡಗೂಡಿ 'ನಟರಂಗ' ಕಪ್ಪಣ್ಣ ಒಬ್ಬ ಸಶಕ್ತ ಸಂಘಟಕ ರಾಗಿ . 'ನಟರಂಗ'ವನ್ನು ಮುನ್ನಡೆಸಿದರು. ಪೋಲಿಕಿಟ್ಟಿ, ತುಘಲಕ್, ಕಾಕನಕೋಟೆ, ಎಮಿಡ್‌ಸಮ್ಮರ್ ನೈಟ್ಸ್‌ಡ್ರೀಂ, ಚೆಗುವಾರ, ಎಲ್ಲಾ ನನ್ನ ಮಕ್ಕಳೇ, ಓಥೆಲೋ, ನಮ್ಮೊಳಗೊಬ್ಬ ನಾಜೂಕಯ್ಯ ಹೀಗೆ ಪ್ರತಿಷ್ಠಿತ ನಾಟಕಗಳ ಪ್ರಯೋಗಗಳ ಸಂಖ್ಯೆ ಬೆಳೆಯುತ್ತಲೇ ಹೋಗುತ್ತದೆ. ನಟರಂಗದ ಬಹುತೇಕ ಎಲ್ಲಾ ನಾಟಕಗಳಿಗೆ ಬೆಳಕು ವಿನ್ಯಾಸ ಮಾಡಿ, ತಂಡವನ್ನು ಸಂಘಟಿಸಿದ ಕಪ್ಪಣ್ಣ . 'ನಟರಂಗ'ದ ಮೂಲಕ ಒಂದು ಹೊಸ ಸಾಹಸಕ್ಕೆ ಮುನ್ನುಡಿ ಬರೆದರು. ಅದು 'ಕಾಕನಕೋಟೆ' ನಾಟಕವನ್ನು ಚಲನಚಿತ್ರವನ್ನಾಗಿಸಿದ ಒಂದು ಅಪೂರ್ವ ಘಟನೆ.

ಭಾರತದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಒಂದು ಹವ್ಯಾಸಿ ರಂಗ ತಂಡ ತಾನು ಪ್ರಯೋಗಿಸಿದ ನಾಟಕವನ್ನು ಚಲನಚಿತ್ರನಿರ್ಮಾಣಕ್ಕೆ ಕೈ ಹಾಕಿ, ಯಶಸ್ವಿಯಾಗಿದ್ದು, ಇದೇ ಪ್ರಥಮ ಎನ್ನಬಹುದು. ಮಾಸ್ತಿ ವೆಂಕಟೇಶ ಅಯ್ಯಂಗಾರರ ನಾಟಕ 'ಕಾಕನಕೋಟೆ' ಸಿನಿಮಾ ಆಗುವಾಗ ಸಿನಿಮಾ ಪ್ರಪಂಚಕ್ಕೆ ಎಲ್ಲರೂ ಹೊಸಬರೇ. ಬಹುಶಃ ಲೋಕನಾಥ್, ಹಾಗೂ ಶ್ರೀನಾಥ್ ಅವರನ್ನು ಹೊರತು ಪಡಿಸಿದರೆ ನಟ ವರ್ಗದವರೂ ಹೊಸಬರೇ. ಸಿ.ಆರ್.ಸಿಂಹ ಸಿನಿಮಾ ನಿರ್ದೇಶನದ ಹೊಣೆ ಹೊತ್ತರೆ, ಸಿ.ಅಶ್ವತ್ಥ್ ಅವರು ಮೊದಲಬಾರಿಗೆ ಸಿನಿಮಾಕ್ಕೆ ಸಂಗೀತ ನಿರ್ದೇಶನ ಮಾಡಿದರು. ಯಥಾಪ್ರಕಾರ ಕಪ್ಪಣ್ಣ ನಿರ್ಮಾಣ, ಸಂಘಟನೆಯ ಜವಾಬ್ದಾರಿ ಹೊತ್ತರು. ಕಾಕನಕೋಟೆ ಸಿನಿಮಾ ಆದ ಪ್ರಕ್ರಿಯೆಯೇ ಒಂದು ಪುಸ್ತಕಕ್ಕೆ ಆಕರವಾಗಬಲ್ಲದು. ಕಾಕನಕೋಟೆ ಯಶಸ್ವಿ ಸಿನಿಮಾ ಅಷ್ಟೇ ಅಲ್ಲ, ಪ್ರಶಸ್ತಿ ಪುರಸ್ಕಾರಗಳಿಗೂ ಪಾತ್ರವಾಯಿತು. ನಂತರದಲ್ಲಿ ಸಿ.ಆರ್.ಸಿಂಹ, ಲೋಕೇಶ್ ಮುಂತಾದ ಅನೇಕರು ಕನ್ನಡ ಚಲನಚಿತ್ರರಂಗದ ಅವಿಭಾಜ್ಯ ಅಂಗವಾದರು.

'ನಟರಂಗ'ದ ಯಶಸ್ಸಿಗೆ ಮುಖ್ಯಕಾರಣ. ಕಲಾತಂಡದಲ್ಲಿದ್ದ ಕೌಟುಂಬಿಕ ವಾತಾವರಣ, ಒಂದು ಅವಿಭಕ್ತ ಕುಟುಂಬದ ಮಾದರಿಯ ರಂಗ ತಂಡವಾಗಿ 'ನಟರಂಗ' ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿದೆ. ಈ ಕುಟುಂಬದ ಹಿರಿಯರಲ್ಲಿ ಕಪ್ಪಣ್ಣ ಕೂಡ ಒಬ್ಬರಾಗಿದ್ದರು ಎನ್ನುವುದು ಕಪ್ಪಣ್ಣ ಅವರಿಗೂ ಹೆಮ್ಮೆಯ ವಿಷಯ. ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ಸಿ.ಆರ್.ಸಿಂಹ ಅವರಿಗೆ ಏಕಕಾಲಕ್ಕೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಬಂದದ್ದು ಕೂಡ ಕನ್ನಡ ರಂಗಭೂಮಿ ಮತ್ತು ನಟರಂಗ ಹೆಮ್ಮೆ ಪಡಬೇಕಾದ ಸಂಗತಿ.

ರಂಗದಾರ್ಶನಿಕ ಬಿ.ವಿ.ಕಾರಂತರು 1972ರಲ್ಲಿ ಮಾಡಿದ ವಿಶಿಷ್ಟ ಬಯಲುರಂಗ ಪ್ರಯೋಗದ ಪರಿಣಾಮ 'ನಟರಂಗ'ದ ಹುಟ್ಟಿಗೆ ಕಾರಣವಾದುದನ್ನು ಕಪ್ಪಣ್ಣ ನೆನಪಿಸಿಕೊಳ್ಳುತ್ತಾರೆ. ದೊರೆ ಈಡಿಪಸ್, ಸಂಕ್ರಾಂತಿ ಹಾಗೂ ಜೋಕುಮಾರಸ್ವಾಮಿ ಪ್ರಯೋಗಗಳು ಸಿದ್ಧಗೊಳ್ಳುವಾಗ, ಅಂದು ಕ್ರಿಯಾಶೀಲರಾಗಿದ್ದ ಅನೇಕ ರಂಗಾಸಕ್ತರು ಈ ಮೂರು ನಾಟಕಗಳ ಪ್ರಕ್ರಿಯೆಯಿಂದ ಹೊರಗುಳಿಯುತ್ತಾರೆ. ಇದಕ್ಕೆ ಮುನ್ನ, ಕನ್ನಡ ಸಾಹಿತ್ಯ ಕಲಾ ಸಂಘದ ಮೂಲಕ ಹೊಸ ಬಗೆಯ ನಾಟಕಗಳಿಗೆ ಬುನಾದಿಯಾಗಿದ್ದು, ಪ್ರೊ.ಬಿ. ಚಂದ್ರಶೇಖರ್ ಅವರ ನಿರ್ದೇಶನದಲ್ಲಿ 'ತುಘಲಕ್' ನಾಟಕವೂ ಪ್ರಯೋಗಗೊಂಡಿತ್ತು. ಆದರೆ ಕಾರಂತರ ಬಯಲುರಂಗ ಪ್ರಯೋಗಗಳಿಗೆ ಹೊರತಾಗಿದ್ದು ಯುವಕರಲ್ಲಿದ್ದ ಬಂಡಾಯ ಪ್ರವೃತ್ತಿಯಿಂದಾಗಿ, ಎರಡು ತಂಡಗಳು ಏಕಕಾಲಕಕೆ ಅಸ್ತಿತ್ವಕ್ಕೆ ಬಂದವು. ಒಂದು 'ನಟರಂಗ' ಮತ್ತೊಂದು 'ರಂಗಸಂಪದ'. ಈ ಎರಡೂ ತಂಡಗಳ ಕೊಡುಗೆ ರಂಗಭೂಮಿಗೆ ಅನನ್ಯವಾದುದು. ಇದು ಕಪ್ಪಣ್ಣ ಅವರ ಅನಿಸಿಕೆ ಅಷ್ಟೇ ಅಲ್ಲ, ರಂಗ ಇತಿಹಾಸವನ್ನು ಬಲ್ಲ ಎಲ್ಲರ ಅನಿಸಿಕೆಯೂ ಹೌದು. ನಟರಂಗ, ರಂಗಸಂಪದ, ಸ್ಪಂದನ, ಬೆನಕ, ಸಮುದಾಯ, ಕಲಾಗಂಗೋತ್ರಿ, ಮುಂತಾದ ತಂಡಗಳು 70ರ ದಶಕದ ಹವ್ಯಾಸಿ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದವು. ಪರಸ್ಪರ ಆರೋಗ್ಯಪೂರ್ಣ ಪೈಪೋಟಿ ಈ ತಂಡಗಳ ನಡುವೆ ಏರ್ಪಟ್ಟಿತ್ತು. ನಾಟಕದ ಆಯ್ಕೆ, ಪ್ರಯೋಗ ವಿಧಾನ, ಪ್ರೇಕ್ಷಕರನ್ನು ತಲುಪುವ ರೀತಿ ಎಲ್ಲದರಲ್ಲೂ ವಿಶೇಷ ಭಿನ್ನತೆ ಈ ರಂಗತಂಡಗಳಲ್ಲಿತ್ತು. ಹಾಗಾಗಿ ಇಂದಿಗೂ 70–80ರ ದಶಕದ ಬೆಂಗಳೂರು ರಂಗಭೂಮಿಯ ಚಟುವಟಿಕೆಗಳನ್ನು ವಿಶೇಷ ಅರ್ಥದಲ್ಲಿ ನೋಡಲಾಗುತ್ತದೆ.

ನಟರಂಗ ತಂಡದ ಪೋಲಿಕಿಟ್ಟಿ, ತುಘಲಕ್, ಕಾಕನಕೋಟೆ, ಎಮಿಡ್‌ಸಮ್ಮರ್ ನೈಟ್ಸ್‌ಡ್ರೀಂ, ಚೆಗುವಾರ, ಎಲ್ಲಾ ನನ್ನ ಮಕ್ಕಳೇ, ಓಥೆಲೋ, ಮುಂತಾದ ನಾಟಕಗಳು ಇಂದಿಗೂ ಜನಮನದಲ್ಲಿ ಹಸಿರಾಗಿವೆ. ಸಿ.ಆರ್.ಸಿಂಹ, ಲೋಕೇಶ್, ಲೋಕನಾಥ್, ವೆಂಕಟರಾವ್, ಗಿರಿಜಾ ಲೋಕೇಶ್, ಉಮಾಶಿವಕುಮಾರ್, ಪದ್ಮಜಾ ಶ್ರೀನಿವಾಸ್, ರಾಜಾರಾಂ, ಮುಂತಾದ ಅಸಮಾನ್ಯ ಕಲಾವಿದರು ಇದ್ದಂತಹ ತಂಡ. ಶ್ರೀನಿವಾಸ ಜಿ. ಕಪ್ಪಣ್ಣ ತಂಡದ ಸಂಘಟನೆ, ತಾಂತ್ರಿಕ ವಿಭಾಗಗಳಲ್ಲಿ ಹೆಚ್ಚು ತೊಡಗಿಕೊಂಡಿದ್ದರು.

'ನಟರಂಗ'ವನ್ನು ಹೊಸ ಪೀಳಿಗೆಯ ಕಲಾವಿದರಿಂದ ಕಟ್ಟಬೇಕೆನ್ನುವ ಹಂಬಲ ಹೊತ್ತು ಕಪ್ಪಣ್ಣ ಅವರು ಮಾಡಿದ ಪ್ರಯತ್ನ ದಾಖಲಾರ್ಹ. ಇವರು ರಂಗಭೂಮಿಗೆ ತಂದು, ವೇದಿಕೆ ಹತ್ತಿಸಿದ ರಾಜೇಶ, ಮೋಹನ್, ನಂದಿತಾ, ಶಶಿಕುಮಾರ ಮುಂತಾದವರು ರಂಗದ ಮೇಲೆ ಮಿಂಚಿದ್ದಕ್ಕಿಂತ ಕಿರುತೆರೆ, ಸಿನಿಮಾಗಳಿಗೆ ಅನಿವಾರ್ಯವಾದರು. 'ಕಾಕನಕೋಟೆ' ಮರುಪ್ರದರ್ಶನ, ನಂತರ ಸಿರಿಸಂಪಿಗೆ,

ಜಲಗಾರ, ಕಾನೂರು ಹೆಗ್ಗಡತಿ, ಮುಂತಾದ ನಾಟಕಗಳ್ನು ನಟರಂಗದ ಮೂಲಕ ಪ್ರದರ್ಶಿಸಲು ಅನುವು ಮಾಡಿಕೊಟ್ಟ ಕಪ್ಪಣ್ಣ ಹೊಸ ಹೊಸ ಕಲಾವಿದರು ರಂಗಭೂಮಿಗೆ ಪರಿಚಯವಾಗಲು ಕಾರಣರಾದರು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ನೇತೃತ್ವದಲ್ಲಿ ಆರಂಭವಾಗಿದ್ದ ಕನ್ನಡ ಸಾಂಸ್ಕೃತಿಕ ವಲಯದ ಪ್ರಾತಿನಿಧಿಕ ಸಂಸ್ಥೆ 'ನಾಟ್ಯಸಂಘ ಥಿಯೇಟರ್ ಸೆಂಟರ್' ಒಂದು ವಿಶಿಷ್ಟಪ್ರಯೋಗ. ರಾಜ್ಯಮಟ್ಟದಲ್ಲಿ ರಂಗಭೂಮಿ ಚಟುವಟಿಕೆಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ಸಂಸ್ಥೆಯ ಕಾರ್ಯ ಅನನ್ಯವಾದುದು. ನಾಟ್ಯ ಸಂಘ ಥಿಯೇಟರ್ ಸೆಂಟರ್ ನಡೆಸುತ್ತಿದ್ದ ಡಾ. ರಾಜಕುಮಾರ್ ಪಾರಿತೋಷಕ, ಉಲ್ಲಾಳ ಶೀಲ್ಡ್ ನಾಟಕ ಸ್ಪರ್ಧೆಗಳು ಅಪಾರ ಜನಪ್ರಿಯತೆಯನ್ನು ಗಳಿಸಿದ್ದು, 80ರ ದಶಕದಲ್ಲಿ ಈ ನಾಟ್ಯ ಸಂಘದ ಚುಕ್ಕಾಣಿ ಹಿಡಿದವರು ಶ್ರೀನಿವಾಸ ಜಿ. ಕಪ್ಪಣ್ಣ. ಉಮೇಶರುದ್ರ, ಲೋಕೇಶ್ ಅವರೊಡಗೂಡಿ ಇವರು ನಡೆಸಿದ ಚಟುವಟಿಕೆ ಕನ್ನಡ ರಂಗಭೂಮಿಯ ಸುವರ್ಣಕಾಲವೆನ್ನಬಹುದು.

ರಾಷ್ಟ್ರಮಟ್ಟದ ಈ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯ ಹೊರತುಪಡಿಸಿ ದೇಶದ ಉಳಿದ ಸಾಂಸ್ಕೃತಿಕ ಕೇಂದ್ರಗಳಲ್ಲಿರುವ ಕನ್ನಡ ಸಂಘಟನೆಗಳನ್ನು ಆಹ್ವಾನಿಸಿ, ಕನ್ನಡ ರಂಗಪರಂಪರೆ ರಾಷ್ಟ್ರದ ವಿವಿಧ ಕೇಂದ್ರಗಳಲ್ಲಿ ಬೆಳೆಸಲು ಕಪ್ಪಣ್ಣ ಕಾರಣರಾದರು. ಮುಂಬೈನ ಮೈಸೂರು ಅಸೋಸಿಯೇಶನ್, ಕರ್ನಾಟಕ ಸಂಘ, ಕನ್ನಡಕಲಾಕೇಂದ್ರ, ದೆಹಲಿಯ ಕನ್ನಡ ಸಂಘ, ಅಹಮದಾಬಾದ್, ಕಲ್ಕತ್ತಾ, ಚೆನ್ನೈ, ಹೈದರಾಬಾದ್ ಕನ್ನಡ ಸಂಘಟನೆಗಳೊಂದಿಗೆ ಇವರು ಸಂಪರ್ಕ ಸಾಧಿಸಿ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಏರುಗತಿ ತಂದವರು ಕಪ್ಪಣ್ಣ.

ವಾರ್ತಾಇಲಾಖೆಯ ಅಧಿಕಾರಿಯಾಗಿಯೂ ಕನ್ನಡ ರಂಗಭೂಮಿಗೆ ಹೆಚ್ಚು ವ್ಯಾಪಕತೆ ಒದಗಲು ಇವರು ಶ್ರಮಿಸಿದರು. ಸರ್ಕಾರದ ಪ್ರಚಾರ ನಾಟಕಗಳ ಜೊತೆಗೆ ಕನ್ನಡದ ಪ್ರಮುಖ ನಾಟಕಗಳನ್ನು ರಾಜ್ಯದ ಹಳ್ಳಿಹಳ್ಳಿಗಳಿಗೆ ತಲುಪಿಸಿದ ಕೀರ್ತಿ ಇವರಿಗೆ ತಲುಪಬೇಕು. ಅಲ್ಲದೆ ಈ ನಾಟಕಗಳು ದೇಶದ ವಿವಿಧ ಭಾಗಗಳಲ್ಲಿ ಕನ್ನಡ ರಾಜ್ಯೋತ್ಸವಗಳ ಸಂದರ್ಭದಲ್ಲಿ ನಾಟಕೋತ್ಸವಗಳಲ್ಲಿ ಪ್ರದರ್ಶನವಾಗುವಂತೆ ಮಾಡುವಲ್ಲಿ ಕಪ್ಪಣ್ಣ ಅವರ ಪಾತ್ರ ಹಿರಿದಾದುದು. ಸಂಘಟನೆಯೆಂಬುದನ್ನು ಒಂದು ಕಲಾತ್ಮಕ ಅಂಶವಾಗಿ, ಪ್ರಮೇಯವನ್ನು ಸಿದ್ಧಪಡಿಸಿದವರು ಕಪ್ಪಣ್ಣ.

## ನಾಟಕ ಅಕಾಡೆಮಿಯಲ್ಲಿ.....

ವಾರ್ತಾಇಲಾಖೆಯಿಂದ ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ನಿಯೋಜನೆಗೊಂಡು ಬಂದ ಸಂದರ್ಭವು ವಿಶಿಷ್ಟವಾದದು. ರಂಗಭೂಮಿಯ ಮೇಲೆ ತೀವ್ರತೆರನಾದ ಆಸಕ್ತಿ ಹಾಗೂ ಪ್ರೀತಿಯ ಫಲವೇ ಅವರು ಈ ಹುದ್ದೆಗೆ ಬಂದಿದ್ದು.

ತಮ್ಮ ಕಲ್ಪನೆಯ ಸಮಗ್ರ ರಂಗಭೂಮಿಯನ್ನು ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಹಾಗೂ ಅಧ್ಯಕ್ಷರಾಗಿ ಸಾಕಾರಗೊಳಿಸಲು ಪ್ರಯತ್ನಿಸಿದರು. ಡಾ.ಕೆ.ಮರುಳಸಿದ್ಧಪ್ಪ, ಪದ್ಮಶ್ರೀ ಚಿಂದೋಡಿಲೀಲಾ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕಪ್ಪಣ್ಣ ರಿಜಿಸ್ಟ್ರಾರ್ ಆಗಿದ್ದರು. ಲೋಕ ಪ್ರಸಿದ್ಧ ಪೀಟರ್ ಬ್ರೂಕ್ 'ಮಹಾಭಾರತ' ನಾಟಕದ ಸಿನಿಮಾ ಅವತರಿಣಿಕೆಯ ಪ್ರದರ್ಶನ ವ್ಯವಸ್ಥೆ ಹಾಗೂ ಕಾರ್ಯಗಾರವನ್ನು ವಿಶಿಷ್ಟವಾಗಿ ಸಂಘಟಿಸಿದ್ದು, ಅನೇಕ ರಾಷ್ಟ್ರೀಯ ನಾಟಕೋತ್ಸವಗಳು ಬೆಂಗಳೂರು, ಮೈಸೂರು, ಧಾರವಾಡ ಮುಂತಾದೆಡೆ ಸಂಘಟಿಸಿದ್ದು ಇವರ ಕ್ರಿಯಾಶೀಲತೆಗೆ ಸಾಕ್ಷಿ.

ಪ್ರಧಾನಿ ರಾಜೀವಗಾಂಧಿಯವರು ಹತ್ಯೆಯಾದ ಒಂದು ವರ್ಷಕ್ಕೆ, ಅವರ ನೆನಪಿನಲ್ಲಿ ಗೌರವ ಸಲ್ಲಿಸುವ ಬೃಹತ್ ನಾಟಕೋತ್ಸವ ಸರಣಿಯನ್ನು ವಿಶಿಷ್ಟವಾಗಿ ಸಂಘಟಿಸಿದರು. ರಾಜ್ಯದ 30 ಜಿಲ್ಲೆಗಳಲ್ಲಿ ಯುವ ನಿರ್ದೇಶಕರಿಂದ ಏಕಕಾಲಕ್ಕೆ ರಂಗತರಬೇತಿ ಶಿಬಿರ, ನಾಟಕ ಪ್ರದರ್ಶನ, ವಿಭಾಗೀಯ ನಾಟಕೋತ್ಸವ, ರಾಜ್ಯಮಟ್ಟದ ನಾಟಕೋತ್ಸವಗಳನ್ನು ಏರ್ಪಡಿಸಿ, ಹವ್ಯಾಸಿರಂಗಚಳವಳಿಗೆ ಸಂಚಲನವನ್ನು ಉಂಟು ಮಾಡಿದರು. ರಂಗಸಮಾವೇಶ, ವಿಚಾರ ಸಂಕಿರಣ, ನಾಟಕ ರಚನಾ ಶಿಬಿರಗಳು ರಂಗೋತ್ಸವಗಳು, ಒಟ್ಟು ನಾಟಕ ಅಕಾಡೆಮಿಯ ಕ್ರಿಯಾಶೀಲತೆಯನ್ನು ತೆರೆದು ತೋರಿದ ಕ್ಷಣಗಳು.

ಇವರು ರಿಜಿಸ್ಟ್ರಾರ್ಡ್ ಆಗಿದ್ದ ಸಂದರ್ಭದಲ್ಲಿ ಕನ್ನಡದ ಮೇರು ನಟ ಡಾ.ರಾಜಕುಮಾರ್ ಅವರಿಗೆ 'ಕಲಾಕೌಸ್ತುಭ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಳಗಾವಿಯಲ್ಲಿ ಅದ್ಭುತವಾಗಿ ಸಂಘಟಿಸಿದ್ದು ಒಂದು ದಾಖಲೆ.

ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯನ್ನು ಚಿಂದೋಡಿ ಲೀಲಾ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಜಾರಿಯಾಗುವಂತೆ ಅವರು ಶ್ರಮಿಸಿದರು. 25ಕ್ಕೂ ಹೆಚ್ಚು ವೃತ್ತಿ ಕಂಪನಿಗಳು ಆ ಸಂದರ್ಭಕ್ಕೆ ಇದರ ಪ್ರಯೋಜನ ಪಡೆದಿದ್ದವು.

ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಇವರು ಮಾಡಿದ ಅನೇಕ ಯೋಜನೆಗಳಲ್ಲಿ ರಾಷ್ಟ್ರೀಯ ರಂಗೋತ್ಸವ ಹಾಗೂ 'ಸಿದ್ಧ ನಾಟಕಗಳು ನಿಷಿದ್ಧ' ಎಂಬ ಆಶಯದೊಂದಿಗೆ ಹೊಸ ನಾಟಕಗಳು ಕನ್ನಡ ರಂಗಭೂಮಿಗೆ ದೊರಕುವಂತೆ ಮಾಡಿದ ಪ್ರಯೋಗ. 80ರ ದಶಕದ ನಂತರ ಹಿನ್ನಡೆ ಅನುಭವಿಸಿದ್ದ ಹವ್ಯಾಸಿ ರಂಗಭೂಮಿಗೆ ಮತ್ತೆ ಜೀವತುಂಬಿದ್ದನ್ನು ಸ್ಮರಿಸಬಹುದು. ಈ ಚಟುವಟಿಕೆ ಇವರ ಸಂಘಟನಾ ಚಾತುರ್ಯಕ್ಕೆ ಇವರ ಉಸ್ತುವಾರಿಯಲ್ಲಿ ಜರುಗುತ್ತಿದ್ದ ಕನ್ನಡ ರಾಜ್ಯೋತ್ಸವದ ಪ್ರಶಸ್ತಿ ಪ್ರದಾನ ಸಮಾರಂಭಗಳು, ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭಗಳು, ಹಾಗೆಯೇ ವಾರ್ತಾಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಕರ್ನಾಟಕ ರಾಜ್ಯ

ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭಗಳು ಇಂದಿಗೂ ಒಂದು ಮಾದರಿಯಾಗಿವೆ. ಹಾಗೆಯೇ ಮಾರ್ಗದರ್ಶಕ ಸೂಚಕಗಳೂ ಆಗಿವೆ.

ದೇಶದ ವಿವಿಧ ಮುಖ್ಯ ಕೇಂದ್ರಗಳಲ್ಲಿ ಕರ್ನಾಟಕ ಉತ್ಸವಗಳನ್ನು ವಿಶಿಷ್ಟವಾಗಿ ಆಚರಿಸಿದ ಹೆಗ್ಗಳಿಕೆ ಇವರದು. ಯಾವುದೇ ಚಿಕ್ಕ ಸಮಾರಂಭವಿರಲಿ, ತಮ್ಮ ಕಣ್ಣಾವಲಿನಲ್ಲಿ ಒಂದು ಉತ್ಕೃಷ್ಟ ಕಲಾಭಿವ್ಯಕ್ತಿಯನ್ನಾಗಿರುವ ಗುಣ ಕಪ್ಪಣ್ಣನವರಿಗೆ ಸಿದ್ಧಿಸಿದೆ. ಅಪಾರ ಸಮಯ ಪ್ರಜ್ಞೆ ಮತ್ತು ಬದ್ಧತೆ, ತನ್ನ ತೆಕ್ಕೆಗೆ ಬಂದ ಯಾವುದೇ ಕೆಲಸಕ್ಕೆ 'ಕಪ್ಪಣ್ಣ ಟಚ್' ನೀಡುವ ಪರಿ ಇಂದಿಗೂ ನಮ್ಮ ಸಾಂಸ್ಕೃತಿಕ ವಲಯದಲ್ಲಿ ಒಂದು ವಿಸ್ಮಯವನ್ನೇ ಹುಟ್ಟು ಹಾಕಿದೆ.

ಇವರು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಹೊರನಾಡ ಕನ್ನಡಿಗರಿಗಾಗಿ ವಿಶಿಷ್ಟ ಕಾರ್ಯಯೋಜನೆಗಳನ್ನು ಹಾಕಿಕೊಂಡು ಯಶಸ್ವಿಗೊಳಿಸಿದರು. ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಹೇಗೆ ಗ್ರಾಮೀಣ ರಂಗೋತ್ಸವ, ರಂಗತರಬೇತಿ ಶಿಬಿರಗಳನ್ನು ಏರ್ಪಡಿಸುವ ಮೂಲಕ ನಗರ ಕೇಂದ್ರಿತ ರಂಗಭೂಮಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತರಿಸಿದರೋ ಹಾಗೆಯೇ ಮುಂಬೈ, ದೆಹಲಿ, ಚೆನ್ನೈ, ಹೈದರಾಬಾದ್, ಕಲ್ಕತ್ತಾ ಮುಂತಾದ ದೇಶದ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸಲು ಸ್ಥಳೀಯ ಸಂಘಟನೆಗಳಿಗೆ ನೆರವಾದರು.

ಕನ್ನಡ ರಂಗಭೂಮಿಯ ವೈವಿಧ್ಯಮಯ ನಾಟಕಗಳನ್ನು, ಕನ್ನಡ ನಾಟಕಕಾರರನ್ನು ಅನ್ಯಭಾಷಿಕರಿಗೆ ಪರಿಚಯಿಸುವಲ್ಲಿ ಇವರು ನಡೆಸಿದ ಪ್ರಯುಕ್ತ ಗಮನಾರ್ಹ ಕನ್ನಡದ ನಾಟಕಗಳನ್ನು ರಾಷ್ಟ್ರದ ಇನ್ನಿತರ ಪ್ರಾದೇಶಿಕ ಭಾಷೆಗಳಿಗೆ, ಮುಖ್ಯವಾಗಿ ಹಿಂದಿ, ಇಂಗ್ಲೀಷ್ ಭಾಷೆಗಳಿಗೆ ತರ್ಜುಮೆಗೊಳ್ಳಲು ಹಾಗು ಆ ಭಾಷೆಗಳಲ್ಲಿ ಕನ್ನಡ ನಾಟಕಗಳು ಪ್ರದರ್ಶಿತಗೊಳ್ಳಲು ಇವರು ಮುಖ್ಯ ಕಾರಣರು.

ಮುಂಬೈನಲ್ಲಿ ಗಿರೀಶ್ ಕಾರ್ನಾಡ ನಾಟಕಗಳ ಉತ್ಸವ, ಡಾ. ಚಂದ್ರಶೇಖರ ಕಂಬಾರರ ನಾಟಕಗಳ ಉತ್ಸವ, ಶ್ರೀರಂಗರ ಶತಮಾನೋತ್ಸವದ ಸಂದರ್ಭದ ನಾಟಕೋತ್ಸವಗಳನ್ನು ಸಂಘಟಿಸುವಲ್ಲಿ ಇವರ ಪಾತ್ರ ಉಲ್ಲೇಖನೀಯ.

ಕನ್ನಡೇತರ ರಂಗಾಸಕ್ತರನ್ನು ಸೆಳೆಯಲು ಬಹುಭಾಷಾ ನಾಟಕೋತ್ಸವ, ಕನ್ನಡದ ನಾಟಕಕಾರರ ನಾಟಕಗಳನ್ನು ಇಂಗ್ಲೀಷ್, ಹಿಂದಿ, ಮರಾಠಿ ಭಾಷೆಗಳಲ್ಲಿ ಆಡಿಸುವುದರ ವಿಶಿಷ್ಟಯೋಜನೆಯ ಯಶಸ್ಸಿಗೂ ಇವರ ಕಾಣಿಕೆ ಅಪಾರ.

ಕರ್ನಾಟಕ ಸರ್ಕಾರ ಹಮ್ಮಿಕೊಂಡಿದ್ದ ಅನೇಕ ಸಾಂಸ್ಕೃತಿಕ ಉತ್ಸವಗಳನ್ನು ಯಶಸ್ವಿಗೊಳಿಸಿದ್ದು ಕಪ್ಪಣ್ಣನವರ ಹೆಗ್ಗಳಿಕೆ. ಇವರ ಸಾಂಸ್ಕೃತಿಕ ಬದ್ಧತೆ,

ರಂಗಭೂಮಿಯ ಮೇಲಿನ ಅಪಾರ ಪ್ರೇಮವನ್ನು ಹೊರನಾಡಿನ ಕನ್ನಡ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾಂಸ್ಕೃತಿಕ ಲೋಕದ ಪ್ರತಿನಿಧಿಗಳು ಇಂದಿಗೂ ಕೃತಜ್ಞತೆಯಿಂದ ನೆನೆಯುತ್ತಾರೆ.

ಕಪ್ಪಣ್ಣನವರು ಅಕಾಡೆಮಿ ಅಧ್ಯಕ್ಷರಾಗಿದ್ದಾಗ, ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಮಾಡಿದ ನಾಟಕ ಚಟುವಟಿಕೆಗಳದ್ದೇ ಒಂದು ವಿಶಿಷ್ಟ ದಾಖಲಾತಿಯಾಗುತ್ತದೆ. ದೂರದ ಗುಲ್ಬರ್ಗ ವಿರಲಿ, ಬೆಳಗಾವಿ ಅಥವಾ ತುಮಕೂರು ಹೀಗೆ ಯಾವ ಜಿಲ್ಲೆಯ ಅಂದಿನ ಕಾಲಘಟ್ಟದ ನಾಟಕ ಅಕಾಡೆಮಿಯ ಚಟುವಟಿಕೆಗಳನ್ನು ಗಮನಿಸಿದರೆ ಅದು ಎಲ್ಲರಿಗೂ ತಿಳಿಯುತ್ತದೆ.

ಅಕಾಡೆಮಿ ಅಧ್ಯಕ್ಷರಾದ ಸಂದರ್ಭದಲ್ಲಿ, ಸರ್ಕಾರ ಇವರಿಗೆ ಕೊಟ್ಟಿದ್ದು 15 ಜನ ಸದಸ್ಯರನ್ನು. ಇವರ ಜೊತೆಗೆ ಇನ್ನು 15 ಮಂದಿ ಪ್ರಾತಿನಿಧಿಕ ಜಿಲ್ಲಾ ಸಂಚಾಲಕರನ್ನು ಗುರುತಿಸಿ 30 ಜಿಲ್ಲೆಗಳಿಗೂ ಪ್ರಾತಿನಿಧ್ಯ ದೊರಕುವಂತೆ ತಮ್ಮ ವಿವೇಚನೆಗನುಗುಣವಾಗಿ ಮಾಡಿಕೊಂಡು ಏಕಕಾಲಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ರಂಗಕಾರ್ಯಕ್ಕೆ ತೊಡಗಿದರು. ಜಿಲ್ಲಾ ಸಂಚಾಲಕರ ಸಹಕಾರ ಹಾಗೂ ಕಪ್ಪಣ್ಣನವರ ಮಾರ್ಗದರ್ಶನ, ಪ್ರತಿಯೊಂದು ಜಿಲ್ಲೆಯಲ್ಲೂ ವಿಶಿಷ್ಟವಾದ ವಿಬಿನ್ನ ಚಟುವಟಿಕೆ.

ತುಮಕೂರಿನಲ್ಲಿ ದೆಹಲಿಯ ರಾಷ್ಟ್ರೀಯ ರಂಗೋತ್ಸವವನ್ನು ಅಯೋಜಿಸಿದ ಕಪ್ಪಣ್ಣ ವೃತ್ತಿ ರಂಗಭೂಮಿಯ ದಂತಕಥೆ ಗುಬ್ಬಿವೀರಣ್ಣ ಅವರನ್ನು ಕುರಿತಂತೆ, "ದೇಶದ ಗೌರವ ಡಾ॥ ಗುಬ್ಬಿವೀರಣ್ಣ" ಎಂಬ ಕಾರ್ಯಕ್ರಮ ರೂಪಿಸಿ ಯಶಸ್ವಿಗೊಳಿಸಿದರು. ತುಮಕೂರಿನ ಎಲ್ಲಾ ತಾಲ್ಲೂಕುಗಳಲ್ಲಿ ಈ ರಂಗಯಾತ್ರೆ ಸಂಚರಿಸಿ ರವೀಂದ್ರ ಕಲಾಕ್ಷೇತ್ರದಲ್ಲಿ ಸಮಾರೋಪಗೊಂಡಿತು.

ಹಾಗೆಯೇ ಗುಬ್ಬಿ ತಾಲ್ಲೂಕಿನ ಹೊಸಕೆರೆ ಗ್ರಾಮದಲ್ಲಿ 100 ಮಕ್ಕಳಿಗೆ ರಂಗತರಬೇತಿ ಶಿಬಿರ, ಮಧುಗಿರಿಯಲ್ಲಿ ಪೌರಾಣಿಕ ನಾಟಕೋತ್ಸವಗಳು ಇವೆಲ್ಲಾ ಗ್ರಾಮೀಣ ರಂಗಭೂಮಿಯತ್ತ ಕಪ್ಪಣ್ಣನವರಿಗಿದ್ದ ಒಲವನ್ನು ತೋರಿಸುತ್ತದೆ.

ಭಾರತದ ಸುವರ್ಣ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ, ತುಮಕೂರಿನ ಅಂದಿನ ಜಿಲ್ಲಾಧಿಕಾರಿ ಐ.ಎಂ.ವಿಠ್ಠಲಮೂರ್ತಿ ಅವರ ನೇತೃತ್ವದಲ್ಲಿ ಕಪ್ಪಣ್ಣ ರೂಪಿಸಿದ 'ವಂದೇಮಾತರಂ' ಕಾರ್ಯಕ್ರಮ ರಂಗಮಾಧ್ಯಮವನ್ನು ರಾಷ್ಟ್ರೀಯ ಭಾವನೆಯನ್ನು ಉದ್ದೀಪನಗೊಳಿಸಲು ಬಳಸಿ ಯಶಸ್ವಿಯಾದ ಕಾರ್ಯಕ್ರಮ. 600ರಕ್ಕೂ ಹೆಚ್ಚು ಶಾಲಾ ಮಕ್ಕಳನ್ನು ಒಂದುಗೂಡಿಸಿ, ತರಬೇತಿ ನೀಡಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ವಿಶಿಷ್ಟ ರಂಗರೂಪಕವನ್ನು ಕಪ್ಪಣ್ಣ ನಿರ್ದೇಶಿಸಿದರು. ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರ ಹಾಗು ಮುಖ್ಯಗ್ರಾಮಗಳಲ್ಲಿ ಈ ಸ್ವಾತಂತ್ರ್ಯದ ಅಭಿಯಾನ ನಡೆದು ಒಂದು ವಿಶಿಷ್ಟದಾಖಲೆಯನ್ನು ಬರೆಯಿತು.

ಪದ್ಮಶ್ರೀ ಚಂದೋಡಿಲೀಲಾ ಅವರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ಇವರು ರಿಜಿಸ್ಟ್ರಾರ್ ಆಗಿದ್ದರು. ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆ ಸೇರಿದಂತೆ, ಬೆಂಗಳೂರಿನ ಹೊರಗಿನ ಕೇಂದ್ರಗಳಲ್ಲಿ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭಗಳು, ದೂರದ ದೆಹಲಿಯಲ್ಲಿ ಅಕಾಡೆಮಿ ಸರ್ವಸದಸ್ಯರ ಸಭೆ, ವೃತ್ತಿ ನಾಟಕೋತ್ಸವ ಆಯೋಜನೆ, **ಬೆಳಗಾವಿಯಲ್ಲಿ ಡಾ. ರಾಜಕುಮಾರ್** ಅವರಿಗೆ ಪ್ರತಿಷ್ಠಿತ **"ಕಲಾಕೌಸ್ತುಭ"** ಪ್ರಶಸ್ತಿ ಜೊತೆಗೆ **ಬೆಳ್ಳಿಕಿರೀಟ** ತೊಡಿಸಿ ಗೌರವಿಸಿದ ಕಾರ್ಯಕ್ರಮ, ವಿಭಾಗೀಯ ಜಾನಪದ ರಂಗೋತ್ಸವ, ಹುಬ್ಬಳ್ಳಿ, ಗುಲ್ಬರ್ಗಾಗಳಲ್ಲಿ ರಾಷ್ಟ್ರೀಯ ರಂಗೋತ್ಸವಗಳು, ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗಾಗಿ ಯುವರಂಗೋತ್ಸವ ಇದೆಲ್ಲಾ ಅವರ ಪ್ರಚಂಡ ಆತ್ಮವಿಶ್ವಾಸ, ಅವರ ಸಾರ್ವಜನಿಕ ಸಂಪರ್ಕ ಸಂಘಟನಾ ಸಾಮರ್ಥ್ಯ, ಸಂಪನ್ಮೂಲಗಳನ್ನು ಹುಡುಕಿ ಸಂಗ್ರಹಿಸಿ ಕಾರ್ಯ ಯೋಜನೆಗಳನ್ನು ಯಶಸ್ವಿಗೊಳಿಸುವ ಅದರ ಬದ್ಧತೆಯನ್ನು ತೋರುತ್ತದೆ.

ಕರ್ನಾಟಕದ ಮೂಲೆ ಮೂಲೆಗಳಲ್ಲಿರುವ ಎಲ್ಲ ರಂಗ ಕರ್ಮಿಗಳೊಂದಿಗೆ ಸಂಪರ್ಕ ಸಾಧಿಸಿ, ರಂಗಕ್ರಿಯೆಯನ್ನು ನಿರಂತರಗೊಳಿಸುವ ಸಾಮರ್ಥ್ಯ ಪಡೆದಿರುವ ವ್ಯಕ್ತಿ ಕಪ್ಪಣ್ಣ. ಪ್ರತಿಯೊಬ್ಬರನ್ನು ಗುರುತಿಸುವ, ಗೌರವಿಸುವ, ಕಾರ್ಯಕ್ರಮಗಳಲ್ಲಿ ತೊಡಗಿಸುವ ಯಾವುದೇ ಸಂದರ್ಭದಲ್ಲಿ ಯಾರಿಗಾದರೂ ಸರಿಯೇ ಸಹಾಯ ಹಸ್ತ ಚಾಚಬಲ್ಲ ಕಪ್ಪಣ್ಣ, ಕನ್ನಡ ರಂಗಭೂಮಿಯ ಶ್ರೀರಕ್ಷೆ ಎಂದರೂ ತಪ್ಪಾಗಲಾರದು.

ಇಂತಹ ಅನೇಕ ವಿಸ್ಮಯಗಳನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಂಡ ಕನ್ನಡದ ಅನೇಕ ಹಿರಿಯರು ಇವರ ಬಗ್ಗೆ ನಾನಾ ರೀತಿಯಲ್ಲಿ ಉದ್ಧರಿಸಿದ್ದಾರೆ. ಕಪ್ಪಣ್ಣ ಅವರ ಕ್ರಿಯಾ ಚಟುವಟಿಕೆಯ ಚಿತ್ರಣಗಳನ್ನು ಕಟ್ಟಿ ಕೊಡಲು ಪ್ರಯತ್ನಿಸಿದ್ದಾರೆ.

ಕಪ್ಪಣ್ಣ ಅವರ ಕ್ರಿಯಾಶೀಲತೆಯನ್ನು ಅತಿ ಹತ್ತಿರದಿಂದ ಬಲ್ಲ ಡಾ.ಕೆ.ಮರುಳಸಿದ್ಧಪ್ಪ, ನಾಟ್ಯಸಂಘ ಥಿಯೇಟರ್ ಸೆಂಟರ್ ಮತ್ತು ನಾಟಕ ಅಕಾಡೆಮಿಗಳ ಸಂದರ್ಭದಲ್ಲಿ ಕಪ್ಪಣ್ಣನವರು ಮಾಡಿದ ಕಾರ್ಯಗಳ ಬಗ್ಗೆ ವಿಶಿಷ್ಟವಾಗಿ ನೆನೆಯುತ್ತಾರೆ. "ನಾಟ್ಯಸಂಘ ಥಿಯೇಟರ್ ಸೆಂಟರ್‌ನ ಕಾರ್ಯದರ್ಶಿಯಾಗಿ ಕನ್ನಡ ರಂಗಪರಂಪರೆಯನ್ನು ಕಟ್ಟಿದವರು ಕಪ್ಪಣ್ಣ. ಹತ್ತು ವರ್ಷಗಳ ಕಾಲ ನಾಟ್ಯಸಂಘ ನಡೆಸಿದ ರಾಜ್ಯಮಟ್ಟದ ಉಲ್ಲಾಳ್ ಶೀಲ್ಡ್ ನಾಟಕಸ್ಪರ್ಧೆ, ನಾಟಕೋತ್ಸವಗಳು, ಸಾಹಿತ್ಯ ಸಭಾದ ಕಾರ್ಯಕ್ರಮಗಳು, ಸಂಗೀತ ಕಾರ್ಯಕ್ರಮಗಳು, ಬೆಂಗಳೂರಿನ ಸಾಂಸ್ಕೃತಿಕ ವಲಯದಲ್ಲಿ ಯಾರೂ ಮರೆಯಲಾಗದ ದಿನಗಳಾಗಿವೆ......."

"ವಾರ್ತಾ ಇಲಾಖೆಯ ಅಧಿಕಾರಿಯಾಗಿದ್ದ ಇವರಿಗೆ ಸಹಜವಾಗಿ ರಾಜ್ಯದ ಮುಖ್ಯಮಂತ್ರಿಗಳು, ಸಂಸ್ಕೃತಿ ಸಚಿವರು, ವಾರ್ತಾಮಂತ್ರಿಗಳು ಹಾಗೂ ಸಂಬಂಧಪಟ್ಟ

ಇಲಾಖೆಯ ಅಧಿಕಾರಿಗಳ ಸಂಪರ್ಕವಿರುತ್ತಿತ್ತು. ಸರ್ಕಾರದ ವತಿಯಿಂದ ನಡೆಯುವ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಿರಲಿ, ಅದನ್ನು ಕಪ್ಪಣ್ಣ ಅವರ ಹೆಗಲಿಗೆ ಹಾಕಿದರೆಂದರೆ ಆ ಕಾರ್ಯಕ್ರಮ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ನಿರಾಳವಾಗಿ ಬಿಡುತ್ತಿದ್ದರು. ಕಪ್ಪಣ್ಣ ತಾವು ಹೊತ್ತ ಕೆಲಸ ಎಷ್ಟೇ ಅಗಾಧವಾಗಿರಲಿ, ತಮ್ಮ ಸ್ವಯಂಸ್ಫೂರ್ತಿ ನಾಯಕತ್ವ ಗುಣ ಹಾಗೂ ಅಪಾರಸ್ನೇಹ ವಲಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ತೆರೆದ ಮನಸ್ಸಿನ ವ್ಯಕ್ತಿತ್ವದಿಂದಾಗಿ ಯಶಸ್ವಿಗೊಳಿಸುತ್ತಿದ್ದರು."

ಕಪ್ಪಣ್ಣ ಐದು ದಶಕಗಳ ಸಂಘಟನಾ ಕಾರ್ಯದಲ್ಲಿ ಅಸಂಖ್ಯ ಕಾರ್ಯಕ್ರಮಗಳನ್ನು ರೂಪಿಸಿ, ಯಶಸ್ವಿಗೊಳಿಸಿದ್ದಾರೆ. ಇವರ ಸಂಘಟನಾ ಚಾತುರ್ಯದ ವ್ಯಾಪ್ತಿ ವಿಸ್ತರಿಸಿ, ಸಾಗರದಾಚೆಗೂ ಚಾಚಿದೆ. ಅಮೇರಿಕಾದ 'ಅಕ್ಕ" 'ನಾವಿಕ' ಕನ್ನಡ ಸಮ್ಮೇಳನಗಳ ಯಶಸ್ಸಿನಲ್ಲಿ ಇವರ ಪಾತ್ರ ಮಹತ್ವದ್ದು.

ಸಾಹಿತಿಗಳು, ಕಲಾವಿದರು, ಎಲ್ಲರ ಪರಿಚಯ, ಅವರ ಸ್ನೇಹ ಒಡನಾಟಗಳಿಂದಾಗಿ ಕಪ್ಪಣ್ಣ ಎಲ್ಲರಿಗೂ ಬೇಕು. ಎಲ್ಲದಕ್ಕೂ ಬೇಕು.

ಕಪ್ಪಣ್ಣ ಅವರಲ್ಲಿರುವ ವಿಶಿಷ್ಟ ಗುಣವನ್ನು ಡಾ.ಕೆ.ಎಂ.ಎಸ್.ಹೀಗೆ ಗುರುತಿಸುತ್ತಾರೆ. "ದಕ್ಷ ಸಂಘಟಕನಿಗೆ ಕಣ್ಣು ಕಿವಿ ಚುರುಕಾಗಿರಬೇಕು, ತೆರೆದ ಮನಸ್ಸಿನರಬೇಕು, ಹಲವು ಮೂಲಗಳಿಂದ ಸೂಚನೆ ಪಡೆಯಬೇಕು. ಸಾಧ್ಯವಾದ ಅಥವಾ ಸಾಧ್ಯವೆನಿಸುವ ಮಾರ್ಗದರ್ಶನವನ್ನು ಕಾರ್ಯಗತಗೊಳಿಸಬೇಕು. ಈ ರೂಢಿ ಮಾತಿಗೆ ಕಪ್ಪಣ್ಣನವರಿಗಿಂತ ಅತ್ಯುತ್ತಮ ನಿದರ್ಶನ, ನಿಶ್ಚಿತವಾಗಿಯೂ ನನಗೆ ಗೊತ್ತಿಲ್ಲ" ಚೈತನ್ಯಶೀಲವಾದ ಸಂಘಟನೆಗೆ ಲವಲವಿಕೆಯನ್ನು ಸಂಧಿಸಿಕೊಂಡಿರುವ ಕಪ್ಪಣ್ಣ ರಂಗಭೂಮಿ ಸಾಹಿತ್ಯ, ರಾಜಕೀಯ ಹಾಗೂ ಅಧಿಕಾರಿ ವಲಯದ ಪ್ರತಿಷ್ಠಿತರ, ಸಂಪರ್ಕ ಸಾಧಿಸಿ ಯಾವುದೇ ಕಾರ್ಯಕ್ರಮ ಯಶಸ್ವಿಗೊಳಿಸಿರುವ ಚಾಕಚಕ್ಯತೆ ಪಡೆದಿದ್ದಾರೆ. ರಾಮಕೃಷ್ಣ ಹೆಗಡೆ, ಡಾ.ಜೀವರಾಜ ಆಳ್ವ, ಎಂ.ಪಿ.ಪ್ರಕಾಶ್, ಕೆ.ಹೆಚ್.ಶ್ರೀನಿವಾಸ್, ಹೆಚ್ ವಿಶ್ವನಾಥ, ಬಿ.ಎಲ್. ಶಂಕರ್, ಹೆಚ್.ಡಿ. ಕುಮಾರಸ್ವಾಮಿಯವರಂತಹ ರಾಜಕೀಯ ಮುತ್ಸದ್ಧಿಗಳ ಸಂಪರ್ಕ ಸಾಧಿಸಿ, ತಮಗೆ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ಸಾಧಿಸಿದ್ದಾರೆ. ಹಾಗೆಯೇ ಹಿರಿಯ ಅಧಿಕಾರಿಗಳಾದ ಚಿರಂಜೀವಿಸಿಂಗ್, ಐ.ಎಂ.ವಿಠಲ್‌ಮೂರ್ತಿ ವೈ.ಕೆ.ಮುದ್ದುಕೃಷ್ಣ ಮುಂತಾದ ಅನೇಕ ಅಧಿಕಾರಿಗಳೊಂದಿಗೆ ಅನೇಕ ಸಾಂಸ್ಕೃತಿಕ ಚಟುವಟಿಕೆ ಯಶಸ್ವಿಗೊಳಿಸಿದ್ದಾರೆ. ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ಯಶಸ್ವಿಗೊಳಿಸಿದ್ದಾರೆ. ಸಾಹಿತ್ಯ, ಸಾಂಸ್ಕೃತಿಕ ವಲಯದಲ್ಲಿ ಕಪ್ಪಣ್ಣನವರು ಸೃಷ್ಟಿಸಿಕೊಂಡ ಆಪ್ತವಲಯವೇ ಬಹು ದೊಡ್ಡದಿದೆ. ಡಾ.ಹೆಚ್.ನರಸಿಂಹಯ್ಯ, ಬಿ.ವಿ.ಕಾರಂತ, ಗಿರೀಶ್ ಕಾರ್ನಾಡ್, ಡಾ. ಯು.ಆರ್.ಅನಂತಮೂರ್ತಿ, ಡಾ. ಚಂದ್ರಶೇಖರ ಕಂಬಾರ್, ಕಿ.ರಂ.ನಾಗರಾಜ್,

ಪಿ.ಲಂಕೇಶ್, ಡಿ.ಆರ್.ನಾಗರಾಜ್, ಎಂ.ಎಸ್.ಸತ್ಯು ಡಾ.ಸಿದ್ಧಲಿಂಗಯ್ಯ, ಡಾ. ಕೆ.ಮರುಳಸಿದ್ಧಪ್ಪ, ಶೂದ್ರಶ್ರೀನಿವಾಸ, ಸಿ.ಅಶ್ವತ್ಥ್, ಟಿ.ಎಸ್.ನಾಗಾಭರಣ, ಟಿ.ಎನ್.ಸೀತಾರಾಂ, ಸಿ.ಆರ್.ಸಿಂಹ, ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಂದಲ್ಲಾ ಒಂದು ಸಂದರ್ಭ ಒಂದಲ್ಲಾ ಒಂದು ಕಾರಣ ಈ ಎಲ್ಲರೂ ಹಾಗೆಯೇ ಇವರಂತೆ ಇನ್ನೂ ಹಲವರು ಹಿರಿಯ ಕಿರಿಯರು ಕಪ್ಪಣ್ಣನವರ ಸ್ನೇಹದ ಸವಿ ಸವಿದವರು.

ಅನೇಕ ಕಾರ್ಯಕ್ರಮಗಳನ್ನು ತಮ್ಮ ಗೆಳೆಯರಿಗಾಗಿ ಕಪ್ಪಣ್ಣ ಸಂಘಟಿಸಿದ್ದಾರೆ. ಯಶಸ್ವಿಗೊಳಿಸಿದ್ದಾರೆ. ಕಪ್ಪಣ್ಣ ಅವರ ಸ್ನೇಹ ವಲಯ ಕೇವಲ ಬೆಂಗಳೂರಿಗೆ ಸೀಮಿತವಲ್ಲ. ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಅವರ ಸ್ನೇಹವಲಯವಿದೆ. ಸಂಗೀತ, ನೃತ್ಯ ನಾಟಕಗಳಷ್ಟೇ ಅಲ್ಲದೇ ಜಾನಪದ ಕಲಾವಿದರ ದೊಡ್ಡ ಸಮೂಹವೇ ಕಪ್ಪಣ್ಣ ಅವರ ಸಾಂಸ್ಕೃತಿಕ ಜಾಲದಲ್ಲಿ ತಂತುಗಳಾಗಿ ಹೆಣೆದುಕೊಂಡಿದೆ. ಒಬ್ಬ ಶಿಷ್ಟ ಕಲಾವಿದ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಒಬ್ಬ ಜಾನಪದ ಕಲಾವಿದ. ಅಥವಾ ಜಾನಪದವೇ ಒಂದು ಕೈ ಮೇಲು ಕಪ್ಪಣ್ಣ ಅವರ ಪಾಲಿಗೆ.

ಕಪ್ಪಣ್ಣ ಅವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿ ಮಾಡಿದ ಹಲವು ಕ್ರಿಯಾಶೀಲ ಕಾರ್ಯಗಳಲ್ಲಿ ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿಯ ಪ್ರಸಿದ್ಧ ರಂಗಗೀತೆಗಳ ಸಿಡಿಗಳನ್ನು ಹೊರತಂದಿದ್ದು, ನಶಿಸಿಹೋಗುತ್ತಿದ್ದ ಒಂದು ಪರಂಪರೆ ಇವರ ಪ್ರಯತ್ನದಿಂದಾಗ ಇಂದಿನ ಪೀಳಿಗೆಗೆ ದಕ್ಕಿದೆ. ಈ ಕಾರ್ಯದ ಬಗ್ಗೆ ನಾಡೋಜ ಏಣಗಿ ಬಾಳಪ್ಪನವರು ಮನದುಂಬಿ ನುಡಿದಿದ್ದಾರೆ.

ಕಪ್ಪಣ್ಣ ಅವರ ರಂಗಪ್ರಕ್ರಿಯೆಯನ್ನು ಹಿರಿಯ ರಂಗಕಲಾವಿದರು ನಾಡೋಜ ಏಣಗಿ ಬಾಳಪ್ಪ ಹೀಗೆ ಸ್ಮರಿಸುತ್ತಾರೆ" ಕನ್ನಡ ರಂಗಗೀತೆಗಳನ್ನು ಶಾಶ್ವತವಾಗಿ ದಾಖಲಿಸಬೇಕು ಎಂಬ ನನ್ನ ವಿಚಾರಕ್ಕೆ ಸ್ಪಂದಿಸಿ, ಅವುಗಳನ್ನು ರೆಕಾರ್ಡಿಂಗ್ ಮಾಡುವ ವ್ಯವಸ್ಥೆಯನ್ನು, ಅದಕ್ಕೆ ತಗಲುವ ಖರ್ಚು ವೆಚ್ಚಗಳನ್ನು ಹೊಂದಿಸಿಕೊಟ್ಟವರು ಕಪ್ಪಣ್ಣನವರು. ಹೀಗಾಗಿ ಎರಡು ನೂರಕ್ಕೂ ಹೆಚ್ಚು ರಂಗಗೀತೆಗಳನ್ನು ರೆಕಾರ್ಡಿಂಗ್ ಮಾಡುವುದು ಸಾಧ್ಯವಾಯಿತು, ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ ಹಲವಾರು ಕಲಾವಿದರು ಈ ರಂಗಗೀತೆಗಳಿಗೆ ದನಿಯಾದರು" "ರಂಗಗೀತೆಗಳ ವಿಷಯವಾಗಿ ನಾನು ಅವರಿಗೆ ವಿಶೇಷ ಕೃತಜ್ಞನಾಗಿದ್ದೇನೆ, ಕರ್ನಾಟಕ ನಾಟಕ ಅಕಾಡೆಮಿಯಿಂದ ರಂಗಗೀತೆಗಳ ಕಾರ್ಯಕ್ರಮ ಅತಿಹೆಚ್ಚು ಜರುಗಿದ್ದು ಕಪ್ಪಣ್ಣನವರು ಅಧ್ಯಕ್ಷರಾಗಿರುವಾಗಲೇ, ಕನ್ನಡ ನಾಡಿನಾದ್ಯಂತ ಹಾಗು ದೂರದ ಗುಜರಾತ್, ಮುಂಬೈಗಳಲ್ಲಿಯೂ ಕನ್ನಡ ರಂಗಗೀತೆಗಳನ್ನು ಹಾಡಿಸಲು ಅವರು ಮುಖ್ಯ ಕಾರಣರಾಗಿದ್ದಾರೆ. ರಂಗಗೀತೆಗಳನ್ನು ಹಾಡುವ ಅನೇಕ ಕಲಾವಿದರನ್ನು ಹುರಿದುಂಬಿಸಿ ಅವರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿ, ಅವರಿಂದ

ಕಾರ್ಯಕ್ರಮಗಳನ್ನು ಮಾಡಿಸಿದ ಕೀರ್ತಿ ಕಪ್ಪಣ್ಣ ಅವರಿಗೆ ಸಲ್ಲುತ್ತದೆ." ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಗೀತೆಗಳನ್ನು ನಾಡೋಜ ಏಣಗಿ ಬಾಳಪ್ಪನವರ ನೇತೃತ್ವದಲ್ಲಿ ಸಿದ್ಧಪಡಿಸಿದಂತೆ ಮತ್ತೊಬ್ಬ ಖ್ಯಾತ ವೃತ್ತಿರಂಗಕಲಾವಿದರು, ಸಂಗೀತ ನಿರ್ದೇಶಕರು, ಗಾಯಕರು ಆದ ಆರ್. ಪರಮಶಿವನ್ ಅವರ ಮಾರ್ಗದರ್ಶನದಲ್ಲಿ ದಕ್ಷಿಣ ಕರ್ನಾಟಕದ ವೃತಿರಂಗಗೀತೆಗಳ ಸಿಡಿಯನ್ನು ಹೊರತರಲು ಕಪ್ಪಣ್ಣ ಕಾರಣರಾದರು. ಇದು ಮುಂದೊಮ್ಮೆ ನಮ್ಮಿಂದ ಮರೆಯಾಗಬಹುದಾದ ಒಂದು ಶ್ರೇಷ್ಠ ಪರಂಪರೆಯನ್ನು ನಿರಂತರಗೊಳಿಸುವ ಪ್ರಯುಕ್ತವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಕಪ್ಪಣ್ಣನವರು ಸಂಘಟಿಸುತ್ತಿರುವ ಕಾರ್ಯಕ್ರಮಗಳಲ್ಲಿ ನಾಟಕ ವಾಚನವೂ ಒಂದು. ಹೊಸ ನಾಟಕಗಳ ಓದಿಗೆ ತಮ್ಮದೇ ಆದ ರೀತಿಯಲ್ಲಿ ಕಾರ್ಯಕ್ರಮ ಸಂಘಟಿಸಿರುವ ಕಪ್ಪಣ್ಣನವರ ಬಗ್ಗೆ ಗಿರೀಶ್‌ಕಾರ್ನಾಡರು ತುಂಬ ಪ್ರೀತಿಯಿಂದ ಮಾತನಾಡುತ್ತಾರೆ. ತಮ್ಮ 'ತಲೆದಂಡ' ಮತ್ತು 'ಅಗ್ನಿ ಮಳೆ' ನಾಟಕದ ವಾಚನಕ್ಕೆ ಕಪ್ಪಣ್ಣನವರು ಅವಕಾಶ ಕಲ್ಪಿಸಿದ ಬಗ್ಗೆ ಹೇಳುತ್ತಾ, ಮತ್ತು ಖ್ಯಾತ ರಂಗ ನಿರ್ದೇಶಕ ಬಿ.ವಿ.ಕಾರಂತರು ಕಾರ್ನಾಡರಿಗೆ ಕಪ್ಪಣ್ಣ ಅವರ ಬಗ್ಗೆ ಹೇಳಿದ ಮಾತನ್ನು ಉದ್ಧರಿಸಿದ್ದಾರೆ. "ಕಪ್ಪಣ್ಣ ಅಂತ ಒಬ್ಬನಿದ್ದಾನೆ. ಅವನಿಗೆ ನಾಟಕದ ಹುಚ್ಚು ಹಾಗೆ ನಾಟಕದ ಹುಚ್ಚು, ಇದ್ದವರು ಬೆಂಗಳೂರಿನಲ್ಲಿ ಬೇಕಾದಷ್ಟು ಜನ ಸಿಗುತ್ತಾರೆ ಬಿಡಿ, ಆದರೆ ಕಪ್ಪಣ್ಣ ವೆರಿ ಆರ್ಗನೈಸ್ಡ್, ಬೇಕಾದದನ್ನು ಮಾಡಿಸಬಲ್ಲ ಬೇಕಾದಷ್ಟು ಜನರನ್ನು ಕಲೆಹಾಕಿ ನಡೆಸಬಲ್ಲ" ಎಂದು ಕಾರಂತರು ಹೇಳಿದ್ದರಂತೆ.

## ಬಹುಮುಖಿ ಪ್ರತಿಭೆ.....

ಕಪ್ಪಣ್ಣ ಅವರನ್ನು ಕೇವಲ ರಂಗಭೂಮಿಗೆ ಸೀಮಿತಗೊಳಿಸಲು ಸಾಧ್ಯವೇ, ರಂಗಭೂಮಿ, ಜಾನಪದ, ಸುಗಮಸಂಗೀತ, ನೃತ್ಯಸಂಗೀತ, ಸಾಹಿತ್ಯ, ಚಿತ್ರಕಲೆ, ಸಿನಿಮಾ, ಕಿರುತೆರೆ ಹೀಗೆ ಯಾವುದೇ ಒಂದು ಕಲಾರಂಗವನ್ನು ಕುರಿತು ಆಲೋಚಿಸುವುದಾದರೆ ಅಲ್ಲಿ ಕಪ್ಪಣ್ಣ ಅವರ ಗುರುತು ಹಚ್ಚೆ ಹಾಕಿದಂತೆ ನಿಚ್ಚಳವಾಗಿ ಕಂಡು ಬರುತ್ತದೆ. ಹಾಗಾಗಿ ಕಪ್ಪಣ್ಣ ಸಮಗ್ರ ಸಾಂಸ್ಕೃತಿಕ ಲೋಕದ ಒಬ್ಬ ಮಾಯಾ ಗಾರ. ಇವರ ಕ್ರಿಯಾಶೀಲತೆ, ಮಾತಿನ ಮೋಡಿ, ಸಮಯಪ್ರಜ್ಞೆ ಇದೆಲ್ಲವೂ ಇವರ ಸಂಘಟನಾಕಾಯಕಕ್ಕೆ ಒತ್ತಾಸೆಯಾಗಿ ನಿಲ್ಲುತ್ತದೆ. ಜೊತೆಗೆ ಇವರು ಕೈಗೆತ್ತಿಕೊಳ್ಳುವ ಯೋಜನೆಗಳಲ್ಲಿ ಕಲಾತ್ಮಕತೆಯನ್ನು ಸಾಕಾರ ಗೊಳಿಸುವ ಕನಸು, ಸಿದ್ಧಿಸಲು ಬೇಕಾಗುವ ಪ್ರಯತ್ನ ಒಂದಕ್ಕೊಂದು ಪೂರಕವಾಗಿ ಹೆಣೆದುಕೊಂಡಿರುತ್ತದೆ.

ಕಪ್ಪಣ್ಣನವರು ರಂಗ ಮಂಚದ ಮೇಲೆ ಸಾಧಿಸಿದ್ದನ್ನು ಬಯಲಿನಲ್ಲೂ

ಸಾಧಿಸಿದರು. ಬೆಳಕಿನ ಕೈಚಳಕವನ್ನು ಕೇವಲ ರಂಗಮಂದಿರದ ಒಳಗಷ್ಟೇ ಅಲ್ಲದೆ ಹಂಪಿಯಂತಹ ಐತಿಹಾಸಿಕ ಸ್ಮಾರಕಗಳು ಅವುಗಳ ಸುತ್ತಮುತ್ತಲೂ ತಲೆ ಎತ್ತಿನಿಂತಿರುವ ಬೆಟ್ಟಗಳ ಎತ್ತರಕ್ಕೂ ತೋರಿದರು. ಪ್ರತಿಷ್ಠಿತ ಹಂಪಿ ಉತ್ಸವಕ್ಕೆ ಒಂದು ವಿಶ್ವಮಾನ್ಯತೆಯನ್ನು ತಂದು ಕೊಡುವಲ್ಲಿ ಇವರು ತೋರಿದ ಕಾರ್ಯದಕ್ಷತೆ ಇವರ ಕ್ರಿಯಾಶೀಲ ಬದುಕಿನಲ್ಲಿ ಒಂದು ಸುವರ್ಣ ಅಧ್ಯಾಯ.

ಹಂಪೆ ವಿರೂಪಾಕ್ಷ ದೇವಾಲಯದ ರಥ ಬೀದಿಯ ಎದುರು ಮಂಟಪದ ಹಿಂಬದಿಯ ಬೆಟ್ಟಶ್ರೇಣಿಗಳಲ್ಲಿ ಇವರು ಸೃಷ್ಟಿಸಿದ ಬೆಳಕಿನ ಜಾಲವನ್ನು ಕಂಡವರಾರು ಮರೆತಿಲ್ಲ, ಹಾಗೆಯೇ ಕಂದಂಬೋತ್ಸವ, ಹಂಪೆ ಉತ್ಸವ, ಚಾಲುಕ್ಯ ಉತ್ಸವ ಮುಂತಾದ ಉತ್ಸವಗಳ ಸಾಂಸ್ಕೃತಿಕ ಸಂಚಾಲಕರಾಗಿ ನಿರ್ವಹಿಸಿದ ಕಾರ್ಯಗಳು ಎಂದೆಂದಿಗೂ ಚಿರನೂತನ.

ಬೆಂಗಳೂರಿನಲ್ಲಿ ನಡೆದ ರಷ್ಯಾ ಉತ್ಸವ, ಸಾರ್ಕ್ ರಾಷ್ಟ್ರಗಳ ಉತ್ಸವ, ಬೆಂಗಳೂರು ಉತ್ಸವ, ಇವೆಲ್ಲಾ ಇವರ ಸಂಘಟನಾ ಚಾತುರ್ಯಕ್ಕೆ ಒಂದೊಂದು ಶ್ರೇಷ್ಠ ಉದಾಹರಣೆಗಳು.

ಇಷ್ಟೆಲ್ಲಾ ಉತ್ಸವಗಳನ್ನು ಸಂಘಟಿಸುವಾಗ ಇವರು ತಮ್ಮ ಕಾರ್ಯಪಡೆಯನ್ನು ಆರಿಸಿ, ಕಟ್ಟಿಕೊಳ್ಳುತ್ತಿದ್ದುದು ರಂಗಭೂಮಿಯ ಗೆಳೆಯರನ್ನೇ, ರಂಗಭೂಮಿಯನ್ನು ಹವ್ಯಾಸಕ್ಕೆ ಮಾಡುವ ಮಂದಿಯೇ ಬಹಳ. ಇಲ್ಲಿ ವೃತ್ತಿಪರತೆ ಪ್ರಯೋಗಗಳಲ್ಲಿ ಇರುತ್ತದೆಯೇ ಹೊರತು, ಯಾರು ವೃತ್ತಿಪರರಲ್ಲ. ಅಂದರೆ ತಮ್ಮ ಕೈಯಿಂದ ಹಣ ಹಾಕಿ ನಾಟಕ ಮಾಡುವ ಮಂದಿಯೇ ಹೆಚ್ಚು. ಇಂಥಹ ಸಂದರ್ಭದಲ್ಲಿ ತಾವು ಮಾಡುವ ಯಾವುದೇ ಕಾರ್ಯಕ್ಕೂ ರಂಗದ ಗೆಳೆಯರನ್ನು ಕರೆದು, ಅವರಿಗೆ ಒಂದಷ್ಟು ಆರ್ಥಿಕ ಸಂಪನ್ಮೂಲ ದೊರಕುವಂತೆ ಮಾಡಿದ ಕಪ್ಪಣ್ಣ ಸಾರ್ವಜನಿಕ ರಂಗದಲ್ಲಿ ಎಂದು ತಮ್ಮ ಹೆಸರು ಕೆಡಿಸಿಕೊಂಡವರಲ್ಲ, ಹಾಗೆಂದು ಟೀಕೆಗೆ ಒಳಪಟ್ಟಿಲ್ಲವೆಂದಲ್ಲಾ. ಮೊಸರಲ್ಲಿ ಕಲ್ಲು ಹುಡುಕುವ ಮಂದಿ ಈ ವ್ಯವಸ್ಥೆಯಲ್ಲಿ ಎಂದಿನಿಂದಲೂ ಇದ್ದಾರೆ. ಮುಂದೆಯೂ ಇರುತ್ತಾರೆ.

## ಜಾನಪದ ಪರಂಪರೆಗೆ ಉಸಿರು ತುಂಬಿ......

ಇವರು ಸಂಘಟಿಸಿದ ಮತ್ತೊಂದು ವಿಶಿಷ್ಟ ಸಾಂಸ್ಕೃತಿಕ ಮೇಳ, ಕ್ರೀಡಾಮೇಳದಲ್ಲಿ ಕರ್ನಾಟಕದ ಜಾನಪದ ಪರಂಪರೆಯನ್ನು ಜಗತ್ತಿಗೆ ತೆರೆದಿಟ್ಟ ಪರಿ ಇಂದಿಗೂ ನಮ್ಮ ಜನ ಮಾನಸದಲ್ಲಿ ಹಸಿರಾಗಿದೆ. ಇಡೀ ಜನಪದ ಸಂಕುಲ ಕಪ್ಪಣ್ಣನವರನ್ನು ನೆನೆಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಕಪ್ಪಣ್ಣ, ಒಬ್ಬ ಜಾನಪದ ವಿದ್ವಾಂಸನಂತೆ ಘೋಸು ಕೊಡದೆ, ಕಲೆಯನ್ನು, ಕಲಾವಿದರನ್ನು ಮುಂಚೂಣಿಗೆ ತಂದಿದ್ದು. ಇದನ್ನು ಕುರಿತು ಡಾ.ಚಂದ್ರಶೇಖರ್‌ಕಂಬಾರ ಅವರ ಹೀಗೆ ಹೇಳುತ್ತಾರೆ. "ಜಾನಪದ ಜಾತ್ರೆ ಅನ್ನೋದು

ಇನ್ನೊಂದು ಅದ್ಭುತ.... ಅಯ್ಯೋ ಏನ್ರೀ ಅವನು ಆ ಕಲಾವಿದರಿಗೆ ಹಲ್ಲು ಉಜ್ಜೋದನ್ನು ಕಲಿಸೋದರಿಂದ ಹಿಡಿದು, ಆಮೇಲ್ ಹ್ಯಾಗ ಮಾತಾಡಬೇಕು, ನಡಾವಳಿ ಹೇಗಿರಬೇಕು... ಪ್ರದರ್ಶನ ಹೆಂಗೆ ನಡೀಬೇಕು... ನಾವು ಪಂಡಿತರು ಏನ್ ಮಾಡ್ತೀವಿ.... ಕಲಾವಿದರು ಹೇಳಿದನ್ನ ಬರ್ಕೋತೀವಿ. ಅದನ್ನು ಯಾರಿಗೋ ಸಬ್‌ಮಿಟ್ ಮಾಡಿ ಪ್ರೊಫೆಸರ್ ಆಗೀವಿ...... ಎಂಥ ಸ್ವಾರ್ಥಿಗಳು...........ಆದ್ರೆ ಆ ಕಲೆ ಹೇಗೆ ಉಳೀಬೇಕು ಅನ್ನೋದರ ಬಗ್ಗೆ ಅಲ್ಲ ನಾವು.... ಕಪ್ಪಣ್ಣ ಜನಪದ ಕಲೆಗಳನ್ನು ತಗೊಂಡಿದ್ದು ಹ್ಯಾಗಂದ್ರೆ.... ಇಂತಹ ಒಂದು ಶ್ರೀಮಂತ ಪರಂಪರೆಯನ್ನು ಹ್ಯಾಗೆ ಉಳಿಸಬೇಕು, ಅಂತ ನೋಡಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾದನಲ್ಲ, ನನಗೆ ಬಹಳ ಇಷ್ಟ ಆಯ್ತು. ಪ್ರಪಂಚದಲ್ಲೇ ಇಂತಹ ಒಂದು ಪ್ರಯೋಗ ಆಗಿಲ್ಲ."

ಒಂದು ಸರ್ಕಾರ, ಒಂದು ಇಲಾಖೆ ಯಾವುದೋ ಕಾರ್ಯಕ್ರಮ ಯೋಜನೆಗಳನ್ನು ರೂಪಿಸಬಹುದು. ಆದರೆ ಅದು ಅನುಷ್ಠಾನಗೊಳ್ಳಬೇಕಾದರೆ ಆ ಯೋಜನೆಗೆ ಒಂದು ಆಕಾರ ಕೊಟ್ಟು ರಕ್ತಮಾಂಸಗಳನ್ನು ತುಂಬಿ, ಅಂದಚೆಂದದ ಪೋಷಾಕು ತೊಡಿಸಿ ಒಂದು ಚೊಕ್ಕವಾದ ಅಭಿವ್ಯಕ್ತಿಯನ್ನಾಗಿಸೋದು ಅಷ್ಟು ಸುಲಭದ ಮಾತಲ್ಲ. ಅದನ್ನು ಕಾರ್ಯರೂಪಕ್ಕೆ ತರುವವನಿಗೆ ಆ ಯೋಜನೆಯ ಬಗ್ಗೆ ಪೂರ್ಣ ಅರಿವು, ಅದರ ಅನುಷ್ಠಾನಕ್ಕೆ ತಕ್ಕ ಹಾಗೆ ಸಿದ್ಧತೆ, ತಿಳುವಳಿಕೆ, ಒಂದು ಬದ್ಧತೆ, ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ ಇರಬೇಕು. ಇಷ್ಟೆಲ್ಲಾ ಇದ್ದಾಗ ಅದು ಮಾಡುವವರ ನೋಡುವವರ ಹೃದಯದ ನಡುವೆ ಒಂದು ಸಂವೇದನೆಯ ತೊರೆ ಹರಿಯಲು ಪ್ರಾರಂಭಿಸಿದಾಗ ಆ ಕಲೆ ಸಾರ್ಥಕತೆ ಪಡೆಯುತ್ತದೆ. ಆ ಕಲಾವಿದ ಸಾರ್ಥಕತೆಯನ್ನು ಪಡೆಯುತ್ತಾನೆ. ಇಂತಹ ಸಾರ್ಥಕ ಕಾರ್ಯಕ್ರಮವನ್ನು ಯೋಜಿಸಿದ, ಸಾಕಾರ ಗೊಳಿಸಿದವರಲ್ಲಿ ಧನ್ಯತಾಭಾವ ಉಂಟಾಗುತ್ತದೆ. ಅಂತಹ ಧನ್ಯತೆಯನ್ನು ಕಪ್ಪಣ್ಣ ಅನುಭವಿಸಿದ್ದಾರೆ. ತಮ್ಮ ಸಾಂಸ್ಕೃತಿಕ ಬದುಕಿಗೂ ಧನ್ಯತೆಯನ್ನು ಪಡೆದಿದ್ದಾರೆ. ಕರ್ನಾಟಕದ ಗ್ರಾಮೀಣ ಅಂತಃಶಕ್ತಿಯಾದ ಜಾನಪದ ಕಲೆಗಳು ಅಳಿವಿನ ಅಂಚಿಗೆ ಹೋಗುತ್ತಿದ್ದ ಕಾಲದಲ್ಲಿ ರಾಜ್ಯ ಸರ್ಕಾರ ಆಯೋಜಿಸಿದ 'ಜಾನಪದ ಜಾತ್ರೆ'ಯ ಹೊಣೆ ಹೊತ್ತ ಕಪ್ಪಣ್ಣ ನಮ್ಮ ಜಾನಪದ ಕಲಾವಿದರಿಗೆ ಕಲ್ಪಿಸಿಕೊಟ್ಟ ಅಭೂತಪೂರ್ವ ವೇದಿಕೆಯೇ ರೋಮಾಂಚನ ಹುಟ್ಟಿಸುವಂತಹದ್ದು. ಕರ್ನಾಟಕದ ಶಕ್ತಿ ಕೇಂದ್ರವಾದ ವಿಧಾನಸೌಧದ ಭವ್ಯ ಹಿನ್ನಲೆಯಲ್ಲಿ ಆಕರ್ಷಕವಾದ, ವಿಶಾಲವಾದ, ಉನ್ನತ ವೇದಿಕೆಯಲ್ಲಿ ಅನಾವರಣಗೊಂಡ ಕರ್ನಾಟಕದ ಜಾನಪದ ಕಲಾ ಸೊಗಡು, ಮುಂದೆ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ, ನಂತರ ಕರ್ನಾಟಕದ ವಿವಿಧ ಕೇಂದ್ರಗಳಲ್ಲಿ ನಡೆದಿದ್ದು ಎಲ್ಲರಿಗೂ ತಿಳಿದ ಸಂಗತಿ.

ಒಂದೊಂದು ಜಾನಪದ ಜಾತ್ರೆಯೂ ವಿಶಿಷ್ಟ. ವಿಭಿನ್ನ. ಸುಮಾರು 80 ಹೆಚ್ಚು ಕಲಾಪ್ರಕಾರಗಳ, ನೂರಾರು ಕಲಾತಂಡಗಳು, ಸಾವಿರಾರು ಕಲಾವಿದರು,

ವಯೋವೃದ್ಧರಿಂದ ಹಿಡಿದು ಬಾಲಕಲಾವಿದರವರೆಗೆ ಯುವಕರು, ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ಗಿರಿಜನರು, ಬುಡಕಟ್ಟು ಜನರು, ಶಿಷ್ಟ ಕಲಾವಿದರು, ಜಾನಪದ ಗಾಯಕರು, ಜಾನಪದ ಪರಂಪರೆಯಿಂದ ಪ್ರತಿಭೆಗಳು ಎಲ್ಲರೂ ಒಂದು ಕಲಾತ್ಮಕ ಉತ್ಸವದ ಭಾಗವಾಗಿ ಕರ್ನಾಟಕದ ಜಾನಪದ ಸಿರಿಯನ್ನು ತೋರುತ್ತಿದ್ದ ಪರಿ ನೋಡುಗರಲ್ಲಿ ವಿಸ್ಮಯವನ್ನುಂಟುಮಾಡುತ್ತಿದ್ದರು. ಸಾವಿರಾರು ಜನರು ತಂಡತಂಡವಾಗಿ ಬಂದು ಈ ಕಾರ್ಯಕ್ರಮ ವೀಕ್ಷಿಸುತ್ತಿದ್ದರು. ಇಂಥಾ ಕಾರ್ಯಕ್ರಮವನ್ನು ಒಂದು ವೃತ್ತಿಪರತೆ, ಬದ್ಧತೆಯಿಂದ ತರಬೇತಿ ಮೂಲಕ ಅನುಷ್ಠಾನಗೊಳ್ಳುತ್ತಿದ್ದುದು, ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರ ಎಲ್ಲರ ಅನುಭವವಾಗಿರುತ್ತಿತ್ತು.

ಈ ರೀತಿಯಲ್ಲೇ ಕಪ್ಪಣ್ಣ ಅವರು ಸಂಘಟಿಸಿದ ಮತ್ತೊಂದು ಬೃಹತ್ ಜಾನಪದ ಕಲಾಮೇಳ, 4ನೇ ರಾಷ್ಟ್ರೀಯ ಕ್ರೀಡಾಮೇಳ – ಇವೆಲ್ಲವು ಪ್ರದರ್ಶಕ ಕಲೆಗಳೇ ಆಗಿರುವುದರಿಂದ, ರಂಗಭೂಮಿಯ ಅಪಾರ ಅನುಭವಹೊಂದಿದ್ದ ಕಪ್ಪಣ್ಣ ಅದ್ಭುತವಾಗಿ ಸಂಘಟಿಸಿದ್ದು ಈಗ ಇತಿಹಾಸದ ಪುಟ ಸೇರಿದ್ದರೂ, ಅಂದು ಪಾಲ್ಗೊಂಡಿದ್ದ ಎಲ್ಲಾ ಜಾನಪದ ಕಲಾವಿದರ ಮನದಲ್ಲಿ ಆ ಅನುಭವ ಇಂದಿಗೂ ಹಸಿರಾಗಿದೆ.

ಈ ಕುರಿತು ಅಂದಿನ ರಾಷ್ಟ್ರೀಯ ಕ್ರೀಡಾಮೇಳದ ಸಾಂಸ್ಕೃತಿಕ ಕಾರ್ಯಕ್ರಮದ ಮೇಲ್ವಿಚಾರಣೆ ವಹಿಸಿದ್ದ ವೈ.ಕೆ. ಮುದ್ದುಕೃಷ್ಣ ಹೀಗೆ ಹೇಳುತ್ತಾರೆ – "1000 ಡೊಳ್ಳು ಕಲಾವಿದರು, 800 ತಮಟೆ, 800 ಕೋಲಾಟ, 400 ವೀರಗಾಸೆ, 400 ಪಟಾ ಕುಣಿತ, 400 ಸೋಮನ ಕುಣಿತ, 400 ಸಾಮೂಹಿಕ ಗಾಯನ ಕಲಾವಿದರು, 1000 ನೃತ್ಯ ಕಲಾವಿದರು, ಹೀಗೆ ವಿವಿಧ ಕಲಾ ಪ್ರಕಾರಗಳನ್ನೊಳಗೊಂಡ ಸುಮಾರು 8000 ಕಲಾವಿದರಿಗೆ ತರಬೇತಿ ನೀಡಿ ಕಾರ್ಯಕ್ರಮಗಳಿಗೆ ಸಿದ್ಧಮಾಡುವ ಜವಾಬ್ದಾರಿ. ಇದರ ನೇತೃತ್ವ ನನ್ನದಾಗಿದ್ದರೂ ಸಂಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ಕಪ್ಪಣ್ಣರಿಗೆ ವಹಿಸಿಕೊಟ್ಟೆ. ಅವರ ಅವಿರತ ಪರಿಶ್ರಮದ ಫಲ ಎರಡೂ ದಿನಗಳ ಕಾರ್ಯಕ್ರಮಗಳು (ಉದ್ಘಾಟನೆ–ಸಮಾರೋಪ) ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭೋರ್ಗರೆದು ವಿಜೃಂಭಿಸಿ ದಾಖಲೆ ನಿರ್ಮಿಸಿದವು. ಇವತ್ತಿಗೂ ಸುರೇಶ ಕಲ್ಮಾಡಿ ಎರಡೂ ಕಾರ್ಯಕ್ರಮಗಳನ್ನು ಅಭಿಮಾನದಿಂದ ಅವರು ನೆನಪಿಸಿಕೊಳ್ಳುತ್ತಾರೆ.

ಈ ದಾಖಲೆಯನ್ನು ನಂತರದ ಯಾವ ರಾಷ್ಟ್ರೀಯ ಕ್ರೀಡಾಕೂಟಗಳು ಮುರಿಯಲು ಸಾಧ್ಯವಾಗಿಲ್ಲವೆಂಬದು ಕಪ್ಪಣ್ಣ ಅವರ ಸಂಘಟನಾ ಚಾತುರ್ಯಕ್ಕೆ ಒಂದು ಗರಿ ಎಂದು ಹೆಮ್ಮೆಯಿಂದ ಹೇಳಬಹುದು.

ಶ್ರೀನಿವಾಸ ಜಿ ಕಪ್ಪಣ್ಣ ಅವರು ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಘಟಿಸಿದರೂ ಅವರನ್ನು ಗುರುತಿಸುವುದು ರಂಗಭೂಮಿಯ ಭಿತ್ತಿಯಲ್ಲೇ. ಅವರ ಚಿತ್ತದಲ್ಲೂ ರಂಗಭೂಮಿಯೇ ಮುಖ್ಯವಾಹಿನಿಯಾಗಿ ಹರಿಯುತ್ತಿದೆ. ಹಾಗಾಗಿ ಅವರು ವಾರ್ತಾ ಇಲಾಖೆಯ ಅಧಿಕಾರಿಯಾಗಿದ್ದಾಗಲೂ ಅವರು ಬಯಸಿ ಬಂದಿದ್ದು ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಹುದ್ದೆಯನ್ನು. ಅವರು ನಾಟಕ ಅಕಾಡೆಮಿ ಸದಸ್ಯರು, ರಿಜಿಸ್ಟ್ರಾರ್ ಹಾಗು ಅಧ್ಯಕ್ಷರಾಗಿ ಮಾಡಿದ ಕಾರ್ಯ ಅವರ ನಂತರದವರಿಗೆ ಅನುಕರಣೀಯ. ಈ ಬಗ್ಗೆ ಮುಂದೆ ಹೇಳಬಹುದು. ಶ್ರೀನಿವಾಸ ಜಿ. ಕಪ್ಪಣ್ಣ ಅವರ ಬಹಳಷ್ಟು ಕ್ರಿಯಾಶೀಲ ಕಾರ್ಯದ ಹಿಂದೆ ಅವರ ಪ್ರೇರಕ ಶಕ್ತಿಯಾಗಿದ್ದ ಹಿರಿಯ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಅವರ ಮಾತಿನಲ್ಲಿ ಹೇಳುವುದಾದರೆ "ನಾಟಕ ಅಕಾಡೆಮಿಗೆ ಸರ್ಕಾರ ವರ್ಷಕ್ಕೆ ಕೊಡುವ ಅನುದಾನ ಸುಮಾರು 20.00 ಲಕ್ಷಗಳು. ಕಪ್ಪಣ್ಣ ನಾಟಕ ಅಕಾಡೆಮಿ ಅಧ್ಯಕ್ಷರಾದ ಮೇಲೆ ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈವರೆಗೆ ನಡೆಸಿದ, ಈವರೆಗೆ ನಡೆಸಿರುವ ಕಾರ್ಯಕ್ರಮಗಳ ಖರ್ಚು ವೆಚ್ಚ ಎರಡು ಮೂರು ಕೋಟಿಗೆ ಮುಟ್ಟುತ್ತಿದೆ ಎಂದರೆ ಅವರ ಕಾರ್ಯಕ್ಷಮತೆ ಏನೆಂದು ಅರಿವಿಗೆ ಬರುತ್ತದೆ. ಕಪ್ಪಣ್ಣ ಒಂದು ರೀತಿಯ ಸದಾ ಹಪಹಪಿಸುವ ವಿಶ್ರಾಂತ ರಹಿತ ಸಂಘಟಕ, ಅದ್ಭುತ ಸಮಯ ಪ್ರಜ್ಞೆ ಇರುವ ಗೆಳೆಯ....... ರಂಗಭೂಮಿ, ಜನಪದ ಕಲಾವಿದರ ನೋವು ನಲಿವು, ಉತ್ಸವ ಸಮಾರಂಭಗಳ ಸಂಘಟನೆ, ಬಣ್ಣ, ಸಂಗೀತ, ಬೆಳಕು ಎಲ್ಲದರಲ್ಲಿ ಮುಳುಗಿರುವ ಕಪ್ಪಣ್ಣ ಎಲ್ಲಾ ವಿಷಯಗಳ ಬಗ್ಗೆ ಸಾಧಿಸುವ ಸಮನ್ವಯತೆ ಅಚ್ಚರಿ ಹುಟ್ಟಿಸುವಂತಹದ್ದು." ".....ಸುವರ್ಣ ಕರ್ನಾಟಕ ಆರಂಭದ ಬೃಹತ್ ಸಮಾರಂಭವನ್ನು ಅದ್ದೂರಿಯಿಂದ ವರ್ಣರಂಜಿತವಾಗಿ ವ್ಯವಸ್ಥೆ ಮಾಡುವ ಪ್ರತಿ ಹಾದಿಯಲ್ಲೂ ಜೊತೆಗಿದ್ದ ಕಪ್ಪಣ್ಣನವರ ಅಪಾರ ಸಮಯ ಪ್ರಜ್ಞೆ, ಅಸಾಮಾನ್ಯ ಸಾಮಾನ್ಯ ಪ್ರಜ್ಞೆ (uncommon common sense)ನನಗೆ ಮೆಚ್ಚುಗೆಯಾದ ಗುಣಗಳು."

## 'ನಿತ್ಯೋತ್ಸವ'ದ ರುವಾರಿ...........

ಜಾನಪದ ಕಲಾಪ್ರಕಾರಗಳಂತೆ ಸುಗಮ ಸಂಗೀತ ಲೋಕಕ್ಕೂ ಕಪ್ಪಣ್ಣ ನೀಡಿದ ಕೊಡುಗೆ ಮಹತ್ವವಾದುದು. ಕನ್ನಡದ ಮೊಟ್ಟಮೊದಲ 'ರಿಯಾಲಿಟಿ ಷೋ' ವನ್ನು ಅದ್ಭುತವಾಗಿ ಸಂಘಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. MSIL ನಿತ್ಯೋತ್ಸವ ಹಾಗು ಸಂಗೀತ ಸ್ಪರ್ಧೆಯನ್ನು ಬೆಂಗಳೂರು ದೂರದರ್ಶನ ಚಂದನದ ಮೂಲಕ ನಡೆಸಿ ಕನ್ನಡ ಕವಿ, ಗಾಯಕರು, ಸಂಯೋಜಕರನ್ನು ಕನ್ನಡ ಜನತೆ ಮತ್ತೊಮ್ಮೆ ಗುನುಗುನಿಸುವಂತೆ ಮಾಡಿದ, ನಿತ್ಯೋತ್ಸವದ ಮೂಲಕ ಕನ್ನಡ ನಾಡಿನ

ಮೂಲೆಮೂಲೆಗಳಿಂದ ನವಯುವ ಪ್ರತಿಭೆಯನ್ನು ಹೆಕ್ಕಿ, ಸುಗಮ ಸಂಗೀತ ಲೋಕಕ್ಕೆ ಪರಿಚಯಿಸಿದ, ತನ್ಮೂಲಕ ಸುಗಮ ಸಂಗೀತಕ್ಕೆ ನವಚೈತನ್ಯವನ್ನು ತುಂಬುವಲ್ಲಿ ಕಪ್ಪಣ್ಣ ಅವರ ಆಲೋಚನೆ ಬಹಳ ಮುಖ್ಯವಾಗಿ ಕೆಲಸಮಾಡಿತ್ತು. ಸತತ ಮೂರು ವರ್ಷಗಳು ನಡೆದ ಈ ರಿಯಾಲಿಟಿ ಷೋ ಇಂದಿಗೂ ಒಂದು ದಾಖಲೆ.

ನಿತ್ಯೋತ್ಸವ ನಡೆದ ಪ್ರಕ್ರಿಯೆಯೇ ವಿಶಿಷ್ಟವಾದುದು. ರಾಜ್ಯದ ಮೂಲೆಮೂಲೆಗಳಿಂದ ಉದಯೋನ್ಮುಖ ಪ್ರತಿಭೆಗಳನ್ನು, ಆರಿಸಿ, ಅವರಿಗೆ ವಲಯ ಮಟ್ಟದಲ್ಲಿ ವಿಶೇಷ ತರಬೇತಿಯನ್ನು ಪರಿಣಿತ, ಹಿರಿಯ ಸುಗಮ ಸಂಗೀತ ಕಲಾವಿದರಿಂದ ಕೊಡಿಸಲಾಯಿತು. ಮೂರು ವರ್ಷವೂ ಇದೇರೀತಿಯ ತರಬೇತಿ, ಆಯ್ಕೆಯಲ್ಲಿ ಪಾರದರ್ಶಕತೆ, ಪ್ರತಿಭೆಗೆ ಸೂಕ್ತ ವೇದಿಕೆ. 64 ಜನರ ಗಾಯಕರ ತಂಡವನ್ನು ಆಯ್ಕೆಮಾಡಿ, ಜೂನಿಯರ್ ಹಾಗೂ ಸೀನಿಯರ್ ಎಂದು ವಿಭಾಗಿಸಿ ಅವರನ್ನು ಬೆಂಗಳೂರಿಗೆ ಕರೆಸಿ, ತರಬೇತಿ. ಅನುಭವಿ ಹಾಗು ಹಿರಿಯ ಸುಗಮ ಸಂಗೀತ ಕಲಾವಿದರು ತೀರ್ಪುಗಾರರಾಗಿ ಭಾಗವಹಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಮಾರ್ಗದರ್ಶಿ ಪುಸ್ತಕವೊಂದನ್ನು ಸಿದ್ಧಪಡಿಸಿ ಪ್ರಖ್ಯಾತರ ಜೊತೆಗೆ ಉದಯೋನ್ಮುಖ ಕವಿಗಳ ಕವನಗಳ ಆಯ್ಕೆ ಮಾಡಿ, ಸಂಗೀತ ನಿರ್ದೇಶಕರ ಸಂಯೋಜನೆಗಳು ಎಲ್ಲರಿಗೂ ದೊರಕುವಂತೆ ಮಾಡಿ, ಸ್ಪರ್ಧಿಗಳಿಗೆ ತರಬೇತಿ ನೀಡಲಾಗುತ್ತಿತ್ತು. ತರಬೇತಿ ಪಡೆದ ಮಕ್ಕಳಿಗೆ ವೃತಿಪರ ವಾದ್ಯವೃಂದವರ ಜೊತೆಗೂಡಿಸಿ, ಸ್ಪರ್ಧೆಯನ್ನು ಹೆಚ್ಚು ಹೆಚ್ಚು ಆಕರ್ಷಕ ಹಾಗು ಕಲಾತ್ಮಕವನ್ನಾಗಿಸಲಾಗಿತ್ತು. ಮೂರು ವರ್ಷವೂ ಇದೇ ಮಾದರಿಯಲ್ಲಿ ಸ್ಪರ್ಧಿಗಳನ್ನು ತರಬೇತಿಗೊಳಿಸಿ ನಡೆಸಿದ ಸ್ಪರ್ಧೆ ಬೆಂಗಳೂರು ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರಗೊಂಡು ಕರ್ನಾಟಕದ ಮನೆಮನೆಗೂ ಸುಗಮ ಸಂಗೀತದ ಕಂಪು ಪಸರಿಸಲು ಕಾರಣವಾಗಿದ್ದು ಈಗ ಇತಿಹಾಸ. ಇದರ ಜೊತೆಗೆ ಹಿರಿಯ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಆಯ್ಕೆ ಮಾಡಿಕೊಟ್ಟ ವಿವಿಧ ಕವಿಗಳ 48 ಕವಿತೆಗಳನ್ನು MSIL ನಿತ್ಯೋತ್ಸವ ಧ್ವನಿಸುರಳಿ ಮತ್ತು ಅಡಕಮುದ್ರೆಯಲ್ಲಿ ತಂದದ್ದು ಮತ್ತೊಂದು ದಾಖಲೆ.

ಹಿರಿಯ ಸುಗಮ ಸಂಗೀತ ನಿರ್ದೇಶಕರಾದ ಹೆಚ್.ಕೆ.ನಾರಾಯಣ್, ಸಿ. ಅಶ್ವತ್ಥ್, ಜಯಶ್ರೀ ಅರವಿಂದ್, ಬಿ.ವಿ. ಶ್ರೀನಿವಾಸ್, ಮನೋಹರ್ ಹಾಗೂ ರಾಜು ಅನಂತಸ್ವಾಮಿ ಅವರ ಸಂಗೀತ ಸಂಯೋಜನೆಯಲ್ಲಿ ಆ ಧ್ವನಿಸುರಳಿಗಳನ್ನು ಹೊರತರಲಾಯಿತು. ಈ ಎಲ್ಲಾ ಗೀತೆಗಳನ್ನು ನಿತ್ಯೋತ್ಸವದ ಪ್ರತಿಭಾಶೋಧದಲ್ಲಿ ಬೆಳಕಿಗೆ ಬಂದ ಯುವಗಾಯಕ ಗಾಯಕಿಯರು ಹಾಡಿದರು. ಇದು ಕನ್ನಡ ಸುಗಮ ಸಂಗೀತ ಇತಿಹಾಸದಲ್ಲಿ ದಾಖಲೆ. ಹಾಗೆಯೇ MSIL ನಿತ್ಯೋತ್ಸವದ ಅಂತಿಮ ಸ್ಪರ್ಧಿಗಳನ್ನು ಸಾರ್ವಜನಿಕರ ಮುಂದೆ ವಿಶೇಷ ವೇದಿಕೆ ನಿರ್ಮಿಸಿ ನಡೆಸಿದ್ದು ಕೂಡ

ಮಹತ್ವದ ವಿಷಯವೇ. ಈ ರೀತಿಯ ಕಾರ್ಯಕ್ರಮದ ಆಯೋಜನೆ, ಅನುಷ್ಠಾನದಲ್ಲಿ ಕಪ್ಪಣ್ಣ ಅವರು ವಹಿಸಿದ ಪಾತ್ರ ಅನನ್ಯವಾದುದು. ಅದಕ್ಕೆ ಹಿರಿಯ ಐಎಎಸ್ ಅಧಿಕಾರಿ ಶ್ರೀ.ಪಿ.ಎಂ. ವಿಠ್ಠಲಮೂರ್ತಿ ಅವರು ಕಪ್ಪಣ್ಣನವರದು 'ಅಸಮಾನ್ಯ ಸಾಮಾನ್ಯ ಪ್ರಜ್ಞೆ' ಎಂದು ಉದ್ಗರಿಸಿರುವುದು.

ನಿತ್ಯೋತ್ಸವದ ಪ್ರತಿಭೆಗಳನ್ನು ಸಂದರ್ಭ ಸೃಷ್ಟಿಸಿ ದೆಹಲಿ, ಮುಂಬೈ, ಚೆನ್ನೈಗಳಲ್ಲಿ ಹಾಡಿಸುವುದರ ಮೂಲಕ ಕನ್ನಡ ಸುಗಮ ಸಂಗೀತ ಶ್ರೀಮಂತಿಕೆಯನ್ನು ಹೊರ ರಾಜ್ಯಗಳಲ್ಲೂ ತೋರಿದ ಕಪ್ಪಣ್ಣ ದಣಿವರಿಯದ ಸಂಘಟಕ.

ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಸುಗಮ ಸಂಗೀತ ಸಮ್ಮೇಳನಗಳು ಕಳೆಗಟ್ಟಲು, ಕನ್ನಡದ ಧೀಮಂತ ಸುಗಮ ಸಂಗೀತ ನಿರ್ದೇಶಕ, ಗಾಯಕ ಸಿ. ಅಶ್ವತ್ಥ ಅವರ 'ಕನ್ನಡವೇ ಸತ್ಯ' ಕಾರ್ಯಕ್ರಮ ಯಶಸ್ವಿಯಾಗಲು ಕಪ್ಪಣ್ಣನವರ ಶ್ರಮ ಅಪಾರ ಹಾಗಾಗಿ ಕಪ್ಪಣ್ಣ ಎಲ್ಲೆಲ್ಲೂ ಸಲ್ಲುವ ಸಾಂಸ್ಕೃತಿಕ ಪರಿಚಾರಿಕ.

## ಇವ ನಮ್ಮವ, ಇವ ನಮ್ಮವ.....

ಕಪ್ಪಣ್ಣನವರನ್ನು 'ಇವ ನಮ್ಮವ, ಇವ ನಮ್ಮವ' ಎಂದು ಎಲ್ಲಾ ಸಾಂಸ್ಕೃತಿಕ ವಲಯದ ಮಂದಿ ಅಪ್ಪಿಕೊಳ್ಳುತ್ತಾರೆ. ಸಂಗೀತ, ಸಾಹಿತ್ಯ, ನೃತ್ಯ, ಜಾನಪದ, ಚಿತ್ರಕಲೆ, ಸುಗಮ ಸಂಗೀತ ಜೊತೆಗೆ ರಂಗಭೂಮಿ....

ಶ್ರೀನಿವಾಸ ಜಿ. ಕಪ್ಪಣ್ಣನವರು ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದರೂ ಅವರು ಕಲಾವಿದರನ್ನು ಗೌರವಿಸುತ್ತಿದ್ದ ರೀತಿ ಅನನ್ಯವಾದುದು. ರಂಗಕಲಾವಿದರಿರಲಿ, ಜಾನಪದ ಕಲಾವಿದರಿರಲಿ, ಅವರ ಬಗ್ಗೆ ಅಧಿಕವಾದ ಗೌರವ ಇವರಿಗೆ. ಒಮ್ಮೆ ಹುಬ್ಬಳ್ಳಿಯಲ್ಲಿ ಮಾಸಾಶನ ಸಂದರ್ಶನಕ್ಕಾಗಿ ಹೋಗಿದ್ದರು, ಅಲ್ಲಿ ಮಾಸಾಶನ ಬಯಸಿ ನೂರಾರು ಕಲಾವಿದರು ಬಂದಿದ್ದರು. ಅದರಲ್ಲಿ ಜುಬೇದಾಬಾಯಿ ಸವಣೂರು ಅವರು ಒಬ್ಬರು. ಇವರು ಖ್ಯಾತ ವೃತ್ತಿರಂಗ ಕಲಾವಿದೆಯಾಗಿದ್ದು, ಅಂತಹ ಪ್ರಚಾರಕ್ಕೆ ಬಂದಿದ್ದವರಾಗಿರಲಿಲ್ಲ. ಸಂದರ್ಶನದ ಸಮಯದಲ್ಲಿ ಒಂದು ಹಾಡು ಹೇಳುವಂತೆ ಕೇಳಲಾಯಿತು, ಜುಬೇದಾ ಬಾಯಿಯವರ ಅದ್ಭುತಗಾಯನ ಕೇಳಿದ ಕಪ್ಪಣ್ಣನವರು ಆ ಹಿರಿಯ ಕಲಾವಿದರ ಕಾಲು ಮುಟ್ಟಿ ನಮಸ್ಕರಿಸಿ, "ನಿಮ್ಮನ್ನು ಸಂದರ್ಶನ ಮಾಡುವಷ್ಟು, ನಿಮ್ಮ ಸಾಮರ್ಥ್ಯವನ್ನು ಅಳೆಯುವ ಶಕ್ತಿ ನನ್ನಲ್ಲಿಲ್ಲ. ಅಂತಹ ಮಹಾನ್ ಕಲಾವಿದೆ ನೀವು" ಎಂದು ಅವರನ್ನು ಪ್ರಶಂಸಿದರು. ಜುಬೇದಾ ಬಾಯಿ ಸವಣೂರು ಅವರನ್ನು ಮತ್ತೆ ರಂಗರಸಿಕರ ಗಮನಕ್ಕೆ ತಂದರು. ಬೆಂಗಳೂರಿಗೆ ಆಹ್ವಾನಿಸಿ ಬೆಂಗಳೂರು ಆಕಾಶವಾಣಿಯಲ್ಲಿ ಹಾಡಿಸಿ, ಅವರ ಗಾಯನ ಪ್ರತಿಭೆಯ ಅನಾವರಣ ಮಾಡಿದರು. ಹಾಗೆಯೇ ಅವರ ಕಾರ್ಯಕ್ರಮವನ್ನು ದೆಹಲಿಯಲ್ಲೂ ಏರ್ಪಡಿಸಿದರು. ಹೀಗೆ

ಯಾರೇ ಪ್ರತಿಭಾವಂತರನ್ನು ಕಂಡರೆ ಅವರನ್ನು ಸೂಕ್ತವಾಗಿ ಗೌರವಿಸಿ, ಅವರಿಗೆ ಸರಿಯಾದ ವೇದಿಕೆ ಕಲ್ಪಿಸಿ, ಅವರ ಕಲೆಯನ್ನು ದೊಡ್ಡ ರೀತಿಯಲ್ಲಿ ಕಾಣುವಂತೆ ಮಾಡುವ ಮುಕ್ತ ಮನಸ್ಸಿನ ವ್ಯಕ್ತಿ ಶ್ರೀನಿವಾಸ. ಜಿ. ಕಪ್ಪಣ್ಣ.

70ರ ದಶಕದ ಪೂರ್ವಕಾಲದಲ್ಲಿ ತಮ್ಮ ಉಜ್ವಲ ಕವಿತೆಗಳಿಂದ ಸಂಚಲನ ಉಂಟುಮಾಡಿದ ದಲಿತ ಕವಿ ಸಿದ್ಧಲಿಂಗಯ್ಯನವರ ಹಾಡುಗಳನ್ನು 'ಕೆಂಪು ಸೂರ್ಯ' ಎಂಬ ಹೆಸರಿನ ಕ್ಯಾಸೆಟ್ ಧ್ವನಿ ಸುರುಳಿಯನ್ನು ಹೊರತಂದ ಹೆಗ್ಗಳಿಗೆ ಇವರದು. ಹೋರಾಟದ ಹಾಡುಗಳನ್ನು ಕರ್ನಾಟಕದ ಮೂಲೆ ಮೂಲೆಗೆ ತಲುಪಿಸುವಲ್ಲಿ ಈ ಧ್ವನಿಸುರಳಿ ಯಶಸ್ವಿಯಾಗಿದ್ದು ಈಗ ಇತಿಹಾಸ.

ಕಪ್ಪಣ್ಣನವರು ತಮ್ಮ ಸಾಂಸ್ಕೃತಿಕ ಬದುಕನ್ನು ಅಚ್ಚುಕಟ್ಟಾಗಿ ಕಟ್ಟಿಕೊಂಡವರು. ಯಾವುದೇ ಕಲಾಪ್ರಕಾರವಿರಲಿ ಅದರ ಉನ್ನತಿಗೆ ಶ್ರಮಿಸುವುದು ಇವರಿಗೆ ಒಂದು ರೀತಿ ಅಭ್ಯಾಸವಾಗಿ ಬಿಟ್ಟಿದೆ. ಕಪ್ಪಣ್ಣನವರು ದೇಶದ ಎಲ್ಲ ಮುಖ್ಯ ಸಾಂಸ್ಕೃತಿಕ ಕೇಂದ್ರಗಳ ಜೊತೆಗೆ, ಸಾಂಸ್ಕೃತಿಕ ವ್ಯಕ್ತಿಗಳೊಂದಿಗೆ ಅತ್ಯುತ್ತಮ ಸಂಪರ್ಕ ಹೊಂದಿರುವುದಷ್ಟೇ ಅಲ್ಲ ಅವರ ಸದುಪಯೋಗ ಕನ್ನಡ ಸಾಂಸ್ಕೃತಿಕ ರಂಗಕ್ಕೆ ಅಗುವಂತೆ ಮಾಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

ಅಷ್ಟೇ ಅಲ್ಲ, ಅವರ ಸಂಪರ್ಕ ಕ್ರಾಂತಿ ವಿದೇಶಗಳಿಗೂ ಪಸರಿಸಿದೆ. ಇತ್ತೀಚಿನ ದಶಕದಲ್ಲಿ ಕನ್ನಡ ಸಾಂಸ್ಕೃತಿಕ ಪರಂಪರೆಗೆ ವಿಶಿಷ್ಟ ಸ್ಥಾನವನ್ನು ವಿದೇಶ ಸಾಂಸ್ಕೃತಿಕ ಕೇಂದ್ರಗಳಲ್ಲಿ ತಂದುಕೊಟ್ಟ ಖ್ಯಾತಿ ಇವರಿಗೆ ಸಲ್ಲಬೇಕು. ಪ್ರಖ್ಯಾತ ಭರತನಾಟ್ಯ ಕಲಾವಿದೆ, ಅಂತಾರಾಷ್ಟ್ರೀಯ ಖ್ಯಾತಿಯ ಪ್ರತಿಭಾ ಪ್ರಹ್ಲಾದ್ ಅವರ ನೃತ್ಯಕ್ಕೆ, ಅವರ ತಂಡದ ಎಲ್ಲಾ ಕಾರ್ಯಕ್ರಮಕ್ಕೆ ಕಲಾತ್ಮಕ (ಕ್ರಿಯೇಟಿವ್) ನಿರ್ದೇಶಕರಾಗಿ ಕಪ್ಪಣ್ಣ, ನೃತ್ಯ ಕ್ಷೇತ್ರದಲ್ಲೂ ತಮ್ಮ ಸೇವೆ ಸಲ್ಲಿಸಿದ್ದಾರೆ. ನೃತ್ಯಗಳಿಗೆ ವಿಶಿಷ್ಟ ರೀತಿಯ ಬೆಳಕು ಸಂಯೋಜನೆ ಮಾಡುವ ಇವರು ಬೆಂಗಳೂರಿನ ಅನೇಕ ನೃತ್ಯಗುರುಗಳ ತಂಡಗಳ ನೃತ್ಯಗಳಿಗೆ ಬೆಳಕು ಸಂಯೋಜಿಸಿದ್ದಾರೆ.

ಪ್ರತಿಭಾಪ್ರಹ್ಲಾದ್ ಅವರೊಡಗೂಡಿ ವಿಶ್ವದ ಅನೇಕ ರಾಷ್ಟ್ರಗಳ ನೃತ್ಯೋತ್ಸವಗಳಲ್ಲಿ ಬೆಳಕು ಸಂಯೋಜನೆ ಹಾಗು ಕಲಾಭಿವ್ಯಕ್ತಿ ಮಾಡಿರುವ ಕಪ್ಪಣ್ಣ, ಹಂಪೆಯಲ್ಲಿ ಪ್ರತಿಭಾ ಪ್ರಹ್ಲಾದ್ ಆಯೋಜಿಸಿದ ವಿಜಯನಗರ ಉತ್ಸವದ ನೇತೃತ್ವ ವಹಿಸಿ, ಉತ್ಸವದ ಅದ್ಭುತ ಯಶಸ್ಸಿಗೆ ಕಾರಣರಾದರು. ಪ್ರತಿಭಾ ಪ್ರಹ್ಲಾದ್ ಅವರು ಕಪ್ಪಣ್ಣ ಅವರನ್ನು ಕುರಿತು ಹೀಗೆ ಹೇಳಿದ್ದಾರೆ – "It is true – kappana today is a brand – there is no one connected with theatre in the country who does not know him and no one connected even remotely with the culture in the

state who would not like to know him.... His path on in theatre – there can be no doubt about that . But he is not a closed bud. He is open to expansion, to sharing, to creating, to fantasizing, to realizing and actualizing dreams. This is the kappanna I care about"

ಕಪ್ಪಣ್ಣ ಕೇವಲ ಸಾಂಸ್ಕೃತಿಕ ಚಟುವಟಿಕೆಗಳಿಗಷ್ಟೇ ತಮ್ಮನ್ನು ತೊಡಗಿಸಿಕೊಂಡವರಲ್ಲ. ಕಪ್ಪಣ್ಣ ಅವರ ಚಟುವಟಿಕೆಗಳನ್ನು ಕುರಿತು ಅವರ ಗೆಳೆಯ ಎನ್.ಕೆ ಮೋಹನ್‌ರಾಂ ಹೀಗೆ ಹೇಳಿದ್ದಾರೆ. "ಕಪ್ಪಣ್ಣನ ಬ್ಯಾಕ್‌ಸ್ಟೇಜ್ ಕೆಲಸ ಅಲ್ಲಿಗೇ ನಿಲ್ಲುವುದಿಲ್ಲ ಮತ್ತೂ ಮುಂದುವರಿಯುತ್ತದೆ. ತೊಟ್ಟಲಿನಿಂದ ಚಟ್ಟದವರೆಗೆ, ನಾಮಕರಣ, ಮದುವೆಗಳಿಂದ ವೈಕುಂಠ ಸಮಾರಾಧನೆಯವರೆಗೆ, ಸ್ಕೂಲು–ಕಾಲೇಜು ಆಸ್ಪತ್ರೆಗಳಲ್ಲಿ ಸೀಟು–ಬೆಡ್ ಕೊಡಿಸುವವರೆಗೆ, ಒಕ್ಕಲಿಗರ, ಬ್ರಾಹ್ಮಣರ ಸಮ್ಮೇಳನಗಳಿಂದ ವಿಜ್ಞಾನ ಸಮ್ಮೇಳನಗಳಿಗೆ ಲೈಟು–ಸ್ಟೇಜು ಮಾಡುವವರಗೆ, ಶಿವರಾತ್ರಿ–ರಂಜಾನ್‌ಗಳಿಗೆ ಕಾಯೊಬ್ಬಟ್ಟು– ನುಚ್ಚಿನುಂಡೆ, ಪಲಾವು–ಕಬಾಬ್ ವ್ಯವಸ್ಥೆ ಮಾಡುವವರೆಗೆ, ಇಂದಿರಾನಗರ ಕ್ಲಬ್ಬಿನಲ್ಲಿ ಸ್ಕಾಚು ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ನೀರು–ಮಜ್ಜಿಗೆ–ಪಾನಕದ ವ್ಯವಸ್ಥೆಗಳನ್ನು ಏಕಕಾಲಕ್ಕೆ ಮಾಡುವ, ಹೀಗೆ ಎಲ್ಲರಲ್ಲಿ ಓಡಾಡುತ್ತಾ ಬೇಡವಾದ ಉಸಾಬರಿಗೆ ತಲೆ ಹಾಕುವ ಕಪ್ಪಣ್ಣ ಕನ್ನಡ ರಂಗಭೂಮಿಯ ಅಶ್ವ."

ಕಪ್ಪಣ್ಣನವರ ಆತಿಥ್ಯವನ್ನು ಆಸ್ವಾದಿಸಿರುವ ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡ್ ಹೀಗೆ ಹೇಳಿದ್ದಾರೆ..... "ಕಪ್ಪಣ್ಣನ ರಂಗಾರ್ಪಣದ ವೈಶಿಷ್ಟ್ಯ ಇರುವುದು ಅದರ ಆತಿಥ್ಯದಲ್ಲಿ. ಇವರಿಗೆ ಕಲೆ, ನಾಟ್ಯ ಬೇಕಾಗಿರುವುದು ಕೇವಲ ರಂಗಭೂಮಿಯ ಮೇಲೆ, ಸಾರ್ವಜನಿಕ ತಾಣಗಳಲ್ಲಿ ಮಾತ್ರವಲ್ಲ. ಸ್ವಂತದ ಮನೆಯಲ್ಲಿ! ಎಲ್ಲೆಲ್ಲೋ ಭೇಟಿಯಾದ ಕಲಾಕಾರರನ್ನೆಲ್ಲಾ ಅಮರಿಸಿಕೊಂಡು, ಮನೆಗೆ ಕರೆದು ತಂದು ಅವರೊಡನೆ ಗುಂಡು–ಊಟ–ಚರ್ಚೆ–ಹಾಸ್ಯ–ವಿನೋದಗಳ ನಡುವೆ ಕಾಲಕಳೆದಾಗಲೇ ಅವರಿಗೆ ತೃಪ್ತಿ.

ಕಪ್ಪಣ್ಣನ ಆತಿಥ್ಯವನ್ನು ಮೆಚ್ಚಿಕೊಳ್ಳುವಾಗಲೇ ಇದನ್ನೆಲ್ಲಾ, ನಗುನಗುತ್ತಾ ಸಹಿಸಿಕೊಳ್ಳುವ ಲಲಿತಕ್ಕನ ತಾಳ್ಮೆ ನನಗೆ ಇನ್ನಷ್ಟು ಬೆರಗುಗೊಳಿಸುತ್ತದೆ. ಎಂಬುದನ್ನು ಒಪ್ಪಿಕೊಳ್ಳಬೇಕು."

ಕಪ್ಪಣ್ಣ ತಮ್ಮ ಗೆಳೆಯರ ಕಷ್ಟಗಳಿಗೆ ಸ್ಪಂದಿಸುವ ರೀತಿಯೂ ಅನನ್ಯವಾದುದು. ತಾವು ಮಾಡಿದ ಸಹಾಯ ಇನ್ನೊಬ್ಬರಿಗೆ ತಿಳಿಯದಂತೆ ಮಾಡುವ ಅಪರೂಪದ ಗುಣ ಅವರದು. ಅವರ ಮನೆಯಂಗಳದಲ್ಲಿ ಅನೇಕ ಪ್ರೇಮ ವಿವಾಹಗಳನ್ನು ಮಾಡಿದ್ದಾರೆ.

ಗೆಳೆಯರಿಗೆ ಪ್ರಶಸ್ತಿ, ಪುರಸ್ಕಾರಗಳು ಬಂದಾಗ ಆ ಗೆಳೆಯರನ್ನು ಅವರ ಸಹವರ್ತಿಗಳನ್ನು ಆಹ್ವಾನಿಸಿ ಹಬ್ಬ ಆಚರಿಸಿದ್ದಾರೆ.

ಬೆಂಗಳೂರಿನ ರಂಗ ತಂಡಗಳು, ಸುಗಮ ಸಂಗೀತ ಕಲಾವಿದರು, ನೃತ್ಯ ಕಲಾವಿದರು, ಸಾಹಿತಿ ಮಿತ್ರರ ಜೊತೆಗೆ ಪರ ಊರಿನಿಂದ ಬರುವ ಕಲಾತಂಡಗಳಿಗೆ ಆಹ್ವಾನ ನೀಡಿ, ಅವರಿಗೆ ಔತಣ ಕೂಟ ನಡೆಸಿದ್ದಾರೆ. ಜಾನಪದ ಕಲಾವಿದರನ್ನು ತಮ್ಮ ಮನೆಗೆ ಆಹ್ವಾನಿಸಿ ಸತ್ಕರಿಸಿದ್ದಾರೆ. ಡಾ. ರಾಜ್‌ಕುಮಾರ್ ಅವರಂಥ ಮೇರು ನಟರಿಂದ ಮೊದಲ್ಗೊಂಡು, ದೇಶದ ಅನೇಕ ಪ್ರತಿಷ್ಠಿತ ರಂಗ ಕಲಾವಿದರು ಇವರ ಮನೆಯ ಊಟದ ಸವಿ ಸವಿದಿದ್ದಾರೆ.

ಇವರೆಲ್ಲಾ ಕಾರ್ಯಗಳಿಗೆ ಒತ್ತಾಸೆಯಾಗಿ ನಿಂತು, ಇಂದಿಗೂ ಈ ಪರಂಪರೆ ಮುಂದುವರಿಯಲು ಕಾರಣರಾಗಿರುವುದು ಇವರ ಕುಟುಂಬದ ಸದ್ಯಸ್ಯರಾದ ಶ್ರೀಮತಿ ಲಲಿತಾ ಶ್ರೀನಿವಾಸ್, ಮಕ್ಕಳಾದ ಸ್ನೇಹಕಪ್ಪಣ್ಣ, ಜಯದೇವ್, ಈಗ ಇವರ ಮನೆಯ ಅಂಗಳದಲ್ಲೇ 'ಕಪ್ಪಣ್ಣ ಅಂಗಳ' ಆಪ್ತ ರಂಗ ಮಂದಿರ ನಿರ್ಮಿಸಿ, ನಿರಂತರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಕಪ್ಪಣ್ಣ ಅಪ್ಪಟ ರಂಗಪ್ರೇಮಿ. ಸಾಂಸ್ಕೃತಿಕ ಪರಿಚಾರಕ ಸಂಘಟಕ ಹಾಗೂ ಬೆಳಕು ವಿನ್ಯಾಸಕಾರ.

ಖ್ಯಾತ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಂ ಅವರ ಮಾಯಮೃಗ, ಮುಕ್ತ ಧಾರಾವಾಹಿ ಸರಣಿಗಳ ಸಂವಾದಗಳನ್ನು ನಡೆಸುತ್ತಾ, ಕಿರುತೆರೆಯ ಮೌಲ್ಯವನ್ನು ಹೆಚ್ಚಿಸುವಲ್ಲಿ ಇವರು ಮಾಡಿದ ಮೋಡಿ ಜನಜನಿತ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಭಾರಿ ಸಾಂಸ್ಕೃತಿಕ ಕಾರ್ಯಕ್ರಮಗಳಾಗಲಿ, ರಾಜ್ಯಮಟ್ಟದ, ಸ್ಥಳೀಯವಾದ ಎಷ್ಟೇ ಕಿರಿದಾದ ವ್ಯಾಪ್ತಿಯ ಕಾರ್ಯಕ್ರಮಗಳಾಗಿರಲಿ, ಇವರು ಸಮಾನ ಬದ್ಧತೆ, ಕ್ರಿಯಾಶೀಲತೆ ಮತ್ತು ವೃತ್ತಿಪರತೆಯಿಂದ ಸಂಘಟಿಸುತ್ತಾರೆ.

ಕರ್ನಾಟಕ ಸಾರಿಗೆ ಇಲಾಖೆಗಾಗಿ ಸಂಘಟಿಸಿದ 'ಸೌಜನ್ಯ ಮಾಸ' ಚಿತ್ರಕಲಾ ಪರಿಷತ್‌ನಲ್ಲಿ ಸಂಘಟಿಸಿದ 'ಏಕ-ಅನೇಕ', ನಂದಿನಿ ಆಳ್ವ, ಪದ್ಮಿನಿ ರವಿ ಅವರ ಕನಸಿನ ಬೆಂಗಳೂರು ಹಬ್ಬ, ಕಾರ್ಗಿಲ್ ಯೋಧರ ನೆನಪಿಗಾಗಿ ಸಂಘಟಿಸಿದ ಸಾಹಿತಿ ಕಲಾವಿದರ ವೈವಿಧ್ಯ ಮಯಸಾಂಸ್ಕೃತಿಕ ಕಾರ್ಯಕ್ರಮಗಳು, ಮುಂತಾದವುಗಳಿಂದ ಕಪ್ಪಣ್ಣನವರ ಸಂಘಟನಾ ಚಾತುರ್ಯದ ವ್ಯಾಪ್ತಿ ವಿಸ್ತಾರಗಳನ್ನು ಗುರುತಿಸುತ್ತಾ ಹೋಗಬಹುದು.

2012 ಜನವರಿ-ಫೆಬ್ರವರಿ ತಿಂಗಳಿನಲ್ಲಿ ಒಂದು ತಿಂಗಳ ಕಾಲ ನಡೆದ ಅಂತಾರಾಷ್ಟ್ರೀಯ ಸೂರಜ್‌ಕುಂಡ್ ಕಲಾ ಉತ್ಸವದಲ್ಲಿ ಕರ್ನಾಟಕದ ಜಾನಪದ ಕಲಾ ಪರಂಪರೆಯನ್ನು ಪ್ರದರ್ಶಿಸಿದ ರೀತಿ ಅನನ್ಯವಾದುದು. 28 ವರ್ಷಗಳ ನಂತರ

ಕರ್ನಾಟಕ, ರಾಜ್ಯವನ್ನು 'ಥೀಮ್‌ಸ್ಟೇಟ್' ಎಂದು ಪರಿಗಣಿಸಿ, 'ಸೂರಜ್‌ಕುಂಡ್' ಕಲಾಮೇಳಕ್ಕೆ ನಮ್ಮ ಜಾನಪದ ಕಲೆಗಳು ನೀಡಿದ ಮೆರಗು ಈವರೆಗಿನ ಸೂರಜ್‌ಕುಂಡ್ ಮೇಳದಲ್ಲಿ ದಾಖಲೆ. ಹಾಗೆಯೇ ಈ ದಾಖಲೆಯನ್ನು ಮುರಿಯಲೂ ಬಹುಶಃ ಯಾವ ರಾಜ್ಯರಲ್ಲಿ ಸಾಧ್ಯವಿಲ್ಲವೆಂಬ ಅಭಿಪ್ರಾಯ ಅಲ್ಲಿನ ವ್ಯವಸ್ಥಾಪಕರದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ವಾರ್ತಾ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಈ ಅಂತರಾಷ್ಟ್ರೀಯ ಮಟ್ಟದ ಕರಕುಶಲಮೇಳದಲ್ಲಿ ನಮ್ಮ ಜಾನಪದ ಪರಂಪರೆ ಅನಾವರಣಗೊಂಡ ರೀತಿ, 2000ಕ್ಕೂ ಹೆಚ್ಚು ಕಲಾವಿದರನ್ನು ಹಾಗೂ 50ಕ್ಕೂ ಹೆಚ್ಚು ಕಲಾತಂಡಗಳನ್ನು ಪ್ರತಿಷ್ಠಿತ ವೇದಿಕೆಗಳಲ್ಲಿ ಬಿಂಬಿಸಿದ ಪರಿಯನ್ನು ಲಕ್ಷಾಂತರ ಮಂದಿ ವೀಕ್ಷಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಮತ್ತೊಂದು ಸಾಂಸ್ಕೃತಿಕ ದಾಖಲೆ ನಮ್ಮ ಜಾನಪದ ಕಲಾ ಪ್ರಪಂಚದಲ್ಲಿ ನಡೆದಿದೆ. ವಿದೇಶಗಳಲ್ಲಿ ನಡೆಯುವ ಪ್ರತಿಷ್ಠಿತ ಸಾಂಸ್ಕೃತಿಕ ಉತ್ಸವಗಳಲ್ಲಿ ನಮ್ಮ ಜಾನಪದ ಕಲಾವಿದರು ಪ್ರಾತಿನಿಧ್ಯ ಪಡೆಯ ತೊಡಗಿರುವುದು ಒಂದು ವಿಶೇಷ ಬೆಳವಣಿಗೆ. ಈ ಅವಕಾಶಗಳು 'ಜಾನಪದ ಜಾತ್ರೆ'ಯ ನಂತರ ಬರತೊಡಗಿದ್ದು, 'ಜಾನಪದ ಜಾತ್ರೆ'ಯು ಮಹತ್ವವನ್ನು ಎತ್ತಿ ತೋರುತ್ತದೆ. ಹಿರಿಯ ಮೂಲ ಜಾನಪದ ಕಲಾವಿದರಿಂದ ಇಂದಿನ ಪೀಳಿಗೆಯ ಕಲಾವಿದರ ತಂಡಗಳು ಈ ರೀತಿಯ ಅವಕಾಶವನ್ನು ಪಡೆಯುತ್ತಿದೆ. ನಮ್ಮ ಜಾನಪದ ಕಲೆ ಬಹುತೇಕ ದಲಿತ ಸಮುದಾಯದರ ಜೀವನಾಭಿವ್ಯಕ್ತಿಯಾಗಿರುವುದರಿಂದ, ಕೇವಲ ಶಿಷ್ಟ ಕಲಾವಿದರೇ ಪ್ರಧಾನ ವೇದಿಕೆಯಲ್ಲಿ ಪ್ರದರ್ಶನ ನೀಡುತ್ತಿದ್ದ ಪರಂಪರಾಗತ ಅಭ್ಯಾಸದಲ್ಲಿ ಬದಲಾವಣೆಗೆ ಕಾರಣರಾದವರು ಕಪ್ಪಣ್ಣ. ಅವರ ಒತ್ತಾಸೆಯ ಫಲವಾಗಿ (AKKA, NAVIKA) ಅಕ್ಕ, ನಾವಿಕ, ಮುಂತಾದ ಅಂತಾರಾಷ್ಟ್ರೀಯ ಕನ್ನಡದ ಸಾಂಸ್ಕೃತಿಕ ಉತ್ಸವಗಳಿಗ, ಅಲ್ಲದೆ ಸರ್ಕಾರ ಆಯೋಜಿಸುವ ಅಂತರರಾಷ್ಟ್ರೀಯ ಸಾಂಸ್ಕೃತಿಕ ಕಲೆಗಳ ವಿನಿಮಯ ಕಾರ್ಯಕ್ರಮಗಳಿಗೆ ತಮಟೆ, ನಗಾರಿ, ಡೊಳ್ಳು, ವೀರಗಾಸೆ, ಚಿಟ್‌ಮೇಳ, ಪೂಜಾ ಕುಣಿತ, ಜಾನಪದ ಗಾಯನ ಮುಂತಾದವುಗಳು ನಿರಂತರವಾಗಿ ಅವಕಾಶ ಪಡೆದುಕೊಳ್ಳುತ್ತಿವೆ. ಇವುಗಳಲ್ಲಿ ಬಹುತೇಕ ಕಲಾವಿದರು ದಲಿತವರ್ಗಕ್ಕೆ ಸೇರಿದವರು ಅವಕಾಶ ವಂಚಿತರು. ಇವರಿಗೆಲ್ಲಾ ತಮ್ಮ ಕಲೆಯನ್ನು ಹೆಚ್ಚು ಹೆಚ್ಚು ಘನತೆಯಿಂದ, ಹೆಮ್ಮೆಯಿಂದ ಪ್ರದರ್ಶಿಸಲು ಅವಕಾಶ ಸಿಕ್ಕಿರುವುದಕ್ಕೆ, ಅವರೆಲ್ಲಾ ಕಪ್ಪಣ್ಣನವರನ್ನು ನೆನೆಸುತ್ತಾರೆ. ನಮಿಸುತ್ತಾರೆ.

ನಿರಂತರ ಸಾಂಸ್ಕೃತಿಕ ಬದುಕಿನಲ್ಲಿ, ದಣಿವಾದರೂ ಆಗದಂತೆ ತಾವೂ, ತಮ್ಮ ಕುಟುಂಬ ವರ್ಗದವರನ್ನು, ಅಸಂಖ್ಯ ಗೆಳೆಯರ ಬಳಗವನ್ನು ಒಟ್ಟಾಗಿ ಸೇರಿಸಿಕೊಂಡು ಅದಮ್ಯ ಜೀವನೋತ್ಸಾಹದೊಂದಿಗೆ ಸಾಗುತ್ತಿರುವ ಕಪ್ಪಣ್ಣನವರು

ಕನ್ನಡ ರಂಗಭೂಮಿಯ ರಂಗಭೂಮಿಯ ರಂಗಸಂಪನ್ನರು, ರಂಗಭೂಮಿಯೇ ಇವರ ಉಸಿರು, ಇವರ ಚಿಂತನೆ.

ನ್ಯಾಷನಲ್ ಕಾಲೇಜು ಹಿಸ್ಟ್ರಿಯಾನಿಕ್ ಕ್ಲಬ್ ಸದಸ್ಯರಾಗಿ, ನಟರಂಗದ ಸಂಘಟಕರಾಗಿ, ವಾರ್ತಾ ಇಲಾಖೆ ಅಧಿಕಾರಿಯಾಗಿ, ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್, ಅಧ್ಯಕ್ಷರಾಗಿ ಕಪ್ಪಣ್ಣ ನಿರ್ವಹಿಸಿದ ಕಾರ್ಯಗಳನ್ನು ಒಂದು ತೆಕ್ಕೆಯಲ್ಲಿ ಹಿಡಿದಿಡುವುದು ಕಷ್ಟ ಸಾಧ್ಯವೇ ಸರಿ. ಅದಕ್ಕಾಗಿ, ಕಪ್ಪಣ್ಣನವರಿಗೆ 60 ವರ್ಷಗಳು ತುಂಬಿದ ಸಂದರ್ಭದಲ್ಲಿ ಸುಂದರಪ್ರಕಾಶನ ಸಂಸ್ಥೆಯವರು ಹೊರತಂದ ಕಪ್ಪಣ್ಣ ರಂಗಾವತರಣ – ಅವರಿವರು ಕಂಡಂತೆ ಪುಸ್ತಕವನ್ನು ಅವಲೋಕಿಸಿದರೆ ಸಾಕು ಕಪ್ಪಣ್ಣನವರ ಬಹುಮುಖಿ ಕೆಲಸಗಳ ಅರಿವಾಗುತ್ತದೆ.

ನಿಜಕ್ಕೂ ಕಪ್ಪಣ್ಣ ರಂಗಾವತಾರಿಯೇ. ಅವರ ಸಮಕಾಲೀನ ರಂಗಗೆಳೆಯರಾದ ಪರೇಶ್, ಲೋಕೇಶ್ ಜೆ., ಸಿ.ಜಿ.ಕೆ., ಆರ್. ನಾಗೇಶ್, ಎಲ್. ಕೃಷ್ಣಪ್ಪ, ಚಂದ್ರಕುಮಾರ್‌ಸಿಂಗ್, ನಾಗಾಭರಣ, ಟಿ.ಎನ್. ಸೀತಾರಾಂ ಮುಂತಾದವರೊಂದಿಗೆ ಸಮಗ್ರ ರಂಗಭೂಮಿಯ ಬೆಳವಣಿಗೆಗೆ ಶ್ರಮಿಸಿದವರು. ಖ್ಯಾತ ನಿರ್ದೇಶಕರಾದ 'ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಬಿ. ಜಯಶ್ರೀ, ಹಾಗೆಯೇ ನಾಟಕಕಾರರಾದ ಪಿ. ಲಂಕೇಶ್, ಗಿರೀಶ್ ಕಾರ್ನಾಡ್, ಡಾ. ಚಂದ್ರಶೇಖರ ಕಂಬಾರ ಈ ಪೀಳಿಗೆಯ ಪ್ರತಿಭಾನ್ವಿತರೊಂದಿಗೆ ಒಡನಾಡುತ್ತಲೇ, ಎರಡನೇ ಮೂರನೇ ಸಾಲೀನ ಪೀಳಿಗೆಗಳನ್ನು ಹುಟ್ಟುಹಾಕಲು ಪ್ರಯತ್ನಿಸಿದರು. ರಂಗಭೂಮಿ ಇರಲಿ, ಸುಗಮಸಂಗೀತವೇ ಇರಲಿ, ಚಿತ್ರಕಲೆ ಅಥವಾ ಜಾನಪದ ಕಲಾಪ್ರಕಾರಗಳಿರಲಿ, ಹೊಸಹೊಸ ಪ್ರತಿಭೆಗಳನ್ನು ಮುಂಚೂಣಿಗೆ ತರಲು ಎಂದೂ ಪ್ರಯತ್ನಿಸಿದವರು.

ದೆಹಲಿಯ ಕರ್ನಾಟಕ ಸಂಘ, ಮುಂಬೈ ಕನ್ನಡ ಸಂಘ ಮೈಸೂರು ಅಸೋಸಿಯೇಶನ್ ಮುಂತಾದ ಹೊರನಾಡು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಗಳೊಂದಿಗೆ ಇವರು ನಡೆಸಿರುವ ಚಟುವಟಿಕೆಗಳು ದಾಖಲಾರ್ಹ. ಇದೆಲ್ಲವೂ ರಂಗಭೂಮಿಗೆ ಸಂಬಂಧಿಸಿದ ಕ್ರಿಯಾಶೀಲ ಚಟುವಟಿಕೆಗಳೇ, ಕಪಣ್ಣನವರ ಕ್ರಿಯಾಶೀಲತೆಯನ್ನು ಹತ್ತಿರದಿಂದ ಬಲ್ಲ ಮುಂಬೈ ಮೈಸೂರು ಅಸೋಸಿಯೇಶನ್ ಕೆ. ಮಂಜುನಾಥಯ್ಯ ಹೀಗೆ ಹೇಳುತ್ತಾರೆ. "ಹೊರನಾಡಿನ ಸಂಸ್ಥೆಯಾದ ನಮ್ಮೊಂದಿಗಿನ ಅವರ ವ್ಯವಹಾರ ಸ್ಮರಣೀಯ ಹಾಗೂ ಅನುಕರಣೀಯ. ನಮ್ಮದೊಂದೇ ಅಲ್ಲ. ರಾಷ್ಟ್ರದ ಇನ್ನಿತರ ಸಾಂಸ್ಕೃತಿಕ ಕನ್ನಡ ಸಂಘಟನೆಗಳಿಗೂ ಇವರ ಮಾರ್ಗದರ್ಶನ ಹಾಗೂ ಸೇವೆ ಸಂದಿದೆ."

ಕಪ್ಪಣ್ಣನವರ ಮತ್ತೊಬ್ಬ ಆಪ್ತ ಗೆಳೆಯ ನಾಟಕಕಾರ, ಕಿರುತೆರೆ ನಿರ್ದೇಶಕ

ಟಿ.ಎನ್.ಸೀತಾರಂ, ಕಪ್ಪಣ್ಣನವರ ಸಾಂಸ್ಕೃತಿಕ ಶಕ್ತಿಯನ್ನು ಹೀಗೆ ಚಿತ್ರಿಸುತ್ತಾರೆ. "ಕಪ್ಪಣ್ಣ ನೀನಿಲ್ಲದಿದ್ದರೆ ಕನ್ನಡ ಸಾಂಸ್ಕೃತಿಕ ಲೋಕ ಕಳಹೀನವಾಗುತ್ತಿತ್ತು. ಸಾಂಸ್ಕೃತಿಕ ಲೋಕದವರೇ ಇರಲಿ, ನಾಟಕ ಲೋಕದವರೇ ಇರಲಿ, ಸಂಗೀತ ಲೋಕದವರೇ ಇರಲಿ, ಚಿತ್ರಕಲೆಯವರಿರಲಿ, ಸಿನಿಮಾದವರಿರಲಿ ಎಲ್ಲರಿಗೂ ನೀನು ಆಪ್ತ. ನೀನು ಕಥೆ ಬರೆಯುವುದಿಲ್ಲ. ನಾಟಕ ಬರೆಯುವುದಿಲ್ಲ. ಸಂಗೀತ ಆಡುವುದಿಲ್ಲ. ಪಾತ್ರವೂ ಮಾಡುವುದಿಲ್ಲ. ಚಿತ್ರ ಬರೆಯುವುದಿಲ್ಲ. ಆದರೂ ಎಲ್ಲರೂ ನಿನಗೆ ಆಪ್ತರು. ಎಲ್ಲರ ಸಮಸ್ಯೆಗಳು ನಿನಗೆ ಗೊತ್ತು. ಎಲ್ಲರ ಜೊತೆ ಜೋಕು ಮಾಡುತ್ತಾ, ಅಂತಹ ಸಮಸ್ಯೆಗಳಲ್ಲಿ ಭಾಗಿ ಆಗುತ್ತಾ ಎಲ್ಲರನ್ನು ಒಟ್ಟಿಗೆ ಸೇರಿಸುತ್ತಾ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಒಂದು ವಿಚಿತ್ರ ಜೀವಂತಿಕೆಯನ್ನು ನೀನು ಕೊಟ್ಟಿದ್ದೀಯ. ಈ ಲೋಕಕ್ಕೆ ಸಂಬಂಧಪಟ್ಟ ಎಲ್ಲಾ ಚಳುವಳಿಗಳ ಮಧ್ಯೆ, ಎಲ್ಲಾ ಸಂಭ್ರಮಗಳ ಮಧ್ಯೆ, ನೀನು ಕೇಂದ್ರಬಿಂದುವಾಗಿರುತ್ತೀಯ."

"ಹದಿನೈದು ದಿನಕ್ಕೊಂದು ಸಾರಿ ಎಲ್ಲರನ್ನು ಕರೆದು, ಊಟ ಹಾಕಿಸಿ ಪಾರ್ಟಿ ಮಾಡದಿದ್ದರೆ ನಿನ್ನ ಮನಸ್ಸಿಗೆ ಸಮಾಧಾನವೇ ಇರುವುದಿಲ್ಲ. ಕಷ್ಟದಲ್ಲಿ ಮದುವೆಯಾದ ಎಲ್ಲಾ ಪರಿಚಿತ ದಂಪತಿಗಳನ್ನು ಕರೆದು, ಊಟ ಹಾಕಿ ಭಾಗಿನ ಉಡುಗೊರೆಗಳನ್ನು ಕೊಟ್ಟು, ಸಂತೋಷ ಪಡುತ್ತೀಯ. ಯಾರಿಗೆ ಒಂದು ಪ್ರಶಸ್ತಿ ಸಿಗಲಿ, ಸನ್ಮಾನವಾಗಲಿ ನಿಮ್ಮ ಮನೆಯಲ್ಲಿ ಅದಕ್ಕೊಂದು ಪಾರ್ಟಿ, ಊಟ ಆಗಲೇಬೇಕು. ಪ್ರಾಯಶಃ ನೀನು ದುಡಿದಿದ್ದೆಲ್ಲ ಇದಕ್ಕೆ ಖರ್ಚು ಮಾಡಿದ್ದೀಯ ಅನ್ನಿಸುತ್ತದೆ. ಪರರಿಗೆ ಸಂತೋಷ ಕೊಡುವ ಇಂಥ ಕಾರ್ಯಕ್ಕೆಲ್ಲಾ ನಿನ್ನ ಹೆಂಡತಿ ಲಲಿತಾ, ನಿನ್ನ ಮಕ್ಕಳು ಸ್ನೇಹಾ ಮತ್ತು ಜಯ ಸದಾ ನಿನಗೆ ಜೈ ಎಂದು ನಿನ್ನ ಜೊತೆ ಇರುತ್ತರಲ್ಲ. ಗ್ರೇಟ್. ಅಂತಹ ಮಕ್ಕಳು ಅಂಥ ಹೆಂಡತಿ ಸಿಕ್ಕಿರುವುದು ಪುಣ್ಯ. ಅವರೆಲ್ಲರಿಗೂ ನೀನು ಸಿಕ್ಕಿರುವುದು ಕೊಂಚ ಅವರ ಕಷ್ಟ ಮತ್ತು ಪುಣ್ಯ."

ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಅಥವಾ ಅವರ ಗೆಳೆಯರು ಯಾರೇ ಆಗಲಿ ಕಷ್ಟಕ್ಕೆ ಸಿಕ್ಕಿದರೆ ಅವರಿಗೆ ಎಲ್ಲ ರೀತಿಯಲ್ಲೂ ಸಹಾಯ ಮಾಡುವ ವ್ಯಕ್ತಿ ಕಪ್ಪಣ್ಣ. ಖ್ಯಾತ ರಂಗ ನಿರ್ದೇಶಕ ಬಿ.ವಿ. ಕಾರಂತರು ಭೂಪಾಲ್‌ನಲ್ಲಿ ತೊಂದರೆ ಸಿಕ್ಕಿದಾಗ, ಕಪ್ಪಣ್ಣ ನಿರ್ವಹಿಸಿದ ಕಾರ್ಯ ಬಹಳಷ್ಟು ಜನರ ಅರಿವಿಗೆ ಬಾರದಿರಬಹುದು. ಆದರೆ ಕನ್ನಡ ಸಾಂಸ್ಕೃತಿಕ ಲೋಕದ ಬೆಂಬಲ ಕಾರಂತರಿಗೆ ದೊರಕುವಂತೆ ಮಾಡಿದ್ದಲ್ಲದೇ, ಭೂಪಾಲ್‌ವರೆಗೂ ತೆರಳಿ ಅವರಿಗೆ ನೈತಿಕ ಸ್ಥೈರ್ಯ ಬರುವಂತೆ ಮಾಡಿದರು. ಹಾಗೆಯೇ ಭೂಪಾಲ್‌ನಿಂದ ಕರ್ನಾಟಕಕ್ಕೆ 2008ದಾಗ ಅವರ ರಂಗ ಬದುಕು ಮತ್ತೊಮ್ಮೆ ಗರಿಗೆದರಲು ಕಪ್ಪಣ್ಣ ಅವಿರತವಾಗಿ ಶ್ರಮಿಸಿದರು. ರಂಗಾಯಣದ ಅಸ್ತಿತ್ವದ ಹಿನ್ನೆಲೆಯಲ್ಲಿ ಕಾರಂತರನ್ನು ನಿರ್ದೇಶಕರ ಸ್ಥಾನಕ್ಕೆ ತರುವಲ್ಲಿ ಅವರು ನಡೆಸಿದ

ಪ್ರಯತ್ನಗಳು ವಿಶಿಷ್ಟವಾದವು. ಬಿ.ವಿ. ಕಾರಂತರೇ ಕಪ್ಪಣ್ಣನವರ ಎಲ್ಲ ಬೆಂಬಲವನ್ನು ಅದರ ಆತ್ಮಕಥೆಯಲ್ಲಿ ನೆನೆಯುತ್ತಾರೆ. ಕಾರಂತರಷ್ಟೇ ಅಲ್ಲ, ಯಾವುದೇ ಸಾಹಿತಿ ಕಲಾವಿದರು ಸಂಕಷ್ಟಕ್ಕೆ ಸಿಲುಕಿದಾಗ ಕಪ್ಪಣ್ಣ ತೆರೆಮರೆಯಲ್ಲೇ ಉಳಿದು ಅನೇಕ ರೀತಿಯ ಸಹಾಯ ಸಹಕಾರಗಳನ್ನು ನೀಡಿದ್ದಾರೆ.

'ಕಪ್ಪಣ್ಣ ಒಬ್ಬ ವ್ಯಕ್ತಿಯಲ್ಲ ಶಕ್ತಿ' ಎಂದು ಸಿಜಿಕೆ ಹೇಳುತ್ತಿದ್ದರು. 70ರ ದಶಕದ ರಂಗಭೂಮಿಗಳೆಯರಲ್ಲಿದ್ದ ಆರೋಗ್ಯ ಪೂರ್ಣ ಪೈಪೋಟಿಯಿಂದಾಗಿ ಬೆಂಗಳೂರು ರಂಗಭೂಮಿ ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಂಡಿತು. ಹಾಗೆಯೇ ಇಡೀ ದೇಶಕ್ಕೇ ಮಾದರಿಯಾದ ಹವ್ಯಾಸಿ ರಂಗಭೂಮಿಯನ್ನು ಸ್ಥಾಪಿಸಿತು. ಹಾಗೆಯೇ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಅಭ್ಯಾಸ ಮಾಡಲು ಬಹಳಷ್ಟು ಮಂದಿ ಹೋದರು. ಬಂದವರು ಬೆಂಗಳೂರಿನಲ್ಲೇ ತಮ್ಮ ರಂಗ ಕಾಯಕಕ್ಕೆ ಮುನ್ನುಡಿ ಬರೆದರು.

ಬಿ.ವಿ. ಕಾರಂತರಿಂದ ಮೊದಲ್ಗೊಂಡು ಅಂದಿನ ತಲೆಮಾರಿನ ಜಿ.ವಿ ಶಿವಾನಂದ್, ವಿ. ರಾಮಮೂರ್ತಿ, ಎನ್.ಎಸ್. ವೆಂಕಟರಾಂ ಸೇರಿದಂತೆ ನಂತರ ಪೀಳಿಗೆಯ ಬಿ. ಜಯಶ್ರೀ, ಪ್ರಸನ್ನ, ಶ್ರೀನಿವಾಸಪ್ರಭು, ಅಶೋಕ ಬಾದರದಿನ್ನಿ, ರಘುನಂದನ, ಜನಾರ್ದನ, ಸಿ. ಬಸವಲಿಂಗಯ್ಯ ಮುಂತಾದವರೆಲ್ಲಾ ತಮ್ಮ ರಂಗ ಕಾಯಕಕ್ಕೆ ಬೆಂಗಳೂರನ್ನೇ ಆಯ್ದುಕೊಳ್ಳುವಲ್ಲಿ ಇಲ್ಲಿದ್ದ ಹವ್ಯಾಸಿ ರಂಗಭೂಮಿಯ ಹದ ಕಾರಣ. ಇಂತಹ ವಾತಾವರಣ ಕಲ್ಪಿಸುವಲ್ಲಿ ಬಹಳಷ್ಟು ಸ್ಥಳೀಯ ಪ್ರತಿಭೆಗಳು ಬೆಂಗಳೂರಿನಲ್ಲಿದ್ದರು. ಅಂತಹವರಲ್ಲಿ ಕಪ್ಪಣ್ಣ ಕೂಡ ಒಬ್ಬರಾದರು.

ಆರ್. ನಾಗೇಶ್, ಎಲ್. ಕೃಷ್ಣಪ್ಪ, ಜೆ. ಲೋಕೇಶ್, ಮುಂತಾದ ರಂಗಸಂಘಟಕರು, ಹೆಚ್.ವಿ. ವೆಂಕಟ ಸುಬ್ಬಯ್ಯ ಸಿಜಿಕೆ, ಚಂದ್ರಕುಮಾರ್ ಸಿಂಗ್, ಡಾ. ಪರೇಶ್ ಮುಂತಾದ ತಂತ್ರಜ್ಞರು ಗಿರೀಶ್ ಕಾರ್ನಾಡ್, ಡಾ. ಚಂದ್ರಶೇಖರ್ ಕಂಬಾರ, ಟಿ.ಎನ್. ಸೀತಾರಾಂ, ಪಿ. ಲಂಕೇಶ್ ಮುಂತಾದ ನಾಟಕಕಾರರು ಬೆಂಗಳೂರಿನ 70ರ ದಶಕದ ಚಟುವಟಿಕೆಯ ಮುಂಚೂಣಿಯಲ್ಲಿದ್ದರು. ಶ್ರೀನಿವಾಸ ಜಿ. ಕಪ್ಪಣ್ಣ ನ್ಯಾಷನಲ್ ಕಾಲೇಜು ಹಿಸ್ಟ್ರಿಯಾನಿಕ್ ಕ್ಲಬ್, ಬಿ.ಎಲ್.ಟಿ, ನಾಟ್ಯ ಸಂಘ ಥಿಯೇಟರ್ ಸೆಂಟರ್, ನಟರಂಗ ಹೀಗೆ ತಮ್ಮ ರಂಗಾನುಭವವನ್ನು ವಿಸ್ತರಿಸುತ್ತಾ ಬಂದರು. ಒಬ್ಬ ತಂತ್ರಜ್ಞನಷ್ಟೇ ಆದರೆ ಸಾಲದು, ರಂಗ ಚಳವಳಿಯನ್ನು ಮುನ್ನಡೆಸುವ, ಸಂಘಟಿಸುವ ನೇತಾರ ಬೇಕು. ರಂಗ ಸ್ಪಂದನೆಯನ್ನು ತಮ್ಮ ಬದುಕಿನ ಸಂವೇದನೆ ಮಾಡಿಕೊಳ್ಳುವ ಮನಸ್ಥಿತಿ ಬೇಕು. ರಂಗಭೂಮಿಯನ್ನೇ ಮೊದಲು ಆದ್ಯತೆಯನ್ನಾಗಿಸಿಕೊಂಡು ಒಂದು ಸಾಂಸ್ಕೃತಿಕ ಸನ್ನಿವೇಶದ ಸಾಕ್ಷಿ ಪ್ರಜ್ಞೆಯಾಗಬೇಕು. ಇಂತಹ ಗುಣಗಳನ್ನು ಪಡೆದುಕೊಂಡು, ಮೈಗೂಡಿಸಿಕೊಂಡು ಬೆಳೆದ ಕಪ್ಪಣ್ಣನವರಲ್ಲಿ ಅಪಾರ ನೆನಪು ಹುದುಗಿದೆ. ಅನುಭವ ಹೆಪ್ಪುಗಟ್ಟಿದೆ. ಅದರ ರಂಗಬದ್ಧತೆಯ ಪರಿಣಾಮವೇ ಅವರು ಇಂದು ತಮ್ಮ

ರಂಗಬದುಕಿನ ಸುವರ್ಣ ಕಾಲದಲ್ಲಿದ್ದಾರೆ. ಕಳೆದ 5 ದಶಕದಲ್ಲಿ ಕಪ್ಪಣ್ಣನವರು ಪ್ರತಿದಿನ, ಪ್ರತಿಕ್ಷಣಗಳನ್ನು ರಂಗ ಜೀವಿಯಾಗಿ ಜೀವಿಸಿದ್ದಾರೆ. ಇಂದಿಗೂ ಅವರಲ್ಲಿ ರಂಗಭೂಮಿಯ ಬಗ್ಗೆ ಅದಮ್ಯ ಪ್ರೀತಿ ಹಸಿರಾಗಿದೆ.

ರಂಗಭೂಮಿ, ಸುಗಮ ಸಂಗೀತ, ಜಾನಪದ, ಚಿತ್ರಕಲೆ, ಕಿರುತೆರೆಯ ಜೊತೆಗೆ ನಾಡಿನ ಪ್ರತಿಷ್ಠಿತ ಉತ್ಸವಗಳಲ್ಲಿ ಅವರು ತೋರಿದ ಕಲಾತ್ಮಕ ಅಭಿವ್ಯಕ್ತಿ, ಅವರನ್ನು ನಾಡಿನ ಶ್ರೇಷ್ಠ ಕಲಾವಿದನನ್ನಾಗಿ ರೂಪಿಸಿದೆ.

ದಣಿವಯರಿದ ದುಡಿಮೆ ಕಪ್ಪಣ್ಣ ಅವರದು ಎಂದು ಪಿ. ಲಂಕೇಶ್ ಉದ್ಗರಿಸಿದ್ದಾರೆ. ಹಾಗೆಯೇ ಸಂಘಟನಾ ಕಾರ್ಯದಲ್ಲಿ ವಿಶೇಷ ಪರಿಣಿತಿ ಪ್ರತಿಭೆ, ಅಭಿರುಚಿಯನ್ನು, ದಕ್ಷತೆಯನ್ನು ತೋರಿರುವ ಕಪ್ಪಣ್ಣ ಸ್ನೇಹಜೀವಿ. ತಮ್ಮ ಗೆಳೆಯರ ಯಶಸ್ಸನ್ನು ತಾವು ಸಂಭ್ರಮಿಸುವ ಹೃದಯವಂತ. ಯಾವುದೇ ಕ್ಷೇತ್ರದ ಕಲಾವಿದನಿಗೆ ಯಾವುದೇ ಪ್ರಶಸ್ತಿ ಪುರಸ್ಕಾರ ಬಂತೆಂದರೆ ಒಂದಷ್ಟು ಗೆಳೆಯರನ್ನು ಕೂಡಿ ಹಾಕಿ, ತಮಗೇ ಪ್ರಶಸ್ತಿ ಬಂದಿದೆಯೇನೋ ಎಂಬಂತೆ ಅಭಿನಂದಿಸುವ ಅಪರೂಪದ ವ್ಯಕ್ತಿತ್ವ ಅವರದು.

ಯಾರಾದರು ಸಾಹಿತ್ಯವಲಯದ ಅಥವಾ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾವಂತರು ಅಗಲಿದರೆ, ಅವರಿಗಾಗಿ ಒಂದು ಸಂತಾಪ ಸಭೆಯನ್ನು ಏರ್ಪಡಿಸುವುದನ್ನು ಅತಿ ಶಿಸ್ತಿನಿಂದ, ಗಂಭೀರವಾಗಿ ಮಾಡುವ ಮಾನವೀಯ ವ್ಯಕ್ತಿ.

ಇನ್ನು ಯುವ ಪ್ರೇಮಿಗಳನ್ನು ಒಂದು ಗೂಡಿಸಿ, ಅವರ ಸಂಕಷ್ಟ, ಸಂಕೋಚಗಳನ್ನು ಬಗೆಹರಿಸಿ ವಿವಾಹದ ಪೌರೋಹಿತ್ಯ ವಹಿಸುವ ವಿಶಾಲ ಹೃದಯಿ.

'ನಟರಂಗ'ದದ ಜೀವಾಳವೇ ಆಗಿರುವ ಕಪ್ಪಣ್ಣ, ಈ ರಂಗತಂಡದ ಪುನರುತ್ಥಾನಕ್ಕೆ ಅನೇಕ ಬಾರಿ ಶ್ರಮಿಸಿದರು. ಯುವ ಪ್ರತಿಭೆಗಳನ್ನು, ನಿರ್ದೇಶಕರನ್ನು ಪ್ರೋತ್ಸಾಹಿಸುತ್ತಾ ದೇಶದ ಯಾವುದೇ ಮೂಲೆಯಲ್ಲಿ ಒಂದು ಕನ್ನಡದ ಕಾರ್ಯಕ್ರಮವಾಗ ಬೇಕಾದರೆ ತಮ್ಮ ಸಂಪರ್ಕ – ಸ್ನೇಹ ಸೇತುವೆಯಿಂದ ಕುಳಿತಲ್ಲಿಂದಲೇ ಯಶಸ್ವಿಗೊಳಿಸುವ ಕ್ರಿಯಾಶೀಲ.

ಕನ್ನಡ ರಂಗಭೂಮಿಯನ್ನು ರಾಷ್ಟ್ರದ ಉದ್ದಗಲಕ್ಕೆ ವಿಸ್ತರಿಸುವ 'ಭಾರತ ರಂಗ ಸಂಚಾರ'ವೆಂಬ ಯೋಜನೆಯನ್ನು ಸಾಣೇಹಳ್ಳಿ 'ಶಿವ ಸಂಚಾರ' ರೆಪರ್ಟರಿಗೆ ಕೊಟ್ಟು, ಅದರ ಯಶಸ್ಸಿಗೆ ಕಾರಣರಾದ ಕಪ್ಪಣ್ಣನ ಬಗ್ಗೆ ಸಾಣೇ ಹಳ್ಳಿ ಶ್ರೀ ಮಠದ ಶ್ರೀ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಅಪಾರ ಅಭಿಮಾನ. ನಾಲ್ಕು ಕನ್ನಡ ನಾಟಕಗಳ ಹಿಂದಿ ಅನುದಾನ ಮಾಡಿಸಿ, ರಾಷ್ಟ್ರೀಯ ಖ್ಯಾತಿಯ ನಿರ್ದೇಶಕದ ಮೂಲಕ ನಿರ್ದೇಶಿಸಿ, 'ಶಿವ ಸಂಚಾರ'ವನ್ನು, 'ಭಾರತ ಸಂಚಾರ'ಕ್ಕೆ ಅಣಿಗೊಳಿಸಿದ ಕಪ್ಪಣ್ಣ ಅವರ ಸಾಧನೆ ದಾಖಲಾರ್ಹ.

ರಾಷ್ಟ್ರೀಯ ನಾಟಕ, ದೋಸಿ ನಾಟಕೋತ್ಸವ, ವೃತ್ತಿ ನಾಟಕೋತ್ಸವ, ಹವ್ಯಾಸಿ ನಾಟಕೋತ್ಸವ, ಯುವ ನಿರ್ದೇಶಕರ ನಾಟಕೋತ್ಸವ, ಹೊಸ ನಾಟಕಗಳ ನಾಟಕೋತ್ಸವ, ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಕಾಲೇಜು ನಾಟಕೋತ್ಸವ, ಸಂಗೀತೋತ್ಸವ, ಸಾಹಿತ್ಯೋತ್ಸವಗಳು, ಜಾನಪದ ಪ್ರದರ್ಶಕ ಕಲೆ, ಗಾಯನ ಕಾರ್ಯಕ್ರಮಗಳು, ನೃತ್ಯೋತ್ಸವಗಳು, ಕಲಾಶಿಬಿರಗಳು ಹೀಗೆ ಶ್ರೀನಿವಾಸ ಜಿ ಕಪ್ಪಣ್ಣ ಅವರ ಬದುಕು ಉತ್ಸವಗಳ ಸರಮಾಲೆ. ಸಾಂಸ್ಕೃತಿಕ ಜಗತ್ತು ಮಾನವೀಯವಾಗುವಂತೆ ಇವರು ಸುನಾಮಿ ಸಂತ್ರಸ್ತರ ಸಾಂತ್ವನಕ್ಕಾಗಿ ಸಂಘಟಿಸಿದ 'ಮತ್ತೆ ಬಾರದಿರು ಓ ಸುನಾಮಿ' ಯಂತಹ ಕಾರ್ಯಕ್ರಮವಾಗಲಿ, ನಗರದ ಬದುಕು ಹಸನಾಗಲಿ, ಸುಂದರ ಪರಿಸರ ನಮ್ಮದಾಗಲಿ ಎಂದು ಸಂಘಟಿಸಿದ 'ಸೌಜನ್ಯ ಮಾಸ' ಕಾರ್ಯಕ್ರಮವಾಗಲಿ, ಸಾಂಸ್ಕೃತಿಕ ಜಗತ್ತಿನಲ್ಲೇ ಇತಿಹಾಸ ಸೃಷ್ಟಿಸಿದ 'ಜಾನಪದ ಜಾತ್ರೆ'ಯಾಗಲಿ, 'ನಿತ್ಯೋತ್ಸವ'ವಾದ ಸುಗಮ ಸಂಗೀತವಾಗಲಿ, ಸುವರ್ಣ ಕರ್ನಾಟಕ ಸಾಂಸ್ಕೃತಿಕ ಉತ್ಸವವಾಗಲಿ, ಸಾರ್ಕ್, ರಷ್ಯನ್ ಉತ್ಸವಗಳಾಗಲಿ, ವಿಶ್ವ ಕನ್ನಡ ಸಮ್ಮೇಳನಗಳಾಗಲಿ.... ರಾಷ್ಟ್ರೀಯ ಕ್ರೀಡಾ ಮೇಳದ ಸಾಂಸ್ಕೃತಿಕ ಕಾರ್ಯಕ್ರಮಗಳಾಗಲಿ... ಹೀಗೆ ಕಪ್ಪಣ್ಣನವರು ತಮ್ಮನ್ನು ಅರ್ಪಿಸಿಕೊಂಡು, ಯಶಸ್ವಿಗೊಳಿಸಿದ ಸಾರ್ಥಕ ಕಾರ್ಯಕ್ರಮಗಳು ಕಣ್ಣ ಮುಂದೆ ಬರುತ್ತವೆ. ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಈ ಕಿರು ಹೊತ್ತಿಗೆ, ಕಪ್ಪಣ್ಣ ಅವರ ಜೀವನ ಚಿತ್ರವನ್ನು ಚಿತ್ರಿಸುವಾಗ ಅವರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಅವರ ಆಪ್ತವಲಯ, ಹಿರಿಯ ಸಾಹಿತಿ, ಕಲಾವಿದರು ಆಡಿರುವ ಮಾತುಗಳನ್ನು ಅಲ್ಲಲ್ಲಿ ಬಳಸಿಕೊಳ್ಳಲಗಿದೆ. ಉದ್ದೇಶವಿಷ್ಟೇ 5 ದಶಕಗಳ ಸಮೃದ್ಧ ಸಾಂಸ್ಕೃತಿಕ ಸಾರ್ಥಕ ಬದುಕನ್ನು ಬಾಳುತ್ತಾ, ತಾನೂ ಬೆಳೆದೂ ಸಾಂಸ್ಕೃತಿಕಯನ್ನು ಬೆಳೆಸಿದ ವ್ಯಕ್ತಿಯ ವ್ಯಕ್ತಿತ್ವದ ನಾನು ಮುಖಗಳನ್ನು, ಸಾಧನೆಗಳನ್ನು ಸಂಕ್ಷಿಪ್ತವಾಗಿ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಇಂತಹ ಒಂದು ಕಿರುಹೊತ್ತಿಗೆಯ ಬರಹಕ್ಕೆ ಅವಕಾಶ ಕಲ್ಪಿಸಿದ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಶೇಖ ಮಾಸ್ತರ್ ಅವರಿಗೆ, ನಾಟಕ ಅಕಾಡೆಮಿ ಸದಸ್ಯರಿಗೆ, ಪ್ರಕಟಣಾ ಸಮಿತಿಗೆ, ಮುಖ್ಯವಾಗಿ ಶ್ರೀನಿವಾಸ್ ಜಿ. ಕಪ್ಪಣ್ಣ ಹಾಗೂ ಅವರ ಕುಟುಂಬ ವರ್ಗದವರಿಗೆ ತುಂಬು ಹೃದಯ ಧನ್ಯವಾದಗಳು.

ಶ್ರೀನಿವಾಸ್ ಜಿ. ಕಪ್ಪಣ್ಣ ಅವರಿಗೆ 60 ವರ್ಷ ತುಂಬಿದ ಸಂದರ್ಭದಲ್ಲಿ ಸುಂದರ ಪ್ರಕಾಶನ ಹೊರ ತಂದ 'ಕಪ್ಪಣ್ಣ ರಂಗಾವತರಣ' ಪುಸ್ತಕಕ್ಕೆ ಋಣಿಯಾಗಿದ್ದೇನೆ.

## ಅನುಬಂಧ

# ಶ್ರೀನಿವಾಸ ಜಿ ಕಪ್ಪಣ್ಣ

**ತಂದೆ** : ಶ್ರೀ ಗಿರಿಯಪ್ಪ

**ತಾಯಿ** : ಶ್ರೀಮತಿ ಜಯಮ್ಮ

**ಜನನ** : 1948 ಫೆಬ್ರವರಿ 13

ಶ್ರೀನಿವಾಸ್ ಜಿ. ಕಪ್ಪಣ್ಣ ಅವರ ರಂಗ ಕಾಯಕ ಬೆಂಗಳೂರಿನ ವಿಜಯ ಪ್ರೌಢಶಾಲೆಯಲ್ಲಿ ಪ್ರಾರಂಭಗೊಂಡು ನ್ಯಾಷನಲ್ ಕಾಲೇಜು ಬಸವನಗುಡಿಯಲ್ಲಿ ಮುಂದುವರಿಯಿತು. ಹೀಗೆ ಪ್ರಾರಂಭಗೊಂಡ ಇವರ ರಂಗಬದುಕು ಮುಂದೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಪ್ರತಿಷ್ಠಿತ ದೆಹಲಿಯ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರಕ್ಕೂ ಪಾತ್ರರಾದರು. ಭಾರತದ ಅಂದಿನ ಗೌರವಾನಿತ್ವ ರಾಷ್ಟ್ರಪತಿ ಡಾ.ಎ.ಪಿ.ಜೆ ಅಬ್ದುಲ್‌ಕಲಾಂ ಅವರು ಪ್ರಶಸ್ತಿ ಪ್ರದಾನ ಮಾಡಿದರು.

- 2000ಕ್ಕೂ ಹೆಚ್ಚು ರಂಗ ಪ್ರಯೋಗಗಳಿಗೆ ಬೆಳಕು ವಿನ್ಯಾಸ ಮಾಡಿದ ಹೆಗ್ಗಳಿಕೆ ಇವರದು. ಪ್ರೊ॥ ಬಿ. ಚಂದ್ರಶೇಖರ, ಬಿ.ವಿ ಕಾರಂತ, ಎಮ್.ಎಸ್. ಸತ್ಯು, ಗಿರೀಶ್‌ಕಾರ್ನಾಡ್, ಡಾ॥ ಚಂದ್ರಶೇಖರ ಕಂಬಾರ. ಸಿ.ಆರ್. ಸಿಂಹ, ಬಿ. ಜಯಶ್ರೀ, ಆರ್. ನಾಗೇಶ್, ಮತ್ತಿತರ ಪ್ರಖ್ಯಾತ ರಂಗ ನಿರ್ದೇಶಕರು ಹಾಗೂ ನಾಟಕಕಾರರೊಂದಿಗೆ ಅದರ ಪ್ರಯೋಗಗಳಲ್ಲಿ ಕೆಲಸ ಮಾಡಿದ್ದಾರೆ.
- ಇವರ ಪರಿಕಲ್ಪನೆ ಹಾಗೂ ನಿರ್ದೇಶನದ ಸುಗಮ ಸಂಗೀತ ಕಾರ್ಯಕ್ರಮ ಬೆಂಗಳೂರು ದೂರದರ್ಶನ 'ಚಂದನ'ದಲ್ಲಿ 2000 – 2003ರವರೆಗೆ – 3 ವರ್ಷಗಳ ಕಾಲ ಸಾಹಿತ್ಯ ಪ್ರಿಯರ ಹಾಗೂ ಸಂಗೀತ ಪ್ರಿಯರ ಮೆಚ್ಚುಗೆಗೆ ಪಾತ್ರವಾಯಿತು.
- ಬೆಂಗಳೂರು ದೂರದರ್ಶನಕ್ಕೆ 'ಶೃತಿ' ಎಂಬ ಧಾರಾವಾಹಿಯನ್ನು ನಿರ್ದೇಶಿಸಿದ್ದಾರೆ.
- ಕನ್ನಡದ ಪ್ರಖ್ಯಾತ ಧಾರಾವಾಹಿಗಳಾದ 'ಮಾಲ್ಗುಡಿಡೇಸ್', 'ಮುಕ್ತ – ಮುಕ್ತ'ಗಳಲ್ಲಿ ಅಭಿನಯಿಸಿದ್ದಾರೆ. ಧಾರಾವಾಹಿಗಳ 'ಸಂವಾದ'

ಕಾರ್ಯಕ್ರಮಗಳನ್ನು ಖ್ಯಾತ ಧಾರಾವಾಹಿ ನಿರ್ದೇಶಕ ಟಿ.ಎನ್. ಸೀತಾರಾಂ ಅವರಿಗಾಗಿ ಭಾರತದ ವಿವಿದೆಡೆ ಹಾಗೂ ಅಮೇರಿಕಾಗಳಲ್ಲಿ ನಿರೂಪಿಸಿದ ಪ್ರಖ್ಯಾತಿ ಇವರದು.

1982ರಿಂದ 1998ರವರೆಗೆ ಭಾರತದ ಗಣರಾಜ್ಯೋತ್ಸವ ದಿನದ ಪೆರೋಡ್‌ಗಾಗಿ ಸಾಂಸ್ಕೃತಿಕ ತಂಡಗಳನ್ನು ಸಂಯೋಜಿಸಿ, ನೇತೃತ್ವವಹಿಸಿದರು. 1984 ಏಷ್ಯಾಡ್, ರಷ್ಯಾ ಉತ್ಸವ, ಸಾರ್ಕ್ ಉತ್ಸವ, ಹಂಪಿ ಉತ್ಸವ, ರಾಜ್ಯೋತ್ಸವ ಕಾರ್ಯಕ್ರಮಗಳು ಮುಂತಾದ ಪ್ರತಿಷ್ಠಿತ ಉತ್ಸವಗಳ ಕಲಾತ್ಮಕ ನಿರ್ದೇಶಕರು, ಸಾಂಸ್ಕೃತಿಕ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

1970ರಿಂದ 2010ರವರೆಗೆ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭಗಳನ್ನು ಇವರು ವಿನ್ಯಾಸಗೊಳಿಸಿ ಸಂಘಟಿಸಿದರು.

1997ರ 4ನೇ ರಾಷ್ಟ್ರೀಯ ಕ್ರೀಡಾಮೇಳದ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯ ಸಂಯೋಜಕರು. 5000ಕ್ಕೂ ಹೆಚ್ಚು ಜಾನಪದ ಕಲಾವಿದರನ್ನು ಹಾಗೆಯೇ 30ಕ್ಕೂ ಹೆಚ್ಚು ಜಾನಪದ ಕಲಾಪ್ರಕಾರಗಳನ್ನು ಒಳಗೊಂಡಂತೆ. ಈ ಕಾರ್ಯಕ್ರಮಗಳನ್ನು ಸಂಯೋಜಿಸಿದರು.

ಸುವರ್ಣ ಕರ್ನಾಟಕ ಸಾಂಸ್ಕೃತಿಕ ಕಾರ್ಯಕ್ರಮದ ಕಲಾತ್ಮಕ ನಿರ್ದೇಶಕರು ವಿವಿಧ ಜಾನಪದ ಹಾಗೂ ಶಾಸ್ತ್ರೀಯ 5000ಕ್ಕೂ ಹೆಚ್ಚು ಕಲಾವಿದರನ್ನು ಒಟ್ಟಾಗಿಸಿ ವಿನ್ಯಾಸಗೊಳಿಸಿ, ಈ ಕಾರ್ಯಕ್ರಮವನ್ನು ಸಂಘಟಿಸಿದರು.

## 'ಜಾನಪದ ಜಾತ್ರೆ' ಮೂಲಕ

ಕರ್ನಾಟಕದ ಜಾನಪದ ಕಲಾ ಪರಂಪರೆಯನ್ನು ಬೃಹತ್ ವೇದಿಕೆಯಲ್ಲಿ ಬೆಂಗಳೂರು ಸೇರಿದಂತೆ ಕರ್ನಾಟಕದಾದ್ಯಂತ ಪ್ರದರ್ಶಿಸಿದ ಕೀರ್ತಿ ಕಪ್ಪಣ್ಣ ಅವರದು. ಎರಡು ವರ್ಷಗಳ ಕಾಲ ನಿರಂತರವಾಗಿ 69 ಪ್ರದರ್ಶನಗಳನ್ನು ವಿನ್ಯಾಸ ಮಾಡಿದ ಕೀರ್ತಿ ಇವರದು. 250 ಹೆಚ್ಚು ಜಾನಪದ ಕಲಾತಂಡಗಳು, 58ಕ್ಕೂ ಹೆಚ್ಚು ಕಲಾವಿದರು 83ಕ್ಕೂ ಹೆಚ್ಚು ಜಾನಪದ ಕಲಾತಂಡಗಳು 'ಜಾನಪದ ಜಾತ್ರೆ'ಯಲ್ಲಿ ಪಾಲ್ಗೊಂಡ ಹೆಗ್ಗಳಿಕೆಗೆ ಪಾತ್ರವಾದವು. ಸುಮಾರು 7 ಲಕ್ಷ ಪ್ರೇಕ್ಷಕರು ಈ 'ಜಾನಪದ ಜಾತ್ರೆ'ಯನ್ನು ಕಣ್ತುಂಬಿಕೊಂಡಿದ್ದಾರೆ ಎನ್ನುವುದು ಒಂದು ದಾಖಲೆ.

1985ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಶಂಕರನಾಗ್ ಅವರೊಂದಿಗೆ ಸಂಚಾಲಕರಾಗಿ ಹಾಗೂ 2010ರಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕಲಾತ್ಮಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

ಸಾಣೆಹಳ್ಳಿ ಶಿವಸಂಚಾರ ರೆಪರ್ಟರಿಗಾಗಿ 'ಭಾರತ ರಂಗ ಸಂಚಾರ'ವೆಂಬ ವಿಶೇಷ ರಂಗನಾಟಕಗಳ ಪಯಣವನ್ನು ವಿನ್ಯಾಸಗೊಳಿಸಿ, ಸಂಯೋಜಿನಿಸಿದ ಕೀರ್ತಿ ಇವರದು. ದೇಶದ 47 ಪ್ರತಿಷ್ಠಿತ ಕೇಂದ್ರಗಳಲ್ಲಿ 63 ರಂಗ ಪ್ರದರ್ಶನಗಳನ್ನು ಆಯೋಜಿಸಿದರು. ರಾಜ್ಯ ಸರ್ಕಾರಕ್ಕಾಗಿ ಮುಂಬೈ, ಒಲ್ಯಾ, ಒರಿಸ್ಸಾ, ಕೊಲ್ಕತ್ತಾ, ಚಂದೀಗಢ, ನವದೆಹಲಿ, ಬರೋಡ, ಕೊಚ್ಚಿಗಳಲ್ಲಿ ಕರ್ನಾಟಕ ಉತ್ಸವವನ್ನು ಸಂಯೋಜಿಸಿದರು.

ಶ್ರೀಲಂಕಾ. ಬಾಂಗ್ಲಾದೇಶ, ಇಟಲಿ, ಜಪಾನ್, ದಕ್ಷಿಣ ಕೊರಿಯಣ ಫಿಲಿಫೈನ್ಸ್, ಸಿಂಗಪುರ, ಜರ್ಮನಿ, ಪ್ಯಾರಿಸ್, (ಪ್ರಾನ್ಸ್) ಅಮೇರಿಕಾ, ಬೆಲರಸ್. ಟರ್ಕಿ, ಸಿರಿಯಾ, ಚೈನ ಮುಂತಾದ ದೇಶಗಳಿಗೆ ಕರ್ನಾಟಕ ಸಾಂಸ್ಕೃತಿಕ ತಂಡಗಳ ಜೊತೆಗೆ ಕಲಾತ್ಮಕ ನಿರ್ದೇಶಕರಾಗಿ, ಸಂಯೋಜಕರಾಗಿ ಭೇಟಿ ನೀಡಿ, ಕನ್ನಡ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪಸರಿಸುವಂತೆ ಮಾಡಿದ್ದಾರೆ. ಅಕ್ಕ – (AKKA) ಅಂತರಾಷ್ಟ್ರೀಯ ಸಾಂಸ್ಕೃತಿಕ ಕನ್ನಡ ಮೇಳ 2008, 2010, 2012, 2014ಗಳಲ್ಲಿ ಕಲಾತ್ಮಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಅಂತಾರಾಷ್ಟ್ರೀಯ ದೇಸೀ ಸಂಗೀತೋತ್ಸವ ಹಾಗೂ ಸೂರಬ್‌ಕುಂಚ್ ಅಂತಾಷ್ಟ್ರೀಯ ಜಾನಪದೋತ್ಸವಗಳಿಗೂ ಇವರು ಕಾರ್ಯಕ್ರಮ ವಿನ್ಯಾಸಕಾರರು, ಸಂಯೋಜಕರು ಹಾಗೂ ಸಂಘಟಕರಾಗಿ ಭಾಗವಹಿಸಿದ್ದಾರೆ.

**ಪ್ರಶಸ್ತಿ ಪುರಸ್ಕಾರಗಳು**

ಶ್ರೀರಂಗ ಪ್ರತಿಷ್ಠಾನ – ದುಬೈ – ಅಂತರಾಷ್ಟ್ರೀಯ ಪ್ರಶಸ್ತಿ
ಸಂಗೀತ ನಾಟಕ ಪ್ರಶಸ್ತಿ – ನವದೆಹಲಿ
ಸಾಂಸ್ಕೃತಿಕ ರಾಯಭಾರಿ – ಮುಂಬೈ
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ.
ಕೆ.ವಿ ಶಂಕರೇಗೌಡ ಪ್ರತಿಷ್ಠಾನ ಪ್ರಶಸ್ತಿ – ಮಂಡ್ಯ
77 ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ – ಗದಗ – ಗೌರವ ಸನ್ಮಾನ.
ರಂಗಕಲಾರತ್ನ – ರಂಗಭೂಮಿ – ಉಡುಪಿ
ಅಲ್ಲದೆ ಅನೇಕ ಸಂಘ ಸಂಸ್ಥೆಗಳ ಗೌರವ ಪುರಸ್ಕಾರಗಳು.

■

# ಚಿತ್ರ ಸಂಪುಟ




ಕಪ್ಪಣ್ಣ 50, ಅಭಿನಂದನಾ ಕಾರ್ಯಕ್ರಮದಲ್ಲಿ ತಾಯಿ – ಮಡದಿ ಲಲಿತಾ ಶ್ರೀನಿವಾಸ್, ಡಾ॥ ಹೆಚ್. ನರಸಿಂಹಯ್ಯ, ಐ.ಎಂ ವಿಠ್ಠಲಮೂರ್ತಿ ಅವರೊಂದಿಗೆ




ಆರವತ್ತರ ಸಂಭ್ರಮದಲ್ಲಿ ಶ್ರೀನಿವಾಸ ಜಿ ಕಪ್ಪಣ್ಣ



ಕಾಕನಕೋಟೆ ನಾಟಕದ ಒಂದು ದೃಶ್ಯ.



ಹಂಪೆ ಉತ್ಸವದಲ್ಲಿ ಬಂಡೆಗಳಲ್ಲಿ ವರ್ಣ ವೈಭವ




ಮತ್ತೆ ಬಾರದಿರು ಓ.... ಸುನಾಮಿ ಸಾಹಿತಿ ಕಲಾವಿದರ ಕಾರ್ಯಕ್ರಮದಲ್ಲಿ ಪಂಡಿತ್ ಡಾ॥
ರಾಜೀವ್ ತಾರನಾಥ್ ಅವರಿಂದ ಸರೋದ್‌ವಾದನ



ಜಾನಪದ ಜಾತ್ರೆ ಕಾರ್ಯದಲ್ಲಿ




ಬೆಳಗಾವಿ ವಿಶ್ವ ಕನ್ನಡ ಸಮ್ಮೇಳನ ವೇದಿಕೆಯಲ್ಲಿ



ಸುವರ್ಣ ಕರ್ನಾಟಕ – ಜಾನಪದ ಜಾತ್ರೆ ಕ್ರಿಯಾ ತಂಡದೊಂದಿಗೆ



ಗುರು ಡಾ|| ಹೆಚ್.ಎನ್ ನರಸಿಂಹಯ್ಯ ಅವರೊಂದಿಗೆ



ರಂಗಭೀಷ್ಮ ಬಿ.ವಿ. ಕಾರಂತ, ಐ.ಎ.ಎಸ್. ಅಧಿಕಾರಿ ಐ.ಎಂ ವಿಠ್ಠಲ ಮೂರ್ತಿ ಅವರೊಂದಿಗೆ



ಡಾ॥ ಸಿದ್ದಲಿಂಗಯ್ಯ, ಡಿ.ಆರ್ ನಾಗರಾಜ್, ಟಿ.ಎಂ ಸಿದ್ದರಾಮು, ಪಿ. ಲಂಕೇಶ್.
ಯು. ಆರ್. ಅನಂತಮೂರ್ತಿ, ದೇ.ಜ. ಗೌ ಹಾಗೂ ಶುದ್ರ ಶ್ರೀನಿವಾಸ್
ಜೊತೆಗೆ ಕಪ್ಪಣ್ಣ ಒಂದು ಅಪರೂಪದ ಚಿತ್ರ



ಕಾರ್ಯಕ್ರಮರೊಂದರಲ್ಲಿ ಗಿರೀಶ್ ಕಾರ್ನಾಡ್,
ಡಾ॥ ಯು.ಆರ್. ಅನಂತಮೂರ್ತಿರವರೊಂದಿಗೆ



ಪದ್ಮಶ್ರೀ ಚಿಂದೋಡಿ ಲೀಲಾ ಅವರೊಂದಿಗೆ ಸಮಾಲೋಚನೆ




ರಂಗ ಗೆಳೆಯ ಸಿ.ಜಿ ಕೃಷ್ಣಸ್ವಾಮಿ (ಸಿ.ಜಿ.ಕೆ) ಅವರೊಂದಿಗೆ



ಖ್ಯಾತ ನಟ ಲೋಕೇಶ್ ಅವರೊಂದಿಗೆ




ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡ್ ಅವರೊಂದಿಗೆ



ಅಪ್ತ ಗೆಳೆಯ ಖ್ಯಾತ ಗಾಯಕ ಸಿ. ಅಶ್ವತ್ಥ್‌ರವರೊಂದಿಗೆ



ಹಿರಿಯ ಐ.ಎ.ಎಸ್ ಅಧಿಕಾರಿ ಐ.ಎಂ ವಿಠ್ಠಲಮೂರ್ತಿ ಅವರೊಂದಿಗೆ



ಕವಿ ಡಾ|| ಸಿದ್ದಲಿಂಗಯ್ಯ ಗಾಯಕ, ಜನ್ನಿ (ಜನಾರ್ಧನ) ಅವರೊಂದಿಗೆ




ರಾಷ್ಟ್ರಕವಿ ಡಾ|| ಜಿ.ಎಸ್ ಶಿವರುದ್ರಪ್ಪ ಅವರಿಂದ ಗೌರವ ಸ್ವೀಕರ



ಖ್ಯಾತ ರಂಗ ನಟಿ, ಗಾಯಕಿ ಡಾ|| ಬಿ. ಜಯಶ್ರೀ, ಆನಂದರಾಜು, ಪದ್ಮಶ್ರೀ ಅವರೊಂದಿಗೆ



ಪ್ರೊ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಅಧ್ಯಕ್ಷೆ
ಗಂಗಮ್ಮ ಕೇಶವಮೂರ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
ಪುರಸ್ಕೃತ ಲಕ್ಷಣದಾಸ್ ಹಾಗೂ ಕೆ. ರೇವಣ್ಣ ಅವರೊಂದಿಗೆ



ಮೇರು ನಟ ಡಾ॥ ರಾಜ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಗೆಳೆಯರೊಂದಿಗೆ



ಡಾ॥ ರಾಜ್‌ಕುಮಾರ್ ಅವರೊಂದಿಗೆ ಒಂದು ಸರಸ ಸಂಭಾಷಣೆ



ಸಾಂಸ್ಕೃತಿಕ ಚಿಂತಕ ಸಚಿವ ಎಂ.ಪಿ. ಪ್ರಕಾಶ್
ಅವರೊಂದಿಗೆ ಸಮಾಲೋಚನೆ.



ರಂಗ ಗೆಳೆಯ ಸತೀಶ್ ಕುಲಕರ್ಣಿ ಹಾಗೂ ಹಿರಿಯ ರಾಜಕಾರಣಿ
ಸಿ.ಎಂ.ಉದಾಸಿ ಅವರೊಂದಿಗೆ



ರಾಷ್ಟ್ರಕವಿ ಡಾ॥ ಜಿ.ಎಸ್ ಶಿವರುದ್ರಪ್ಪ, ವೈ.ಕೆ ಮುದ್ದುಕೃಷ್ಣ, ಟಿ.ಎಸ್ ದಕ್ಷಿಣಮೂರ್ತಿ,
ಕಿಕ್ಕೇರಿ ಕೃಷ್ಣಮೂರ್ತಿ ಅವರೊಂದಿಗೆ



ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಸಿ.ಆರ್. ಸಿಂಹ ಹಾಗೂ ಕಪ್ಪಣ್ಣ
ಅವರಿಗೆ ಅಭಿನಂದನೆ ಕಾರ್ಯಕ್ರಮ. ಬಿ.ಆರ್ ಶಂಕರ್, ನಾಗರಾಜ ಮೂರ್ತಿ,
ಸಿ.ಜಿ. ಕೃಷ್ಣಮೂರ್ತಿ, ಪ್ರತಿಭಾನಂದ ಕುಮಾರ್



ಖ್ಯಾತ ಜಾನಪದ ತಜ್ಞ ಡಾ॥ ಎಚ್.ಎಲ್. ನಾಗೇಗೌಡ ಹಾಗೂ ಜಾನಪದ ಕಲಾವಿದರೊಂದಿಗೆ




ಶ್ರೀ.ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿ, ಶ್ರೀ. ಎಂ.ಪಿ ಪ್ರಕಾಶ್,
ಶ್ರೀ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ




ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಸಚಿವ ಡಾ|| ಜೀವರಾಜ ಆಳ್ವ
ಖ್ಯಾತ ನೃತ ಗುರು ಮಾಯಾರಾವ್ ಅವರೊಂದಿಗೆ



ಮುಖ್ಯಮಂತ್ರಿ ಎಸ್.ಎಂ ಕೃಷ್ಣ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ



ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರಿಗೆ ಗೌರವ ಸಮರ್ಪಣೆ



ರಾಷ್ಟ್ರಪತಿ ವೆಂಕಟರಾಮನ್ ಅವರಿಗೆ ಗೌರವ ಸಮರ್ಪಣೆ



ರಾಷ್ಟ್ರಪತಿ ಜೈಲ್ ಸಿಂಗ್ ಅವರಿಗೆ ಗೌರವ ಸಮರ್ಪಣೆ



ಉಪರಾಷ್ಟ್ರಪತಿ ಬಿ.ಡಿ. ಜತ್ತಿ ಅವರಿಗೆ ವಿವರಣೆ



ರಾಷ್ಟ್ರಪತಿ ವಿ.ವಿ. ಗಿರಿ ಅವರಿಂದ ಹಸ್ತಲಾಘವ



ಪ್ರಧಾನಿ ರಾಜೀವ್ ಗಾಂಧಿ ಅವರೊಂದಿಗೆ



ಪ್ರಧಾನಿ ಪಿ.ವಿ ನರಸಿಂಹರಾವ್ ಅವರಿಂದ ನೆನಪಿನ ಕಾಣಿಕೆ



ರಾಷ್ಟ್ರಪತಿ ಅಬ್ದುಲ್ ಕಾಲಂ ಅವರಿಂದ ಪ್ರಶಸ್ತಿ ಸ್ವೀಕಾರ



ಪ್ರಧಾನಿ ರಾಜೀವ್ ಗಾಂಧಿಯವರಿಂದ ಸ್ಮರಣಿಕೆ ಸ್ವೀಕಾರ